ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೦೯
ವಿಚಾರ ಸಾಹಿತ್ಯಮಾಲೆ – ೨೭
ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
**ಡಾ. ಪ್ರಧಾನ್ ಗುರುದತ್ತ**

ಸಂಪಾದಕರು
**ಡಾ. ಎ.ವಿ. ನರಸಿಂಹಮೂರ್ತಿ**

# ಗಾಂಧೀಜಿಯವರ ವ್ಯಕ್ತಿತ್ವ ಮತ್ತು ಜೀವನ ಧ್ಯೇಯ

## ಭವನದ ಗ್ರಂಥ ವಿಶ್ವವಿದ್ಯಾನಿಲಯ

ಮಾಲೆಯ
ಮೂಲ ಸಂಪಾದಕರು
**ಕೆ.ಎಂ. ಮುನ್ಷಿ**
**ಆರ್.ಆರ್. ದಿವಾಕರ್**

ವ್ಯವಸ್ಥಾಪಕ ಮಂಡಳಿ
**ಲೀಲಾವತಿ ಮುನ್ಷಿ** – ಅಧ್ಯಕ್ಷೆ
**ಕೆ.ಕೆ. ಬಿರ್ಲಾ** – ಸದಸ್ಯರು
**ಎಸ್.ಜಿ. ನೇವಾತಿಯ** – ಸದಸ್ಯರು
**ಜಿ.ಎಚ್. ದವೆ** – ಸದಸ್ಯರು
**ಎಸ್. ರಾಮಕೃಷ್ಣನ್** – ಸದಸ್ಯರು

**ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿ**

**ಎನ್. ರಾಮಾನುಜ** – ಅಧ್ಯಕ್ಷರು
(ಅಧ್ಯಕ್ಷರು, ವಿದ್ಯಾ ಭವನ, ಕರ್ನಾಟಕ)

**ಡಾ. ಮತ್ತೂರು ಕೃಷ್ಣಮೂರ್ತಿ**
(ಕಾರ್ಯಕಾರಿ ನಿರ್ದೇಶಕರು, ವಿದ್ಯಾ ಭವನ, ಬೆಂಗಳೂರು)
**ಎಚ್.ಎನ್. ಸುರೇಶ್**
(ನಿರ್ದೇಶಕರು, ಕಾರ್ಯಕ್ರಮ ಮತ್ತು ಯೋಜನೆಗಳು
ವಿದ್ಯಾ ಭವನ, ಬೆಂಗಳೂರು)
**ಡಾ. ಎ.ವಿ. ನರಸಿಂಹಮೂರ್ತಿ**
(ಅಧ್ಯಕ್ಷರು, ವಿದ್ಯಾ ಭವನ, ಮೈಸೂರು)

# ಗಾಂಧೀಜಿಯವರ ವ್ಯಕ್ತಿತ್ವ ಮತ್ತು ಜೀವನ ಧ್ಯೇಯ

**ಆನೋ ಭದ್ರಾಃ ಕ್ರತವೋ ಯನ್ತು ವಿಶ್ವತಃ**
(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)
**–ಋಗ್ವೇದ, I. ೮೯–೧**

ಮೂಲ
**ನಿರ್ಮಲ್ ಕುಮಾರ್ ಬೋಸ್**

ಅನುವಾದ
**ನೀಲತ್ತಹಳ್ಳಿ ಕಸ್ತೂರಿ**

**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ,** ಬೆಂಗಳೂರು
ಮತ್ತು
**ಭಾರತೀಯ ವಿದ್ಯಾ ಭವನ,** ಮೈಸೂರು

**Gandhijiyavara Vyaktitva mattu Jivanadhyeya :** Kannada translation of *Gandhiji: The Man and His Mission* by **Nirmal Kumar Bose;** Kannada translation by **Sri Nilattahalli Kasturi**; Editor-in-Chief: **Dr. Pradhan Gurudatta;** Editor of the series : **Dr. A.V. Narasimha Murthy;** published under the joint auspices of **Kuvempu Bhasha Bharati Pradhikara**, Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharatiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara: 2010; Pp. xxii + 38 ; Price: Rs. 10/-

© ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಮತ್ತು
ಭಾರತೀಯ ವಿದ್ಯಾ ಭವನ, ಮೈಸೂರು

ಮುದ್ರಣ : ೨೦೧೦
ಪುಟಗಳು : xxii + ೩೮
ಬೆಲೆ : ರೂ. ೧೦/-

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಭೇದಾರ್‌ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೭೨೪



**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು – ೫೬೦ ೦೦೧
ದಿನಾಂಕ : ೫–೮–೨೦೦೯
ಸಿಎಂ/ಪಿಎಸ್/೧೪೭/೦೯

## ಮೊದಲ ಮಾತು

ಕನ್ನಡ ನಾಡಿನ ಹೆಮ್ಮೆಯ ಮಹಾಕವಿ ಶ್ರೀ ಕುವೆಂಪು ಅವರು ಕನ್ನಡದ ಕೀರ್ತಿಯನ್ನು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಎತ್ತಿ ಹಿಡಿದ ಮಹಾಚೇತನ. ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸಂಸ್ಥಾಪಿಸಿರುವ **'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'** ರಾಷ್ಟ್ರೀಯ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಬೇಕೆಂಬುದು ಸರ್ಕಾರದ ಸದಾಶಯ. ಬೆಂಗಳೂರು **'ಜ್ಞಾನಭಾರತಿ'** ಆವರಣದಲ್ಲಿ ನಿರ್ಮಿಸಲಾಗಿರುವ ಬೃಹತ್ ಭವನದ ಸಮುಚ್ಚಯದಲ್ಲಿ ಶಿಕ್ಷಣ, ತರಬೇತಿ ಮತ್ತು ಪ್ರಕಟಣೆಗಳ ರೂಪದಲ್ಲಿ ಬಹು–ಆಯಾಮದ ಅದರ ಚಟುವಟಿಕೆಗಳು ಅರಳಿನಿಲ್ಲಲಿವೆ.

ಅದು ಆರಂಭಿಸಲಿರುವ ಭಾಷಾಂತರ ಮತ್ತು ತೌಲನಿಕ ಸಾಹಿತ್ಯ ಸಂಬಂಧವಾದ ವಿಶಿಷ್ಟ ಶಿಕ್ಷಣಗಳು ಆಡಳಿತ ಕ್ಷೇತ್ರ, ನ್ಯಾಯಾಂಗ ಕ್ಷೇತ್ರ ಮತ್ತು ಶಿಕ್ಷಣ ಕ್ಷೇತ್ರಗಳಿಗೆ ಪೂರಕವಾಗಿ, ಕನ್ನಡವನ್ನು ಸರ್ವತೋಮುಖವಾಗಿ ಬೆಳೆಸಲು ಸಹಾಯಕವಾಗಲಿವೆ.

ಭಾರತೀಯ ಭಾಷಾ–ಸಾಹಿತ್ಯಗಳ ಉತ್ತಮೋತ್ತಮ ಕೃತಿಗಳನ್ನು ಮಾತ್ರವಲ್ಲದೆ, ವಿಶ್ವಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳನ್ನು ಜಾಗತಿಕ ಸಾಹಿತ್ಯಕ್ಕೆ ಪರಿಚಯಿಸಿಕೊಡುವ ಕರ್ತವ್ಯದ ಜೊತೆಗೆ, ಜ್ಞಾನ–ವಿಜ್ಞಾನ ಮತ್ತು ತಂತ್ರಜ್ಞಾನದ ಮಹತ್ವದ ಕೃತಿಗಳನ್ನು ಕನ್ನಡಕ್ಕೆ ತರುವ ಮಹತ್ತರ ಕಾರ್ಯವನ್ನೂ ಅದು ಹಮ್ಮಿಕೊಳ್ಳಬೇಕಾದ ಅಗತ್ಯವಿದೆ.

ನಾಡಿನ ಶ್ರೇಷ್ಠ ವಿದ್ವಾಂಸರ ಸಲಹೆ–ಸೂಚನೆ–ಮಾರ್ಗದರ್ಶನಗಳ ಬೆಳಕಿನಲ್ಲಿ ಅದರ ಕೆಲಸ ಕಾರ್ಯಗಳು ಆದರ್ಶಪ್ರಾಯವಾಗಿ ಮೂಡಿಬರಲಿ ಹಾಗೂ ಇದೊಂದು ವಿಶಿಷ್ಟ ಸಂಸ್ಥೆಯಾಗಿ ದೇಶ–ವಿದೇಶಗಳ ಗಮನವನ್ನೂ ಸೆಳೆಯುವಂತಾಗಲಿ ಎಂದು ಹಾರೈಸುತ್ತೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳಲ್ಲಿ ಆಸಕ್ತರೆಲ್ಲರೂ ಪಾಲ್ಗೊಳ್ಳಬೇಕೆಂಬ, ಇದರ ಪ್ರಕಟಣೆಗಳನ್ನು ಜನಸಮುದಾಯ ಆದರ–ವಿಶ್ವಾಸಗಳಿಂದ ಸ್ವೀಕರಿಸುವರೆಂಬ ಆಶಯ ನಮ್ಮದಾಗಿದೆ.

ಭಾರತೀಯ ವಿದ್ಯಾಭವನದಂಥ ರಾಷ್ಟ್ರೀಯ ಮಹತ್ವದ ಸಂಸ್ಥೆಯ ಸಹಯೋಗದೊಂದಿಗೆ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾಲಯ ಮಾಲೆಯ ಪುಸ್ತಕಗಳನ್ನು ಹೊರತರುವ ಯೋಜನೆಯನ್ನು ಹಾಕಿಕೊಂಡಿರುವುದು ಸಂತೋಷದ ಬೆಳವಣಿಗೆಯೇ ಆಗಿದೆ. ಈ ಮಾಲೆಯ ಪುಸ್ತಕಗಳು ಕುವೆಂಪು ಭಾಷಾ ಭಾರತಿ ಮತ್ತು ಭಾರತೀಯ ವಿದ್ಯಾಭವನದ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದೂ ಸಂತೋಷದ ಸಂಗತಿಯೇ ಆಗಿದೆ.

(ಬಿ.ಎಸ್.ಯಡಿಯೂರಪ್ಪ)

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ, ಸಣ್ಣ ನೀರಾವರಿ ಹಾಗೂ
ಜವಳಿ ಸಚಿವರು

ವಿಧಾನ ಸೌಧ
ಬೆಂಗಳೂರು – ೦೧

## ಶುಭಾಕಾಂಕ್ಷೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಈಗಾಗಲೇ ಖ್ಯಾತಿಯನ್ನು ಗಳಿಸಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ಸಾಹಿತ್ಯಿಕ, ಐತಿಹಾಸಿಕ, ವೈಜ್ಞಾನಿಕ ಮತ್ತು ಇತರ ಗ್ರಂಥಗಳನ್ನು ಪ್ರಕಟಿಸುವ ಮೂಲಕ ಮತ್ತು ರಾಷ್ಟ್ರೀಯ ವಿಚಾರಸಂಕಿರಣಗಳನ್ನು ಏರ್ಪಡಿಸುವ ಮೂಲಕ ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಿ ಬೆಳೆಯುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಗಳನ್ನು ಇಡುತ್ತಿರುವುದು ನನಗೆ ತುಂಬ ಸಂತೋಷವನ್ನು ತಂದುಕೊಟ್ಟಿದೆ. ಈ ಮೂಲಕ ಕನ್ನಡ ನಾಡಿನ ಜನತೆಗೆ ಈಗಾಗಲೇ ಮಹತ್ವದ ಕೃತಿಗಳು ಕನ್ನಡದಲ್ಲಿ ದೊರೆಯುವಂತಾಗಿಸುವುದು ಮಾತ್ರವಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳ ಪರಿಚಯ ಇತರ ಭಾಷಾ ಬಾಂಧವರಿಗೂ ಆಗುವಂತೆ ಮಾಡುವ ದಿಕ್ಕಿನಲ್ಲಿ ಈ ಸಂಸ್ಥೆ ಕಾರ್ಯೋನ್ಮುಖವಾಗಬೇಕಾಗಿದೆ. ಈ ಕಾರ್ಯದಲ್ಲಿ ನಾಡಿನ ಖ್ಯಾತ ಲೇಖಕರು, ವಿದ್ವಾಂಸರು, ವಿಮರ್ಶಕರು ಸಹಕರಿಸುತ್ತಿರುವುದು ವಿಶೇಷ ಸಂಗತಿಯೇ ಆಗಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಆಶ್ರಯದಲ್ಲಿ ಮುಂದಿನ ದಿನಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳು ಪ್ರಾರಂಭವಾಗಲಿರುವುದು ಸಂತೋಷದ ಸಂಗತಿ. ನಮ್ಮ ತರುಣ ಜನಾಂಗವನ್ನು ಈ ಸಾಹಿತ್ಯಿಕ–ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಿದ್ಧಗೊಳಿಸುವ ಕಾರ್ಯ ಇದರ ಮೂಲಕ ನಡೆಯುತ್ತದೆ ಎಂದು ನಂಬಿದ್ದೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಕ್ರಮಗಳಲ್ಲಿ ನಾಡಿನ ಜನತೆ ಸಕ್ರಿಯವಾಗಿ ಭಾಗವಹಿಸಲಿ ಎಂದು ಹಾರೈಸುತ್ತೇನೆ.

**ಗೋವಿಂದ ಎಂ. ಕಾರಜೋಳ**



ಕರ್ನಾಟಕ ಸರ್ಕಾರ

**ರಮೇಶ್ ಬಿ.ಝಳಕಿ,** ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ
ವಾರ್ತಾ ಇಲಾಖೆ

ವಿಕಾಸ ಸೌಧ
ಬೆಂಗಳೂರು – ೦೧

## ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಂದ ನಮ್ಮ ನಾಡಿನ ಜನಸಮುದಾಯದ ಗಮನವನ್ನು ಸೆಳೆಯುವ ದಿಕ್ಕಿನಲ್ಲಿ ಮುನ್ನಡೆಯುತ್ತಿರುವುದು ತುಂಬ ಸಂತೋಷದ ಸಂಗತಿಯೇ ಆಗಿದೆ. ಪ್ರಾಧಿಕಾರದ ಒಂದು ಭಾಗವೇ ಆಗಿ ಕಲ್ಪಿಸಿಕೊಳ್ಳಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಕಾರ್ಯಚಟುವಟಿಕೆಗಳ ಅಂಗವಾಗಿ ಹೊರತರಲಾಗಿದ್ದ ಸುಮಾರು ೬೦ ಗ್ರಂಥಗಳ ಜೊತೆಗೆ, ಪ್ರಾಧಿಕಾರ ಮತ್ತಷ್ಟು ಮಹತ್ವಪೂರ್ಣ ಗ್ರಂಥಗಳನ್ನು ಹೊರತರುತ್ತಿದ್ದು, ಸದ್ಯದಲ್ಲಿಯೇ ಈ ಸಂಖ್ಯೆ ನೂರರ ಗಡಿಯನ್ನು ದಾಟಲಿದೆ. 'ಭಾರತೀಯ ವಿದ್ಯಾಭವನ'ದಂಥ ರಾಷ್ಟ್ರೀಯ ಸಂಸ್ಥೆಯೊಂದಿಗೆ ಸಂಯುಕ್ತ ಕಾರ್ಯಕ್ರಮವನ್ನು ಏರ್ಪಡಿಸಿಕೊಂಡು ಪ್ರಾಧಿಕಾರ ಮುನ್ನಡೆಯಲಿರುವುದು ಪ್ರಾಧಿಕಾರದ ಚಟುವಟಿಕೆಗಳಿಗೆ ಹೊಸ ಆಯಾಮವನ್ನೇ ನೀಡಲಿದೆ ಎಂದು ನಂಬಿದ್ದೇನೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ೧೪ ಸಂಪುಟಗಳ ಕನ್ನಡ ಅನುವಾದದ ಪರಿಷ್ಕರಣ, ೧೫ ರಿಂದ ಮುಂದಿನ ಸಂಪುಟಗಳ ಅನುವಾದ ಕಾರ್ಯ, ಪಂಡಿತ್ ದೀನ್‌ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡ ಅನುವಾದದ ಪ್ರಕಟಣೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರ ಸಂಚಯಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳ ಪ್ರಕಟಣೆ – ಇವೇ ಮೊದಲಾದ ಮಹತ್ವದ ಕಾರ್ಯಕ್ರಮಗಳನ್ನು ಈ ಪ್ರಾಧಿಕಾರ ಹಮ್ಮಿಕೊಂಡಿರುವುದು ಸ್ತುತ್ಯರ್ಹವಾದ ಸಂಗತಿಯೇ ಆಗಿದೆ. 'ಕಾವೇರಿ ನ್ಯಾಯಾಧಿಕರಣ'ದ ತೀರ್ಪಿನ ಕನ್ನಡ ಆವೃತ್ತಿಯೂ ಸದ್ಯದಲ್ಲಿಯೇ ಹೊರಬರಲಿದೆ. ವೈಜ್ಞಾನಿಕ, ತಾಂತ್ರಿಕ ಮತ್ತು ವೈದ್ಯಕೀಯ ಸಾಹಿತ್ಯ ಪ್ರಕಟಣೆಯತ್ತಲೂ ಪ್ರಾಧಿಕಾರ ಗಮನಹರಿಸಿದೆ. ಪ್ರಾಧಿಕಾರದ ಮುನ್ನಡೆಗೆ ಕರ್ನಾಟಕ ಸರ್ಕಾರದ ಎಲ್ಲ ಬಗೆಯ ನೆರವೂ ಲಭಿಸಲಿದೆ.

ಈ ಎಲ್ಲ ಚಟುವಟಿಕೆಗಳು ಕನ್ನಡಿಗರ ಆದರ, ಮೆಚ್ಚಿಕೆ, ಸಂತೋಷಗಳಿಗೆ ಪಾತ್ರವಾಗುತ್ತದೆಂದು ನಂಬಿದ್ದೇನೆ.

(ರಮೇಶ್ ಬಿ.ಝಳಕಿ)

ಕರ್ನಾಟಕ ಸರ್ಕಾರ

**ಮನು ಬಳಿಗಾರ್**
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

ದಿನಾಂಕ : ೦೭.೦೮.೨೦೦೮

# ಪ್ರಾಸ್ತಾವಿಕ ನುಡಿ

ಕುವೆಂಪು ಭಾಷಾ ಭಾರತಿ ಅಂಗವಾಗಿ ಕರ್ನಾಟಕ ಸರ್ಕಾರ ೨೦೦೫ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕೇವಲ ಮೂರು ವರ್ಷಗಳಲ್ಲಿ ಮಾಡಿರುವ ವೈವಿಧ್ಯಮಯವಾದ ಕಾರ್ಯವನ್ನು ನಾನು ಗಮನಿಸಿದ್ದೇನೆ. ಕುವೆಂಪು ಭಾಷಾ ಭಾರತಿಯ ಕಟ್ಟಡ ಸಮುಚ್ಚಯದ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಸನ್ಮಾನ್ಯ ಮುಖ್ಯಮಂತ್ರಿಗಳು ಅದರ ಉದ್ಘಾಟನ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ. ವೈವಿಧ್ಯಮಯವಾದ ಮತ್ತು ವ್ಯಾಪಕವಾದ ಕಾರ್ಯಯೋಜನೆಗಳನ್ನು, ಧ್ಯೇಯೋದ್ದೇಶಗಳನ್ನು ಹೊಂದಿರುವ ಕುವೆಂಪು ಭಾಷಾ ಭಾರತಿ ಕುವೆಂಪು ಅವರ ಹೆಸರಿನಲ್ಲಿಯೇ ಸ್ಥಾಪಿತವಾಗಿದ್ದರೂ ಕುವೆಂಪು ಸಾಹಿತ್ಯದ ಪ್ರಚಾರ ಪ್ರಸಾರಗಳಿಗೆ ಮಾತ್ರವೇ ಸೀಮಿತವಾಗಿರುವುದಿಲ್ಲ. ಕುವೆಂಪು ಮಾಡಿರುವ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿ ಈ ಸಂಸ್ಥೆಗೆ ಆ ಹೆಸರನ್ನು ಕೊಡಲಾಗಿದೆ. ಕನ್ನಡ ಭಾಷಾ ಸಾಹಿತ್ಯಗಳ ಹಿರಿಯ ಸಾಧನೆಯನ್ನು ಕನ್ನಡೇತರರಿಗೆ, ದೇಶ–ವಿದೇಶಗಳ ಸಾಹಿತ್ಯಿಕ ಸಾಧನೆಯನ್ನು ಕನ್ನಡಿಗರಿಗೆ ಪರಿಚಯಿಸಿಕೊಡುವುದಲ್ಲದೆ, ಸಾಹಿತ್ಯ, ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳ ವಿವಿಧ ಕ್ಷೇತ್ರಗಳಲ್ಲಿನ ಸಾಧನೆಗೆ ಕನ್ನಡವನ್ನು ಅಣಿಗೊಳಿಸುವ ಧ್ಯೇಯವನ್ನೂ ಇದು ಇರಿಸಿಕೊಂಡಿದೆ. ಹೀಗೆ ಇದು ಸರ್ವಭಾಷೆಗಳ ಸಾಮರಸ್ಯದ ಪ್ರತೀಕವಾದ ಸಾಹಿತ್ಯಿಕ ಸಂಸ್ಥೆಯಾಗಿ ಕೆಲಸ ಮಾಡಲಿದೆ. ಭಾಷಾಂತರ ಶಿಕ್ಷಣ, ವಿದೇಶ ಭಾಷೆಗಳ ಶಿಕ್ಷಣ, ತೌಲನಿಕ ಸಾಹಿತ್ಯಾಧ್ಯಯನ, ತರಬೇತಿ ಕಾರ್ಯಕ್ರಮಗಳು, ಪ್ರಕಟಣೆಗಳು – ಹೀಗೆ ಬಹುಮುಖವಾದ ಕಾರ್ಯಚಟುವಟಿಕೆಗಳಿಂದ ಕುವೆಂಪು ಭಾಷಾ ಭಾರತಿ ನಾಡಿನ ಹೆಮ್ಮೆಯ ಸಂಸ್ಥೆಯಾಗಿ ಬೆಳೆದು ಬರಬೇಕೆಂಬ ಆಶಯವನ್ನು ಇರಿಸಿಕೊಳ್ಳಲಾಗಿದೆ. ಕುವೆಂಪು ಭಾಷಾ ಭಾರತಿಯ ಅಂಗವಾಗಿ ಈ ಹಿಂದೆ ಸ್ಥಾಪಿತವಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕುವೆಂಪು ಭಾಷಾ ಭಾರತಿಯಲ್ಲಿ ಈಗ ವಿಲೀನಗೊಂಡಿದ್ದು, ಹೆಚ್ಚಿನ ವೈವಿಧ್ಯ ಮತ್ತು ವ್ಯಾಪ್ತಿಯ ಕಾರ್ಯಕ್ರಮಗಳಲ್ಲಿ ಅದು ತನ್ನನ್ನು ತೊಡಗಿಸಿಕೊಳ್ಳಲಿದೆ. ಈ ಅಕಾಡೆಮಿಯ ಮೂರು ವರ್ಷಗಳ ಅಲ್ಪಾವಧಿಯಲ್ಲಿ ಅಭಿನಂದನೀಯವಾದ ಕಾರ್ಯವನ್ನು ಮಾಡಿದ ಹಿರಿಯ ಬಹುಭಾಷಾ ವಿದ್ವಾಂಸರಾದ ಡಾ. ಪ್ರಧಾನ್ ಗುರುದತ್ತ ಅವರನ್ನು ಕುವೆಂಪು ಭಾಷಾ ಭಾರತಿಯ ಪ್ರಥಮಾಧ್ಯಕ್ಷರಾಗಿ ಕರ್ನಾಟಕ ಸರ್ಕಾರ ನೇಮಕ ಮಾಡಿದ್ದು,



ಅವರು ಈ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಈಡೇರಿಸಲು ಸಂಕಲ್ಪಬದ್ಧರಾಗಿದ್ದಾರೆ ಎಂದು ನಾನು ಭಾವಿಸಿದ್ದೇನೆ.

ಕುವೆಂಪು ಭಾಷಾ ಭಾರತಿ ತನ್ನ ವಿಶಿಷ್ಟ ಕಾರ್ಯಚಟುವಟಿಕೆಗಳಿಂದ ಕನ್ನಡಿಗರ ಮೆಚ್ಚಿನ ಸಾಹಿತ್ಯಿಕ – ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ. ಸಂಸ್ಥೆಯ ಉದ್ಘಾಟನೆಯ ಹೊತ್ತಿಗೆ ಅದರ ಅನೇಕ ಪ್ರಕಟಣೆಗಳು ಹೊರತರುತ್ತಿರುವುದು ಅದರ ಕಾರ್ಯಚಟುವಟಿಕೆಗಳ ಪ್ರತೀಕವಾಗಿದೆ. ಈ ಸಂಸ್ಥೆ ಇತೋಪ್ಯತಿಶಯವಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

ಭಾರತೀಯ ಸಂಸ್ಕೃತಿ, ಇತಿಹಾಸ ಸಾಹಿತ್ಯಕ ಕ್ಷೇತ್ರಗಳಿಗೆ ತನ್ನ ಪ್ರಕಟಣೆಗಳ ಮೂಲಕ ಹಾಗೂ ಶೈಕ್ಷಣಿಕ ಕಾರ್ಯಗಳ ಮುಖೇನ ಸ್ಮರಣೀಯ ಸೇವೆಯನ್ನು ಸಲ್ಲಿಸುವ ಮೂಲಕ ಭಾರತೀಯ ವಿದ್ಯಾಭವನ ನಾಡಿನ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಒಂದಾಗಿ ಪರಿಣಮಿಸಿದೆ. 'ಹಿಸ್ಟರಿ ಅಂಡ್ ಕಲ್ಚರ್ ಆಫ್ ದಿ ಇಂಡಿಯನ್ ಪೀಪಲ್' ಮಾಲೆಯ ಸಂಪುಟಗಳ ಮೂಲಕ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಗಳ ನೈಜ ಚಿತ್ರಣವನ್ನು ಮುಂದಿರಿಸಿದ ಹಿರಿಮೆಯೂ ಅದರದಾಗಿದೆ. ಜನಸಾಮಾನ್ಯರನ್ನು ದೃಷ್ಟಿಯಲ್ಲಿರಿಸಿಕೊಂಡು ರಚಿಸಲಾದ ಅದರ 'ಬುಕ್ ಯೂನಿವರ್ಸಿಟಿ' ಮಾಲೆಯ ಪುಸ್ತಕಗಳ ಕನ್ನಡ ಆವೃತ್ತಿ ಭಾರತೀಯ ವಿದ್ಯಾಭವನ ಮತ್ತು ಕುವೆಂಪು ಭಾಷಾ ಭಾರತಿಯ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದು ವೈಯಕ್ತಿಕವಾಗಿಯೂ ನನಗೆ ಸಂತೋಷ ಸಮಾಧಾನಗಳನ್ನು ತಂದಿದೆ. ಈ ಪುಸ್ತಕಗಳನ್ನು ಕನ್ನಡ ಜನತೆ ಎಂದಿನಂತೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

(ಮನು ಬಳಿಗಾರ್)

## ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದವು. ದೇಶ–ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು. ಶ್ರೀ ಕುವೆಂಪು ಅವರ ಶೈಕ್ಷಣಿಕ–ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ.ದೇ.ಜವರೇಗೌಡ ಅವರು, 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ–ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ–ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ಬೆಂಗಳೂರು ವಿಶ್ವವಿದ್ಯಾನಿಲಯದ ಜ್ಞಾನಭಾರತಿ ಆವರಣದಲ್ಲಿ ಎರಡು ಎಕರೆಗಳಷ್ಟು ವಿಶಾಲವಾದ ಸ್ಥಳದಲ್ಲಿ 'ಕುವೆಂಪು ಭಾಷಾ ಭಾರತಿ'ಯ ಕಟ್ಟಡದ ಶಿಲಾನ್ಯಾಸ ಕಾರ್ಯಕ್ರಮ ದಿನಾಂಕ:೧೧.೦೯.೨೦೦೫ರಂದು ಅಂದಿನ ಮಾನ್ಯ



ಮುಖ್ಯಮಂತ್ರಿಗಳಾಗಿದ್ದ ಶ್ರೀ ಎನ್.ಧರ್ಮಸಿಂಗ್ ಅವರಿಂದ ನೆರವೇರಿತು. 'ವಿಶ್ವಚೇತನ' ಮತ್ತು 'ಕಾಜಾಣ' ಎಂದು ಹೆಸರಿಸಲಾಗಿರುವ ಎರಡು ಬೃಹತ್ ಕಟ್ಟಡಗಳ ಸಮುಚ್ಚಯವನ್ನು ಒಳಗೊಂಡಿರುವ ಕುವೆಂಪು ಭಾಷಾ ಭಾರತಿಯ ಕಟ್ಟಡದ ನಿರ್ಮಾಣಕ್ಕೆ ಸುಮಾರು ಎರಡೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದ್ದು, ೨೦೦೯ರಲ್ಲಿ ಇದರ ಕಾಮಗಾರಿ ಪೂರ್ಣಗೊಂಡಿದೆ. ಇದೇ ದಿನಾಂಕ:೧೯.೦೮.೨೦೦೯ರ ಬೆಳಗ್ಗೆ ೧೧.೦೦ ಗಂಟೆಗೆ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪ ಅವರು ಈ ಕಟ್ಟಡ–ಸಮುಚ್ಚಯದ ಉದ್ಘಾಟನ ಸಮಾರಂಭವನ್ನು ಹಾಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆಗಳ ಮೊದಲ ಕಂತಿನ ಹತ್ತು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳ ಸ್ವರೂಪ ಮೂರು ಮುಖದ್ದಾಗಿರುತ್ತದೆ :

(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು
(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು
(ಇ) ಪ್ರಕಟಣೆಗಳು

**(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು :**

(i) "ಕನ್ನಡ ಸಾಹಿತ್ಯ ಹಿರಿಮೆ–ಗರಿಮೆಗಳಲ್ಲಿ ಯಾವ ಭಾರತೀಯ ಸಾಹಿತ್ಯಕ್ಕೂ ಕಡಿಮೆಯಾಗಿಲ್ಲ. ಅದರ ಮಹತ್ವವನ್ನು ಎತ್ತಿತೋರಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಅಷ್ಟೇ" ಎಂಬುದಾಗಿ ಕುವೆಂಪು ಅವರು ಉದ್ಘೋಷಿಸಿದ್ದರು. ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳ ಅಂಗವಾಗಿ ಅನುವಾದ, ತೌಲನಿಕ ಸಾಹಿತ್ಯ, ವಿದೇಶಿ ಭಾಷೆಗಳ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಶಿಕ್ಷಣ ಕ್ರಮಗಳನ್ನು ಆರಂಭಿಸಬೇಕೆಂದು ಯೋಜಿಸಲಾಗಿದೆ :

(೧) ಭಾಷಾಂತರ ಡಿಪ್ಲೊಮಾ ಶಿಕ್ಷಣ – ಮೊದಲ ಹಂತದಲ್ಲಿ ಇಂಗ್ಲಿಷ್, ಹಿಂದೀ, ಕನ್ನಡ, ತೆಲುಗು, ತಮಿಳು, ಮಲಯಾಳಂ, ಬಂಗಾಳಿ, ಮರಾಠಿ ಭಾಷೆಗಳಲ್ಲಿ ವಿಶೇಷ ತರಬೇತಿಗೆ ಒತ್ತುಕೊಟ್ಟು ಈ ಶಿಕ್ಷಣವನ್ನು ಪ್ರಾರಂಭಿಸಲಾಗುತ್ತದೆ.
(೨) ಭಾಷಾಂತರದಲ್ಲಿ ಎಂ.ಫಿಲ್ ಶಿಕ್ಷಣ : ವಿಶೇಷ ವಿಷಯಕ್ಕೆ ಒತ್ತುಕೊಟ್ಟು
(೩) ಪತ್ರಿಕೋದ್ಯಮ ಮತ್ತು ಭಾಷಾಂತರ
(೪) ಕಾನೂನುಶಾಸ್ತ್ರ, ಆಡಳಿತ ಭಾಷೆ ಮತ್ತು ಭಾಷಾಂತರ
(೫) ವಿಜ್ಞಾನ ಮತ್ತು ಮಾನವಿಕಶಾಸ್ತ್ರ ಕೃತಿಗಳು ಮತ್ತು ಭಾಷಾಂತರ ; ಮತ್ತು
(೬) ತೌಲನಿಕ ಸಾಹಿತ್ಯ
(೭) ವಿದೇಶೀ ಭಾಷೆಗಳ ಶಿಕ್ಷಣ (ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ)

(ii) ಕನ್ನಡ ಸಾಹಿತ್ಯವನ್ನು ವಿಶ್ವಸಾಹಿತ್ಯದ ಮಟ್ಟದಲ್ಲಿ ಪ್ರಚುರಪಡಿಸಬೇಕಾದರೆ – ಜಾಗತಿಕ ಪ್ರಾಚುರ್ಯದ ವಿದೇಶಿ ಭಾಷೆಗಳಿಗೆ ಕನ್ನಡದ ಶ್ರೇಷ್ಠ ಕೃತಿಗಳನ್ನು

ಕೊಂಡೊಯ್ಯುವ ಮಹತ್ವದ ಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ. ಹೀಗಾಗಿ ಮೊದಲ ಹಂತದಲ್ಲಿ ಸ್ಪ್ಯಾನಿಷ್, ಜಪಾನಿ, ಫ್ರೆಂಚ್, ರಷ್ಯನ್, ಜರ್ಮನ್, ಚೀಣೀ, ಆಫ್ರಿಕನ್ ಭಾಷೆಗಳು – ಈ ಎಲ್ಲ ಶಿಕ್ಷಣಗಳಿಗೆ ಸಂಬಂಧಿಸಿದಂತೆ, ತಜ್ಞರೊಂದಿಗೆ ಸಮಾಲೋಚಿಸಿ ಕಾರ್ಯಕ್ರಮಗಳನ್ನು ರೂಪಿಸುವುದು, ಶಿಕ್ಷಣಕ್ಕೆ ಮತ್ತು ತರಬೇತಿಗೆ ವ್ಯವಸ್ಥೆಯನ್ನು ಕಲ್ಪಿಸುವುದು ಮೊದಲಾದ ಕಾರ್ಯಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಲಾಗುತ್ತದೆ. ವಿದೇಶಿ ದೂತಾವಾಸಗಳ ನೆರವಿನೊಂದಿಗೆ ಈ ಶಿಕ್ಷಣ ಕ್ರಮಗಳನ್ನು ಯೋಜಿಸಲಾಗುತ್ತದೆ.

ವಿವಿಧ ಭಾಷೆಗಳಲ್ಲಿ ಪರಿಣತಿಯನ್ನು ಪಡೆದಿರುವಂಥ ತರುಣ ಪ್ರತಿಭೆಗಳನ್ನು ಗುರುತಿಸಿ, ಅವರಿಗೆ ತರಬೇತಿ ನೀಡಿ ಪ್ರಕಟಣಾವಕಾಶಗಳನ್ನು ಕಲ್ಪಿಸಿಕೊಡಲು ಅನುಕೂಲವಾಗುವಂತೆ ವಿಚಾರಗೋಷ್ಠಿಗಳು, ವಿಚಾರಸಂಕಿರಣಗಳು, ಕಾರ್ಯಶಿಬಿರಗಳು ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಕುವೆಂಪು ಅವರು ಸಾಹಿತ್ಯ ಮತ್ತು ವಿಜ್ಞಾನ–ತಂತ್ರಜ್ಞಾನಗಳನ್ನು ಮಾನವ ಸಂಸ್ಕೃತಿಯ ಕಣ್ಣುಗಳೆಂದೇ ಭಾವಿಸಿದ್ದವರು. ಹೀಗಾಗಿ, ಜ್ಞಾನದ ಇತರ ಕ್ಷೇತ್ರಗಳತ್ತಲೂ ಕುವೆಂಪು ಭಾಷಾಭಾರತಿ ಕೈಚಾಚಲಿದೆ. ಈ ದೃಷ್ಟಿಯಲ್ಲಿ ಕನ್ನಡವನ್ನು ಸರ್ವಾಂಗ ಸಮೃದ್ಧವಾಗಿ ಬೆಳೆಸುವ ಅವರ ಆಶಯ ಕಾರ್ಯರೂಪಕ್ಕೆ ಬರಬಹುದಾಗಿದೆ.

ಕೇಂದ್ರ ಸರ್ಕಾರದ ರಾಷ್ಟ್ರೀಯ ಅನುವಾದ ಮಿಶನ್ ಯೋಜನೆ ಕಾರ್ಯರೂಪಕ್ಕೆ ಬರಲಿರುವ ಹಿನ್ನೆಲೆಯಲ್ಲಿ, ಇಂಥ ಶಿಕ್ಷಣಗಳನ್ನು ಪ್ರಾರಂಭಿಸುವುದಕ್ಕೆ ಹೆಚ್ಚಿನ ಅರ್ಥ ಮತ್ತು ಔಚಿತ್ಯ ದೊರೆಯುವಂತಾಗುತ್ತದೆ.

**(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು :**

ಕೇಂದ್ರ ಸಾಹಿತ್ಯ ಅಕಾಡೆಮಿ ರವೀಂದ್ರನಾಥ ಠಾಗೂರ್ ಅವರ ಪ್ರಾತಿನಿಧಿಕ ಸಂಕಲನಗಳನ್ನೊಳಗೊಂಡ 'ರವೀಂದ್ರ ಸಂಚಯ'ವನ್ನು ಹೊರತಂದಿರುವ ರೀತಿಯಲ್ಲಿಯೇ 'ಕುವೆಂಪು ಸಂಚಯ' ಮತ್ತು 'ಪು.ತಿ.ನ ಸಂಚಯ'ಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ಹೊರತರಲಾಗುತ್ತದೆ. ಮುಂಬರುವ ದಿನಗಳಲ್ಲಿ ಜಿ.ಎಸ್.ಶಿವರುದ್ರಪ್ಪ ಮೊದಲಾದ ಕನ್ನಡದ ಮಹತ್ವದ ಕವಿಗಳ ಸಂಕಲನಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ತರುವ ಯೋಜನೆಗಳನ್ನು ಹಾಕಿಕೊಳ್ಳಲಾಗುತ್ತದೆ. ಇದೇ ರೀತಿಯಲ್ಲಿ ಭಾರತೀಯ ಜ್ಞಾನಪೀಠ ಮತ್ತು ಇತರ ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಗಳಿಸಿರುವ ಶ್ರೇಷ್ಠ ಸಾಹಿತಿಗಳ ಪ್ರಾತಿನಿಧಿಕ ರಚನೆಗಳನ್ನು ಒಳಗೊಂಡ ಸಂಚಯ ಕೃತಿಗಳನ್ನು ಹೊರತರಲೂ ಕ್ರಮ ಕೈಗೊಳ್ಳಲಾಗುತ್ತದೆ. ಉದಾ: ಮೈಥಿಲಿ ಶರಣಗುಪ್ತ ಸಂಚಯ, ಜಯಶಂಕರ ಪ್ರಸಾದ್ ಸಂಚಯ (ಹಿಂದೀ), ವಿಶ್ವನಾಥ ಸಂಚಯ (ತೆಲುಗು), ಆಶಾಪೂರ್ಣದೇವಿ ಸಂಚಯ (ಬಂಗಾಳಿ), ಶಿವಶಂಕರ ಪಿಳ್ಳೈ ಮತ್ತು ಎಂ.ಟಿ.ವಾಸುದೇವ ನಾಯರ್ ಸಂಚಯ (ಮಲಯಾಳಂ) ಇತ್ಯಾದಿ.

ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮತ್ತು ಜಾಗತಿಕ ಸ್ತರಗಳಲ್ಲಿ ಪ್ರಚುರಪಡಿಸಲು ವಿಚಾರಗೋಷ್ಠಿಗಳನ್ನು ಸಮಾರಂಭಗಳನ್ನು ಏರ್ಪಡಿಸುವಂತೆಯೇ, ಇತರ ಭಾರತೀಯ ಭಾಷಾಸಾಹಿತ್ಯ ಮತ್ತು ವಿಶ್ವಸಾಹಿತ್ಯಕ್ಕೆ ಸಂಬಂಧಪಟ್ಟಂತಹ ಇದೇ ಬಗೆಯ ಅರ್ಥಪೂರ್ಣ ಕಾರ್ಯಕ್ರಮಗಳನ್ನೂ ರೂಪಿಸಲಾಗುತ್ತದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಧ್ಯೇಯೋದ್ದೇಶಗಳಿಗೆ



ಪೂರಕವೂ–ಪ್ರೇರಕವೂ ಆಗುವಂತೆ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಅಂತೆಯೇ, ರಾಷ್ಟ್ರಮಟ್ಟದ ಸಾಹಿತ್ಯಿಕ ಸಂಘ–ಸಂಸ್ಥೆಗಳಾಗಿರುವ ಕೇಂದ್ರ ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್, ಬಿರ್ಲಾ ಪ್ರತಿಷ್ಠಾನ ಮೊದಲಾದವುಗಳಲ್ಲಿನ ಕಾರ್ಯಕ್ರಮಗಳ ಪುನರಾವರ್ತನೆಯಾಗದಂತೆ ವಿಶಿಷ್ಟ ರೀತಿಯಲ್ಲಿ ಕುವೆಂಪು ಭಾಷಾಭಾರತಿ ಕಾರ್ಯಯೋಜನೆಗಳನ್ನು ರೂಪಿಸಲಾಗುತ್ತದೆ.

ರಾಷ್ಟ್ರೀಯ ಪ್ರಶಸ್ತಿ : ರಾಷ್ಟ್ರಮಟ್ಟದಲ್ಲಿ ಕುವೆಂಪು ಅವರ ಹೆಸರಿನಲ್ಲಿ ರಾಷ್ಟ್ರಮಟ್ಟದ ಪ್ರಶಸ್ತಿಯೊಂದನ್ನು ಸ್ಥಾಪಿಸಿ, ನಾಡಿನ ಶ್ರೇಷ್ಠ ಸಾಹಿತಿಗಳನ್ನು ಗುರುತಿಸಿ ಸನ್ಮಾನಿಸಲು ಹಾಗೂ ಅಂತಹವರ ಪ್ರಮುಖ ಕೃತಿಗಳನ್ನು ಕನ್ನಡದಲ್ಲಿ ಹೊರತರಲು ಯೋಜನೆಗಳನ್ನು ರೂಪಿಸಲಾಗುತ್ತದೆ.

ತರುಣ ಪ್ರತಿಭೆಗಳಿಗೆ ಪ್ರೋತ್ಸಾಹ : ತರುಣ ಪ್ರತಿಭೆಗಳನ್ನು ಗುರುತಿಸಿ, ವಿವಿಧ ಭಾರತೀಯ ಭಾಷೆಗಳಲ್ಲಿ ವಿಶೇಷ ತರಬೇತಿ ಲಭ್ಯವಾಗುವಂತೆ ಮಾಡಿ, ಮುಂದೆ ಸಾಹಿತ್ಯಿಕ ಕೊಳು–ಕೊಡೆ ಕಾರ್ಯದಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ವಿವಿಧ ರಾಜ್ಯಸರ್ಕಾರಗಳ ನೆರವಿನೊಂದಿಗೆ ಶಿಷ್ಯವೇತನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕೆಂದು ಯೋಜಿಸಲಾಗಿದೆ.

**(ಇ) ಪ್ರಕಟಣೆಗಳು :**

'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಸ್ಥಾಪಿಸಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕಳೆದ ವರ್ಷವಷ್ಟೇ ೫೬ ಪುಸ್ತಕಗಳನ್ನು ಹೊರತಂದಿದ್ದು, ಕಳೆದ ೮ ತಿಂಗಳ ಅವಧಿಯಲ್ಲಿ ಸುಮಾರು ೧೦.೦೦ ಲಕ್ಷ ರೂಗಳನ್ನು ಮಾರಾಟದ ಮೂಲಕವೇ ಗಳಿಸಿಕೊಂಡಿದೆ. ಮುಂದೆ ಹಮ್ಮಿಕೊಳ್ಳಲಿರುವ ಹಾಗೂ ಮುನ್ನಡೆಯುತ್ತಿರುವ ಮಹತ್ವದ ಯೋಜನೆಗಳಲ್ಲಿ ಜೆ.ಡಿ.ಬರ್ನಾಲ್ ಅವರ 'ಸೈನ್ಸ್ ಇನ್ ಹಿಸ್ಟರಿ' ಗ್ರಂಥದ ನಾಲ್ಕು ಸಂಪುಟಗಳು, ವಿಲ್ ಡ್ಯೂರಾಂಟ್ ಅವರ 'ಸ್ಟೋರಿ ಆಫ್ ಸಿವಿಲಿಜೇಷನ್'ನ ಎಂಟು ಸಂಪುಟಗಳು (೪ರಿಂದ ೧೧), ವಿಜ್ಞಾನ–ತಂತ್ರಜ್ಞಾನಗಳಿಗೆ ಸಂಬಂಧಿಸಿದ ಸುಮಾರು ೧೦೦ ಗ್ರಂಥಗಳು, ಸೋಮದೇವನ 'ಕಥಾಸರಿತ್ಸಾಗರ'ದ ಐದು ಸಂಪುಟಗಳು (೬ರಿಂದ ೧೦) – ಇವನ್ನು ಮುಖ್ಯವಾಗಿ ಹೆಸರಿಸಬಹುದಾಗಿದೆ. 'ಭಾರತೀಯ ವಿಜ್ಞಾನ ಸಂಸ್ಥೆ'ಯಂಥ ಅಂತರರಾಷ್ಟ್ರೀಯ ಖ್ಯಾತಿಯ ಸಂಶೋಧನ ಸಂಸ್ಥೆಯ ಸಹಕಾರದೊಂದಿಗೆ ಇಂಗ್ಲಿಷ್ ಮತ್ತು ಜಾಪನೀಸ್ ಭಾಷೆಗಳಲ್ಲಿ ಮಾತ್ರ ಲಭ್ಯವಿರುವ 'ಶಾಕ್ ವೇವ್ಸ್'ನಂಥ ಗ್ರಂಥವೂ ಕನ್ನಡದಲ್ಲಿ ಹೊರಬರಲಿದೆ. ಭಾರತೀಯ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾನಿಲಯ ಮಾಲಿಕೆಯ ಮೊದಲಕಂತಿನಲ್ಲಿ ಈ ಮಾಲಿಕೆಯ ೨೫ ಪುಸ್ತಕಗಳು ಸಂಯುಕ್ತ ಪ್ರಕಟಣೆಗಳಾಗಿ ಬರಲಿವೆ. 'ಅಂತರರಾಷ್ಟ್ರೀಯ ಕನಕದಾಸ ಮಿಷನ್' ಸಂಸ್ಥೆಯ ನೆರವಿನೊಂದಿಗೆ ಕನಕದಾಸರ ಸಾಹಿತ್ಯದ ಅನುವಾದ ಕಾರ್ಯವೂ ಆರಂಭಗೊಳ್ಳಲಿದೆ. ಹೀಗಾಗಿ, ಕನ್ನಡ ಪ್ರಕಾಶನದ ಕ್ಷೇತ್ರದಲ್ಲಿಯೂ, ಮಹತ್ವದ ಹೆಜ್ಜೆಗುರುತುಗಳನ್ನು ಕುವೆಂಪು ಭಾಷಾ ಭಾರತಿ ಮೂಡಿಸುತ್ತ ಮುನ್ನಡೆಯಲಿದೆ.

ಖಾಸಗಿ ಪ್ರಕಾಶಕರ ಸಹಭಾಗಿತ್ವ : ಖಾಸಗಿ ಪ್ರಕಾಶಕರ ಸಹಾಯ–ಸಹಕಾರಗಳೊಂದಿಗೆ ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯಮಟ್ಟದಲ್ಲಿ ಪ್ರಚುರಗೊಳಿಸುವ

ಸಲುವಾಗಿ ರಾಜ್ಯ ಸರ್ಕಾರ ವಿಶೇಷ ಯೋಜನೆಯೊಂದಕ್ಕೆ ಅನುಮತಿ ನೀಡಿದೆ. ಅದರ ಮೇರೆಗೆ ಕನ್ನಡ ಸಾಹಿತ್ಯ ಕೃತಿಗಳನ್ನು ಇತರ ಭಾರತೀಯ ಮತ್ತು ವಿದೇಶೀ ಭಾಷೆಗಳಲ್ಲಿ ಹೊರತರುವ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳಿಗೆ ಪ್ರಕಟಣೆಯ ಮೂಲಧನವನ್ನು ಮುಂಗಡವಾಗಿ ನೀಡಿ, ಮೂರು ವರ್ಷಗಳಲ್ಲಿ ಅವರು ಈ ಮುಂಗಡ ಹಣವನ್ನು ಹಿಂದಿರುಗಿಸುವಂತೆ ಈ ಕಾರ್ಯಕ್ರಮ ರೂಪಿಸಲಾಗಿದೆ. ಇತರ ಕ್ಷೇತ್ರಗಳಿಗೆ ಸರ್ಕಾರಗಳು ಅನೇಕ ರೀತಿಯಲ್ಲಿ ನೆರವಾಗುತ್ತಿದ್ದರೂ, ಪ್ರಕಟಣ ಕ್ಷೇತ್ರಕ್ಕೆ ಈ ಬಗೆಯ ನೆರವು ಇಲ್ಲದಿದ್ದರಿಂದ ಇದೊಂದು ಬಗೆಯ ವಿನೂತನ ಯೋಜನೆ ಆಗಿದೆ ಎಂದೂ, ಇಂಥ ಯೋಜನೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಾಗಿಯೂ ಅನೇಕ ಪ್ರಕಾಶನ ಸಂಸ್ಥೆಗಳು ಈಗಾಗಲೇ ಮುಂದೆ ಬಂದಿವೆ. ಈ ದಿಕ್ಕಿನಲ್ಲಿ ವ್ಯವಸ್ಥಿತ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಹೀಗೆ ಪ್ರಕಟಣೆಯ ಕಾರ್ಯಕೈಗೊಳ್ಳುವ ಮೂಲಕ ಕನ್ನಡೇತರ ಭಾಷಾ–ಸಾಹಿತ್ಯವಲಯಗಳಲ್ಲಿ ಕನ್ನಡದ ಮೇರು ಕೃತಿಗಳು ಪರಿಚಯಗೊಳ್ಳಲೂ, ಜನಪ್ರಿಯವಾಗಲೂ ಸಹಾಯವಾಗುತ್ತದೆಂದು ನಂಬಲಾಗಿದೆ.

ಕರ್ನಾಟಕ ಸರ್ಕಾರದ ಉದಾರ ನೆರವಿನಿಂದ ಇಂಥ ಮಹತ್ವದ ಮತ್ತು ಬಹು ಆಯಾಮದ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಭಾರತೀಯ ಮತ್ತು ವಿದೇಶಿ ಭಾಷೆಗಳ ನಡುವೆ ಒಂದು ಸಾಂಸ್ಕೃತಿಕ ಸೇತುವೆಯಾಗಿ, ಮಿನಿ ವಿಶ್ವವಿದ್ಯಾನಿಲಯವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ' ಕಾರ್ಯನಿರ್ವಹಿಸಲಿದೆ. ನಾಡಿನ ಗಣ್ಯ ವಿದ್ವಾಂಸರ ಸಹಾಯ–ಸಹಕಾರಗಳನ್ನು ಪಡೆದುಕೊಂಡು ಈ ಕಾರ್ಯ ನಿರ್ವಹಿಸಲಾಗುತ್ತದೆ. ಹೀಗಾಗಿ, ಕುವೆಂಪು ಭಾಷಾ ಭಾರತಿ ಕನ್ನಡ ನಾಡಿನ ಇತಿಹಾಸದಲ್ಲಿ ಮಾತ್ರವಲ್ಲದೆ, ಭಾರತೀಯ ಸಾಹಿತ್ಯಿಕ–ಸಾಂಸ್ಕೃತಿಕ ಕ್ಷೇತ್ರದಲ್ಲಿ ಒಂದು ಮಹತ್ವದ ಸಂಸ್ಥೆಯಾಗಿ ರೂಪುಗೊಳ್ಳಲಿದೆಯೆಂದೂ, ಕನ್ನಡ ನಾಡಿನ ವಿದ್ವದ್‌ವಲಯಕ್ಕೆ, ಸಾಹಿತ್ಯ ಪ್ರೇಮಿಗಳಿಗೆ, ಕುವೆಂಪು ಅವರ ಅಭಿಮಾನಿಗಳಿಗೆ ಇದು ಸಂತಸದ ಸಂಗತಿ ಆಗಲಿದೆ ಎಂದೂ ನಂಬಿದ್ದೇವೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ.ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ–ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ, ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ



ಡಾ. ಎ.ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ ವಿದ್ಯಾ ಭವನದ ಬೆಂಗಳೂರು ಶಾಖೆಯ ಕಾರ್ಯಕಾರಿ ನಿರ್ದೇಶಕರಾಗಿರುವ ಪದ್ಮಶ್ರೀ ಡಾ. ಮತ್ತೂರು ಕೃಷ್ಣಮೂರ್ತಿ ಅವರಿಗೂ, ಕಾರ್ಯಕ್ರಮ ಮತ್ತು ಯೋಜನೆಗಳ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಭಾರತೀಯ ವಿದ್ಯಾ ಭವನದ ಕೇಂದ್ರ ಕಛೇರಿಯ ಪದಾಧಿಕಾರಿಗಳಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಅರುವತ್ತರ ದಶಕದಲ್ಲಿ ಈ ಮಾಲೆಯನ್ನು ಆರಂಭಿಸಿದಾಗ ಇದನ್ನು 'ಒಂದು ರೂಪಾಯಿ ಮಾಲೆ' ಎಂದೇ ಕರೆಯಲಾಗಿತ್ತು. ಈಗಲೂ ಜನಸಾಮಾನ್ಯರಿಗೆ ಸುಲಭ ದರದಲ್ಲಿ ಈ ಪುಸ್ತಕಗಳನ್ನು ತಲುಪಿಸುವ ಉದ್ದೇಶದಿಂದ ಈ ಮಾಲೆಯ ಎಲ್ಲ ಪುಸ್ತಕಗಳಿಗೂ ಹತ್ತು ರೂಗಳ ಸಾಂಕೇತಿಕ ದರವನ್ನೇ ಗೊತ್ತುಪಡಿಸಲಾಗಿದೆ. ಪ್ರಕಟಣೆಯ ವೆಚ್ಚದ ಒಂದು ಭಾಗವನ್ನು ವಿದ್ಯಾ ಭವನ ಭರಿಸಿರುವುದು ಇದಕ್ಕೆ ಕಾರಣವಾಗಿದೆ. ಈ ಸೌಹಾರ್ದತೆಗಾಗಿಯೂ ನಾವು ವಿದ್ಯಾ ಭವನದ ಎಲ್ಲ ಪದಾಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಬಯಸುತ್ತೇವೆ.

ಈ ಮಾಲೆಯ ೨೫ ಪುಸ್ತಕಗಳು ಒಮ್ಮೆಗೇ ಹೊರಬರುತ್ತಿರುವುದಕ್ಕೆ ಬೆಂಗಳೂರು ಶಾಖೆಯ ತ್ರಿಮೂರ್ತಿಗಳ ಸಹಾಯ ಸಹಕಾರ ಮತ್ತು ಮಾರ್ಗದರ್ಶನಗಳು ಮಾತ್ರವಲ್ಲದೆ ಡಾ. ಎ.ವಿ. ನರಸಿಂಹಮೂರ್ತಿಯವರ ದಕ್ಷ ಸಂಪಾದಕತ್ವ ಮತ್ತು ಕಾರ್ಯಪಟುತ್ವಗಳು ಕಾರಣವಾಗಿವೆ. ಇದು ನಮಗೆ ಸಂತೋಷವನ್ನೂ ಹೆಮ್ಮೆಯನ್ನೂ ತಂದುಕೊಟ್ಟಿದೆ. ಇವನ್ನು ಸುಂದರವಾಗಿ ಹೊರತರುವಲ್ಲಿಯೂ ಅವರಿಂದ ನಮಗೆ ಸಲಹೆ ಸೂಚನೆಗಳು ದೊರತಿವೆ. ಈ ಎಲ್ಲ ಕೃಪೆಗಾಗಿ ನಾನು ಆ ಎಲ್ಲ ಮಹನೀಯರಿಗೂ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಲ್ಲಿಸಬಯಸುತ್ತೇನೆ.

ಈ ಪುಸ್ತಿಕೆಯ ಕನ್ನಡ ಆವೃತ್ತಿಯನ್ನು ಸಿದ್ಧಪಡಿಸಿಕೊಟ್ಟಿರುವ ಶ್ರೀ ನೀಲತ್ತಹಳ್ಳಿ ಕಸ್ತೂರಿ ಅವರಿಗೂ, ಕರಡುಗಳ ಪರಿಶೀಲನೆಯಲ್ಲಿ ಸಹಕರಿಸಿರುವ ಶ್ರೀ ಎಚ್.ಎಂ. ನಾಗರಾಜರಾವ್ ಅವರಿಗೂ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ.ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು – ೫೬

**ಪ್ರಧಾನ್ ಗುರುದತ್ತ**
ಅಧ್ಯಕ್ಷ

## ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ.ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್.ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ಈ ಯೋಜನೆಯಲ್ಲಿ ಆಸಕ್ತಿವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾ ಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಪ್ರಸ್ತುತ, 'ಗಾಂಧೀಜಿಯವರ ವ್ಯಕ್ತಿತ್ವ ಮತ್ತು ಜೀವನ ಧ್ಯೇಯ' ಎಂಬ ಪುಸ್ತಕ ಖ್ಯಾತ ಲೇಖಕರಾದ ಶ್ರೀ ನೀಲತ್ತಹಳ್ಳಿ ಕಸ್ತೂರಿಯವರ ಸಮರ್ಥ ಅನುವಾದ. ಅವರಿಗೆ ನಮ್ಮ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

**ಎನ್. ರಾಮಾನುಜ**
ಅಧ್ಯಕ್ಷರು
ಭಾರತೀಯ ವಿದ್ಯಾಭವನ, ಕರ್ನಾಟಕ

**ಎ.ವಿ. ನರಸಿಂಹಮೂರ್ತಿ**
ಅಧ್ಯಕ್ಷರು, ವಿದ್ಯಾಭವನ, ಮೈಸೂರು
ಸಂಪಾದಕ



## ಮೂಲ ಸಂಪಾದಕರ ಪ್ರಸ್ತಾವನೆ

ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳು ವಿಶೇಷ ಸಾಫಲ್ಯವನ್ನು ಕಂಡಿವೆ. ಈ ಹನ್ನೊಂದು ವರ್ಷಗಳಲ್ಲಿ ಸುಮಾರು ಒಂದೂಕಾಲು ಮಿಲಿಯನ್ ಪುಸ್ತಕಗಳು ಮಾರಾಟಗೊಂಡಿವೆ. ಆದರೂ ಭವನವು ಆಗಾಗ್ಗೆ ಪ್ರಕಾಶನಗೊಳಿಸುತ್ತಿರುವ ಕಡಿಮೆ ಬೆಲೆಯ ಕೆಲವು ಬಿಡಿ ಪುಸ್ತಕಗಳಿಗೆ ವಿಶೇಷ ಬೇಡಿಕೆ ಇದೆ. ಇದನ್ನು ಪೂರೈಸುವ ದೃಷ್ಟಿಯಿಂದ ಹೊಸ ಒಂದು ರೂಪಾಯಿ ಪುಸ್ತಕಗಳನ್ನು ಹಾಗೂ ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳನ್ನೂ ಒಟ್ಟೊಟ್ಟಿಗೆ ಪ್ರಕಟಿಸಲು ತೀರ್ಮಾನಿಸಿದೆ.

ಈ ಹೊಸ ಒಂದು ರೂಪಾಯಿ ಮಾಲಿಕೆಯ ಪುಸ್ತಕಗಳು, ಇತರ ಮಾಲಿಕೆಯ ಪುಸ್ತಕಗಳಂತೆ ಸಾಫಲ್ಯವನ್ನು ಪಡೆದು ಭಾರತೀಯ ಸಂಸ್ಕೃತಿಯ ಮೌಲ್ಯದಲ್ಲಿ ಆಸಕ್ತಿ ಇರುವವರಿಗೆ ಇಷ್ಟವಾಗಿ, ಹೆಚ್ಚಿನ ಓದುಗರನ್ನು ತಲಪುತ್ತದೆ ಎಂದು ನಾನು ಭಾವಿಸಿದ್ದೇನೆ.

**ಭಾರತೀಯ ವಿದ್ಯಾ ಭವನ**
ಚೌಪಾಟಿ ರೋಡ್, ಬೊಂಬಾಯಿ
ವಿಜಯ ದಶಮಿ, ಸೆಪ್ಟೆಂಬರ್ ೨೮,೧೯೬೩

**ಕೆ.ಎಂ. ಮುನ್ಷಿ**

## ಮೂಲ ಪ್ರಕಾಶಕರ ಟಿಪ್ಪಣಿ

ಶಿಕ್ಷಣ ಮಂತ್ರಾಲಯದ "ಗಾಂಧೀ ದರ್ಶನ ಪ್ರಸಾರ" ಎಂಬ ಯೋಜನೆಯಲ್ಲಿ ಪ್ರೊ॥ ನಿರ್ಮಲ್‌ಕುಮಾರ್ ಬೋಸ್ ಅವರು ಜಾಧವಪುರ ವಿಶ್ವವಿದ್ಯಾನಿಲಯದಲ್ಲಿ ೧೯೬೩, ಮಾರ್ಚ್ ೧೨, ೧೩ ಮತ್ತು ೧೪ ರಂದು ಮೂರು ಉಪನ್ಯಾಸಗಳನ್ನು ನೀಡಿದರು.

ಈ ಉಪನ್ಯಾಸಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲು ಅನುಮತಿ ನೀಡಿದ್ದಕ್ಕಾಗಿ ಶಿಕ್ಷಣ ಮಂತ್ರಾಲಯಕ್ಕೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

## ಕೃತಜ್ಞತೆ

ಈ ಉಪನ್ಯಾಸಗಳನ್ನು ನೀಡಲಾದುದು, ಕೇಂದ್ರ ಸರ್ಕಾರದ ಶಿಕ್ಷಣ ಮಂತ್ರಾಲಯದ "ಗಾಂಧೀ ದರ್ಶನ ಪ್ರಸಾರ" ಯೋಜನೆಯ ಅಡಿಯಲ್ಲಿ. ಇವರ ಅನುಮತಿಯಿಂದ ಈಗ ಪುಸ್ತಕ ರೂಪದಲ್ಲಿ ಪ್ರಕಟವಾಗಿವೆ. ಆದರೆ, ವಿಷಯದ ನಿಖರತೆಗೆ ಶಿಕ್ಷಣ ಮಂತ್ರಾಲಯ ಜವಾಬ್ದಾರರಲ್ಲ ಮತ್ತು ಇದರಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳಿಗೆ ಶಿಕ್ಷಣ ಮಂತ್ರಾಲಯ ಜವಾಬ್ದಾರರಲ್ಲ ಮತ್ತು ಇದರಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳು ಭಾರತ ಸರ್ಕಾರದ ದೃಷ್ಟಿಯನ್ನು ಬಿಂಬಿಸುತ್ತವೆ ಎಂದೂ ಹೇಳಲಾಗುವುದಿಲ್ಲ.



## ಪರಿವಿಡಿ


ಮೊದಲ ಮಾತು v
ಶುಭಾಕಾಂಕ್ಷೆ vi
ಪ್ರಾಸ್ತಾವಿಕ ನುಡಿ viii
ಪೀಠಿಕೆ x
ಅರಿಕೆ xvi
ಮೂಲ ಸಂಪಾದಕರ ಪ್ರಸ್ತಾವನೆ xvii
ಮೂಲ ಪ್ರಕಾಶಕರ ಟಿಪ್ಪಣಿ xviii
ಕೃತಜ್ಞತೆ xviii

೧. ಗಾಂಧೀಜಿಯವರ ವ್ಯಕ್ತಿತ್ವ ೧
೨. ಸತ್ಯಾಗ್ರಹ ಮತ್ತು ಯುದ್ಧ ೧೪
೩. ಭಾರತದಲ್ಲಿನ ಕಾರ್ಯ ೨೬

**Blank Page**



# ಗಾಂಧೀಜಿಯವರ ವ್ಯಕ್ತಿತ್ವ ಮತ್ತು ಜೀವನ ಧ್ಯೇಯ

# ೧. ಗಾಂಧೀಜಿಯವರ ವ್ಯಕ್ತಿತ್ವ

ಗಾಂಧೀ ದರ್ಶನದ ವಿಷಯವಾಗಿ ತಮ್ಮ ಮುಂದೆ ಮಾತನಾಡಲು ಆಮಂತ್ರಿಸಿರುವುದು ನನಗೊಂದು ಗೌರವ ಎಂದು ನಾನು ಭಾವಿಸುತ್ತೇನೆ. ನಾನೇನೂ ದರ್ಶನಶಾಸ್ತ್ರದ ವಿದ್ಯಾರ್ಥಿ ಅಲ್ಲ; ಆದರೆ ಗಾಂಧೀವಾದದ ನನ್ನ ಮುಖ್ಯ ಆಸಕ್ತಿ ಎಂದರೆ ಗಾಂಧೀಜಿಯವರ ಆರ್ಥಿಕ ಮತ್ತು ರಾಜಕೀಯ ಆದರ್ಶಗಳಲ್ಲಿ. ಏಕೆಂದರೆ ಅವು ಹೊಮ್ಮುವುದು ಅವರು ನಂಬಿಕೊಂಡಿದ್ದ ದರ್ಶನದಿಂದ. ಗಾಂಧೀವಾದದ ಪ್ರತಿಪಾದನೆಯ ಈ ಚರ್ಚೆಯ ನಡುವೆ, ನಾನು ಆಗಾಗ, ಕೆಲವು ವೈಯಕ್ತಿಕ ಪ್ರಸ್ತಾಪಗಳನ್ನು ಎತ್ತಿದಲ್ಲಿ ತಾವು ಕ್ಷಮಿಸುವಿರೆಂದು ಆಶಿಸುತ್ತೇನೆ; ಆದರೆ, ನಾನು ಹಾಗೆ ಮಾಡುವುದು ಗಾಂಧೀಜಿ ಕುರಿತ ಕೆಲವು ಅಂಶಗಳ ವಿವರಣೆಗಾಗಿಯೆ ವಿನಾ ಬೇರಾವ ಉದ್ದೇಶಕ್ಕೂ ಅಲ್ಲ.

ಗಾಂಧೀ ಚಳುವಳಿಯ ಸಂಬಂಧ ನಮಗೆ 1921ರಿಂದ ಇದ್ದರೂ, ನಾನು ವೈಯಕ್ತಿಕವಾಗಿ 1921ರಲ್ಲಿ ಅಸಹಕಾರ ಚಳುವಳಿಗೆ ಪ್ರತಿಕ್ರಯಿಸಿದ್ದು ಹೆಚ್ಚು ಕಡಿಮೆ ವಿರೋಧದ ನಿಲುವಿನಿಂದಲೇ. ನಾನೊಬ್ಬ ಭೂಗರ್ಭಶಾಸ್ತ್ರದ ವಿದ್ಯಾರ್ಥಿ. ಈ ಸಂಧ್ಯಾಕಾಲದ ಸಮಯದಲ್ಲಿ ಯಾರೋ ಬಂದು ಚರಕದಂಥ ಓಬೀರಾಯನ ಕಾಲದ ಉತ್ಪಾದನೆಯ ವಿಧಾನಕ್ಕೆ ಹಿಂದಿರುಗಿ ಎಂದು ಹೇಳಿದ್ದು ನನಗೆ ಆಶ್ಚರ್ಯವಾಗಿ ಕಾಣಿಸಿತು. ಸಹಜವಾದ ಈ ಪ್ರತಿಕ್ರಿಯೆ ಏನೇ ಇದ್ದರೂ, ಗಾಂಧೀಜಿಯ ಮಾತಿನ ಅಸಾಧಾರಣ ಧೈರ್ಯದಿಂದ ಮತ್ತು ಅವರು ಬ್ರಿಟಿಷ್ ಸಾಮ್ರಾಜ್ಯದ ಅಗಾಧ ಬಲಕ್ಕೆ ಸವಾಲು ಎಸೆದ ರೀತಿಯಿಂದ ನಮ್ಮಲ್ಲಿ ಅನೇಕರು ಆಕರ್ಷಿತರಾದೆವು. ಬ್ರಿಟಿಷ್ ಪ್ರಭುತ್ವವನ್ನು ಎದುರಿಸಿ, ಸ್ವಾತಂತ್ರ್ಯಕ್ಕಾಗಿ ಜೀವ ತೆತ್ತ ಇತರ ಅನೇಕರೂ ಬಂಗಾಳದಲ್ಲಿ, ಮಹಾರಾಷ್ಟ್ರದಲ್ಲಿ, ಪಂಜಾಬಿನಲ್ಲಿ, ಇದ್ದರು. ಆದರೆ ಅವರ ಪರಿ ಗಾಂಧೀಜಿಗಿಂತ ಬೇರೆ ರೀತಿಯದು. ವ್ಯತ್ಯಾಸ ಇದು. ಬಂಗಾಳದ 'ಕ್ರಾಂತಿಕಾರಿಗಳು' ದೇಶ ಸಂಕಟ ಮತ್ತು ಸಾವುಗಳ ಭಯದಿಂದ ಮುಕ್ತವಾಗಲೆಂದು ತಮ್ಮ ಪ್ರಾಣಗಳನ್ನೇ ಪಣವಾಗಿಟ್ಟರು. ನಿಜ. ಆದರೆ ದೇಶದ ಜನಸಾಮಾನ್ಯರ ಪ್ರತಿಸ್ಪಂದನ ತಣ್ಣಗೆ ಇತ್ತು, ನಿಷ್ಕ್ರಿಯವೇ ಆಗಿತ್ತು. 1921ಕ್ಕೆ ಮೊದಲು ವಾಸ್ತವವಾಗಿ ಯಾವ ಜನತಾ ರಾಜಕೀಯ ಚಳುವಳಿಯೂ ನಡೆದಿರಲಿಲ್ಲ. ಹಲವಾರು ಕ್ರಾಂತಿಕಾರಿಗಳೇನೋ, ರೈತರ ಮತ್ತು

ಗುಡ್ಡಗಾಡು ಜನರ ದೀನಸ್ಥಿತಿಯಲ್ಲಿ ಅವರ ನಡುವೆಯೆ ಇದ್ದು ಪಾಲುಗೊಂಡದ್ದೇನೋ ನಿಜ. ಆದರೆ ಭಾರತದ ವಿದೇಶೀ ಆಳರಸರ ಕೈಗಳಿಂದ ರಾಜಕೀಯ ಅಧಿಕಾರವನ್ನು ಮತ್ತೆ ಪಡೆದುಕೊಳ್ಳಲು, ಅಂಥ ಆರ್ಥಿಕ ಕ್ರಾಂತಿಗಳನ್ನು ಹಿಂದೆಂದೂ ಬಳಸಿಕೊಂಡದ್ದಿಲ್ಲ. ಆದರೆ ಗಾಂಧೀ ಚಳುವಳಿಯಲ್ಲಾದರೋ ಇಡೀ ಜನಸ್ತೋಮವೇ ಒಂದಾಗಿ ಎದ್ದು ನಿಂತು ಉನ್ನತ ಪ್ರಮಾಣದ ಸಹಕಾರವಿತ್ತು, ದೇಶಪ್ರೇಮದ ಉತ್ತುಂಗ ಶಿಖರವನ್ನು ಮೆರೆಯಲು ಶಕ್ತವಾಯಿತು. ಗಾಂಧಿಯವರು ಉತ್ಪಾದನೆಯ ಓಬೀರಾಯನ ಕಾಲದ ವಿಧಾನವನ್ನೇ ಪ್ರತಿಪಾದಿಸಿದರೂ, ನಾವು ಅವರಿಂದ ಆಕರ್ಷಿತರಾದುದಕ್ಕೆ ಪ್ರಬಲ ಕಾರಣ ಇದೇ.

ಆದರೆ, ಆನಂತರ, ನಾನು ಕ್ರಮೇಣ, ರಾಜಕೀಯ ಕೆಲಸದಿಂದ ಗಾಂಧೀ ಸಾಹಿತ್ಯವನ್ನು ಗಮನವಿಟ್ಟು ಓದುವುದರತ್ತ ಸರಿದೆ. ಆಗ ನನಗೆ ಅನಿಸಿತು,1921-22ರಲ್ಲಿ ಚಳುವಳಿ ಮತ್ತು ಆನಂತರದ ಕೆಲವು ಹೋರಾಟಗಳು ಕರಗಿ ಹೋದದ್ದು, ಮಾನವ ಸ್ವಭಾವದ ಬಗ್ಗೆ ಗಾಂಧೀಜಿ ಕೇಳಿದ್ದು ಅತಿಯಾಗಿತ್ತು ಎಂಬ ಕಾರಣಕ್ಕಲ್ಲ, ಆದರೆ ಎಷ್ಟೋಸಲ ಅವರ ಕಾರ್ಯಕ್ರಮಗಳನ್ನು ಬುದ್ಧಿಪೂರ್ವಕವಾಗಿ ನಡೆಸಲಿಲ್ಲ, ಕೆಲವೊಮ್ಮೆ ಕಣ್ಣು ಮುಚ್ಚಿಕೊಂಡೂ ನಡೆಸಲಾಯಿತು ಎಂದು. ಅನೇಕರು ಗಾಂಧೀಜಿಯ ವ್ಯಕ್ತಿತ್ವದ ಮೋಡಿಗೆ ಮರುಳಾಗಿದ್ದರು. ಗಾಂಧೀಜಿಯ ಜೀವಿತಕಾಲದ ಅನೇಕ ಮಹೋನ್ನತ ನಾಯಕರೂ ಹಾಗೇ ಇದ್ದರು ಎನ್ನಬಹುದು. ಉದಾಹರಣೆಗೆ, ದೇಶಬಂಧು ಸಿ. ಆರ್. ದಾಸರಿಗೆ ಗಾಂಧೀಜಿಯ ರಾಜಕೀಯ ವಿಚಾರಗಳ ಬಗ್ಗೆ ಪೂರಾ ಸಹಮತ ಇರಲಿಲ್ಲ. ಆದರೂ, ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸುವ ಪ್ರಶ್ನೆ ಬಂದಾಗ, ದೇಶಬಂಧು ತಮ್ಮ ಶಂಕೆಗಳನ್ನೆಲ್ಲ ಬದಿಗಿರಿಸಿ ಮಹಾತ್ಮನಿಗೆ ಹೆಚ್ಚುಕಡಿಮೆ ಶರಣೇ ಆದರು. ಏಕೆಂದರೆ ಮಹಾತ್ಮರು ಜನಸ್ತೋಮದ ದನಿ ಮತ್ತು ಶಕ್ತಿಯ ಪ್ರತೀಕವೇ ಆಗಿದ್ದರು.

ಇಂಥ ಸನ್ನಿವೇಶದಲ್ಲಿ ಗಾಂಧೀಜಿಯ ವಿಚಾರಗಳನ್ನು ಫಲಪ್ರದವಾಗಿ ಆಚರಿಸಬೇಕಾದರೆ ಅಥವಾ ಅವನ್ನು ದೂರೀಕರಿಸಲೂ ಬೇಕಾದರೆ, ಅವುಗಳ ಬುದ್ಧಿಪೂರ್ವಕ ಗ್ರಹಿಕೆ ಅಗತ್ಯ ಎಂದು ಕೆಲವರು ಕಂಡುಕೊಂಡರು.

ನನಗೆ ಮೊದಲ ಬಾರಿಗೆ ಗಾಂಧೀಜಿಯ ವೈಯಕ್ತಿಕ ಸಂಪರ್ಕ ಆದದ್ದು1934ರಲ್ಲಿ;ಅದು ವರ್ಧಾದಲ್ಲಿ. ಗಾಂಧೀಜಿ ಅಲ್ಲಿನ ಮಹಿಳಾ ಆಶ್ರಮದಲ್ಲಿ ಇರುತ್ತಿದ್ದರು. ಮೊತ್ತ ಮೊದಲ ಬಾರಿಗೆ ನಾನು ಮಹಡಿಯ ಮೇಲೆ ಅವರ ಭೇಟಿಗೆ ಹೋದಾಗ, ಡಜನ್‌ಗಟ್ಟಲೆ ಜನ ನಿರಂತರವಾಗಿ ಬಂದು ಹೋಗಿ ಮಾಡುತ್ತಿದ್ದರೂ, ಆ ಕೋಣೆ ಎಷ್ಟು ಅಸಾಧಾರಣವಾಗಿ ಒಪ್ಪ ಓರಣವಾಗಿತ್ತು ಎಂಬುದನ್ನು ನೋಡಿ ನಾನು ಬೆರಗಾದೆ. ಗಾಂಧೀಜಿ ಕೋಣೆಯ ನಡುವೆ ಒಂದು ಸಣ್ಣ ಇಳಿಜಾರು ಮೇಜಿನ



ಮೇಲೆ ಕಾಗದಗಳನ್ನು ಬರೆಯುತ್ತ ಕುಳಿತಿದ್ದರು. ನನ್ನ ಜೊತೆಗೆ ಗಡಿನಾಡು ಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನ್ ಮತ್ತವರ ಮಗ ಅಬ್ದುಲ್ ಘನಿ ಖಾನ್ (ರಸಾಯನ ಶಾಸ್ತ್ರಜ್ಞ) ಹಾಗೂ ಶಾಂತಿ ನಿಕೇತನದ ಪ್ರೊ.ಕೆ. ಆರ್. ಕೃಪಲಾನಿ ಇದ್ದರು. ಖಾನ್ ಅಬ್ದುಲ್ ಗಫಾರ್ ಖಾನರಿಗೂ ಅವರ ಮಗನಿಗೂ ಭಿನ್ನಾಭಿಪ್ರಾಯ ಉಂಟಾಗಿತ್ತು. ಮಗ ಕಲಾವಿದ, ವೃತ್ತಿಯಿಂದ ರಸಾಯನ ಶಾಸ್ತ್ರಜ್ಞ. ಆತನಿಗೆ ರಾಷ್ಟ್ರೀಯ ಚಳುವಳಿಗೆ ಸೇರಲು ಮನಸ್ಸಿರಲಿಲ್ಲ. ತಂದೆಗಾದರೋ ಮಗ ತನ್ನ ಶಕ್ತಿ ಸಾಮರ್ಥ್ಯಗಳನ್ನು ಗಡಿನಾಡು ಪ್ರಾಂತ್ಯದ ಬಡವರ ಸೇವೆಗೆ ಬಳಸಲಿ ಎಂದು ಆಸೆ.

ಪ್ರಶ್ನೆಯನ್ನು ಗಾಂಧೀಜಿ ತೀರ್ಮಾನ ಮಾಡಬೇಕಾಗಿತ್ತು. ಅವರು ಪ್ರೊ. ಕೃಪಲಾನಿಯವರತ್ತ ತಿರುಗಿ, ಕಲಾ ಶಾಲೆಯ ಪ್ರಾಚಾರ್ಯ ನಂದಲಾಲ ಬಸು ಘನಿ ಖಾನರ ಬಗ್ಗೆ ಏನು ಹೇಳುತ್ತಾರೆ ಎಂದು ಕೇಳಿದರು. ನಂದಲಾಲರು ಘನಿ ಖಾನರ ಕೌಶಲವನ್ನು ಮೆಚ್ಚಿಕೊಳ್ಳುತ್ತಾರೆ, ಆದರೆ ಅವರು ಕಲೆಯನ್ನು ಗಂಭೀರವಾಗಿ ಭಾವಿಸಿಲ್ಲ, ವಾಸ್ತವವಾಗಿ ಚೆಲ್ಲಾಟವಾಡುತ್ತಾರೆ ಎಂದು ಭಾವಿಸಿದ್ದಾರೆ ಎಂದು ಕೃಪಲಾನಿ ಹೇಳಿದರು. ಒಮ್ಮೆಲೇ ಗಾಂಧೀಜಿ ಪಕಪಕನೆ ನಕ್ಕು ಹೇಳಿದರು."ಇನ್ನಾರಾದರ ಜೊತೆಯಲ್ಲಿ ಚೆಲ್ಲಾಟ ಆಡದಂತೆ ನೋಡಿಕೊಳ್ಳಿ" ಎಂದರು. ಆಮೇಲೆ, ಗಾಂಧೀಜಿ, ಮಗನ ಒಲವಿನ ಬಗ್ಗೆ ತಲೆಹಾಕಬೇಡಿ ಎಂದು ತಂದೆಗೆ ಸೂಚಿಸಿದರು. ಯಾವಾಗಲಾದರೂ ಘನಿ ಅಶಿಕ್ಷಿತ ದೇಶ ಬಾಂಧವರಿಗೆ ತನ್ನ ಸೇವೆಯನ್ನು ಮಾಡಬಯಸಿದರೆ ಅದರಲ್ಲಿ ಆತನಿಗೆ ಸಹಾಯ ಮಾಡಬೇಕು. ಆದರೆ, ಆತ ರಸಾಯನಶಾಸ್ತ್ರಜ್ಞನಾಗಿ ಜೀವನೋಪಾಯ ನಡೆಸಬೇಕು ಮತ್ತು ತನ್ನ ಬಿಡುವಿನ ಸಮಯವನ್ನೆಲ್ಲ ಕಲಾಭ್ಯಾಸಕ್ಕೆ ವಿನಿಯೋಗಿಸಬೇಕು ಎಂದರು. ಇದು ಆಶ್ಚರ್ಯಕರವಾಗಿತ್ತು. ಏಕೆಂದರೆ ವಿಜ್ಞಾನಿ ಅಥವಾ ಸಾಹಿತಿ ಪ್ರತಿಯೊಬ್ಬನೂ ತನ್ನನ್ನು ಬಡವರ ಸೇವೆಗೆ ಒಡನೆಯೆ ಸಮರ್ಪಿಸಿಕೊಳ್ಳಬೇಕೆಂದು ಗಾಂಧೀಜಿ ಹೇಳ ಬಯಸುತ್ತಾರೆ ಎಂದು ನಾನು ಭಾವಿಸಿದ್ದೆ.

ಘನಿಯವರ ಸಮಸ್ಯೆ ಮುಗಿಯಿತು. ಗಾಂಧೀಜಿ ನನ್ನತ್ತ ತಿರುಗಿದರು. ನಾನು ನಾಲ್ಕು ಪ್ರಶ್ನೆಗಳನ್ನು ಬರೆದು ಅವರ ಕೈಯಲ್ಲಿಟ್ಟೆ. ಅವರು ಅವುಗಳ ಮೇಲೆ ದೃಷ್ಟಿ ಹಾಯಿಸಿದರು. ಅವು ವೈಯಕ್ತಿಕ ಪ್ರಶ್ನೆಗಳೇನೂ ಆಗಿರಲಿಲ್ಲ. ರಾಜಕೀಯ ಅಥವಾ ಆರ್ಥಿಕ ವಿಷಯ ಕುರಿತವು. ಆದ್ದರಿಂದ, ಅವುಗಳನ್ನು ಅಲ್ಲಿದ್ದವರ ಮುಂದೆ ಚರ್ಚಿಸಲು ನನ್ನ ಅನುಮತಿ ಕೇಳಿದರು.

ಹಾಗೆ ಎರಡು ಪ್ರಶ್ನೆಗಳು ಚರ್ಚಿತವಾದವು. ಆಗ ಗಾಂಧೀಜಿಗೆ ಸಂಜೆ ತಿರುಗಾಟಕ್ಕೆ ಹೊರಡುವ ಸಮಯ. ನಾವು ಜೊತೆಗೆ ಹೋದೆವು. ಸಂದರ್ಶನವನ್ನು ಮಾರನೆಯ ಮಧ್ಯಾಹ್ನಕ್ಕೆ ಮುಂದೂಡಲಾಯಿತು. ಗಾಂಧೀಜಿ ಎತ್ತರದ ಆಳೇನಲ್ಲ.

ಆದರೆ ಅವರು ಎಷ್ಟು ವೇಗವಾಗಿ ನಡೆಯುತ್ತಿದ್ದರು ಎಂದರೆ, ಆರು ಅಡಿಗೂ ಹಲವು ಅಂಗುಲ ಎತ್ತರವಿದ್ದ ಖಾನ್ ಅಬ್ದುಲ್ ಗಫಾರ್ ಖಾನರೂ, ಅವರಿಗೆ ಸಮವಾಗಿ ನಡೆಯಲು ಅವಸರವಾಗಿ ಉದ್ದನೆಯ ಹೆಜ್ಜೆ ಇಡಬೇಕಾಗಿತ್ತು. ಸುಮಾರು ಒಂದು ಮೈಲಿ ನಡೆದ ಮೇಲೆ ಗಾಂಧೀಜಿ ಹಿಂದಿರುಗಿದರು. ಕೆಳಗೆ ಬಿದ್ದಿದ್ದ ಕೆಲವು ಜಲ್ಲಿ ಕಲ್ಲುಗಳನ್ನು ಆರಿಸಿಕೊಂಡು ತಮ್ಮ ಉತ್ತರೀಯದಲ್ಲಿ ಹಾಕಿಕೊಂಡರು. ಆಗ ಉಳಿದ ಪ್ರತಿಯೊಬ್ಬರೂ ಹಾಗೆಯೇ ಮಾಡಿದರು. ನಾವು ತೋಟದ ತಡಿಕೆಯ ಮೂಲಕ ಆಶ್ರಮಕ್ಕೆ ಹಿಂದಿರುಗಿದಾಗ, ಅಲ್ಲೊಂದು ದೊಡ್ಡ ಜಲ್ಲಿಗುಡ್ಡೆ ಇದ್ದುದನ್ನು ಕಂಡೆ. ಅಬ್ದುಲ್ ಗಫಾರ್ ಖಾನ್ ನನಗೆ ಹೇಳಿದರು, ಸುಮಾರು ಒಂದು ಫರ್ಲಾಂಗ್ ದೂರದಲ್ಲಿದ್ದ ಭಾಟಾ ಮಾರ್ಗದಿಂದ ಆಶ್ರಮಕ್ಕೆ ಒಂದು ರಸ್ತೆ ನಿರ್ಮಿಸಲು ಬೇಕಾದ ಸಾಮಗ್ರಿಯನ್ನೆಲ್ಲ ಜಮಾಯಿಸಲು ಗಾಂಧೀಜಿ ತೀರ್ಮಾನಿಸಿದ್ದರು ಎಂದು. ಅದನ್ನು ಆಶ್ರಮದವರೆಲ್ಲರೂ ಮಾಡಬೇಕಿತ್ತು. ರಸ್ತೆ ಅವರಿಗೆ ಮಾತ್ರ ಅಲ್ಲ, ಆದರೆ ಅದರ ರಚನೆಯಲ್ಲಿ ಅವರೆಲ್ಲರೂ ವೈಯಕ್ತಿಕವಾಗಿ ಭಾಗವಹಿಸಿರಬೇಕು.

ಅನೇಕ ವರ್ಷ ನಾನು ಗಾಂಧಿಯವರ ಜೀವನವನ್ನು ಅಧ್ಯಯನ ಮಾಡಿದ್ದೇನೆ. ಒಂದು ವಿಷಯ ನನಗೆ ಎದ್ದು ಕಾಣಿಸಿದೆ. ಅವರು ಯಾವುದೇ ಕಾರ್ಯಕ್ರಮ ಹಮ್ಮಿಕೊಳ್ಳಲಿ, ಅದನ್ನು ನಡೆಸಲು ಆದಷ್ಟು ಹೆಚ್ಚು ಜನರನ್ನು ಸೇರಿಸಿಕೊಳ್ಳಬೇಕು ಎಂಬುದು ಯಾವಾಗಲೂ ಅವರ ಭಾವನೆ ಆಗಿತ್ತು. 1947ರಲ್ಲಿ ಬ್ರಿಟಿಷರು ಭಾರತವನ್ನು ಬಿಟ್ಟು ಹೊರಟರು, ಕಾಂಗ್ರೆಸ್ ಅಧಿಕಾರಕ್ಕೆ ಬಂತು. ಆಗ ಬಂಗಾಳ ಕಾಂಗ್ರೆಸ್ ಪಕ್ಷದ ಸರ್ಕಾರಕ್ಕೆ ಒಳಗಾಯಿತು. ಆ ಸಮಯದಲ್ಲಿ ಒಂದು ಗಲಭೆ ಸಂಭವಿಸಿತು. ಗಾಂಧೀಜಿ ಕಲ್ಕತ್ತಾದಲ್ಲಿದ್ದರು. ನಗರದ ನಿವಾಸಿಗಳಿಗೆ ವಿವೇಕ ಮರಳಿ ಬರಲಿ ಎಂದು, ಅವರು ಉಪವಾಸ ಮಾಡಲು ನಿರ್ಧರಿಸಿದರು. ಆ ಪ್ರಾಂತ್ಯದ ರಾಜ್ಯಪಾಲರಾಗಿದ್ದ ಶ್ರೀ ರಾಜಗೋಪಾಲಾಚಾರಿ ಗಾಂಧೀಜಿಯನ್ನು ಈ ತೀರ್ಮಾನದಿಂದ ಹಿಮ್ಮೆಟ್ಟಿಸಲು ಯತ್ನಿಸಿದರು. ಗಲಭೆಗಳನ್ನು ನಿಲ್ಲಿಸಲು ಸರ್ಕಾರ ಎಲ್ಲ ಕ್ರಮಗಳನ್ನು ಕೈಗೊಳ್ಳುತ್ತದೆ. ಆದರೆ ಆ ಮಧ್ಯೆ ತಾನು, ಸಾಮಾನ್ಯ ಪ್ರಜೆಯಾಗಿ ಏನು ಮಾಡಬೇಕು? ರಾಜಗೋಪಾಲಾಚಾರಿ ಅವರಿಗೆ ಹೆಚ್ಚು ಹೇಳಲು ಆಗಲಿಲ್ಲ. ಗಾಂಧೀಜಿ ಉಪವಾಸಕ್ಕೆ ತೊಡಗಿದರು.

ಉದ್ದೇಶ, ಕಲಕತ್ತೆಯ ಸಜ್ಜನರನ್ನು ಆಲಸ್ಯದಿಂದ ಎಬ್ಬಿಸುವುದು; ಅದರಿಂದ ಪ್ರತಿಯೊಬ್ಬನೂ ತನ್ನ ತನ್ನ ಕ್ಷೇತ್ರಗಳಲ್ಲಿ ಬಲವಾಗಿ ನಿಂತು, ದೊಂಬಿಯನ್ನು ಕೊನೆಗಾಣಿಸಬೇಕು. ವೈಯಕ್ತಿಕ ಜವಾಬ್ದಾರಿಯನ್ನು ಜನ ವಹಿಸಿಕೊಳ್ಳಲಿ ಎಂದು ಗಾಂಧೀಜಿ ಬಯಸಿದ್ದನ್ನು ಅನೇಕರು ಒಪ್ಪಿಕೊಂಡರು. ಅವರ ಪ್ರಯತ್ನದಿಂದಾಗಿ ಶಾಂತಿ ನೆಲೆಗೊಂಡಿತು. ಇದರಲ್ಲಿ ಗಾಂಧೀಜಿ ನಿಜಕ್ಕೂ ಚೆನ್ನಾಗಿಯೇ ಗೆಲುವು



ಸಾಧಿಸಿದ್ದರು.

ಗಾಂಧೀಜಿಯವರ ಜೀವನದಲ್ಲಿನ ಇನ್ನಿತರ ಕೆಲವು ಘಟನೆಗಳನ್ನು ನಾನು ಖುದ್ದಾಗಿ ಕಂಡದ್ದನ್ನು ನೆನೆಸಿಕೊಳ್ಳುತ್ತೇನೆ. 1945ರ ನಂತರ ಭಾರತದ ರಾಜಕೀಯ ಇತಿಹಾಸದಲ್ಲಿ ವೇಗದ ಬದಲಾವಣೆಗಳಾದವು. 1946ರ ಆಗಸ್ಟ್ ಮಧ್ಯದಲ್ಲಿ ಮುಸ್ಲಿಮ್‌ಲೀಗಿನ ನೇರ ಕಾರ್ಯಾಚರಣೆ ಆಯಿತು. ಆಗ ಬಂಗಾಳದ ಆಡಳಿತ ಮುಸ್ಲಿಮ್ ಲೀಗ್ ಪಕ್ಷದ ಕೈಯಲ್ಲಿ ಇತ್ತು. ಹಿಂದೆಯೇ ಗಾಂಧೀಜಿ ಕಲಕತ್ತೆಗೆ ಬಂದರು, ಶಾಂತಿ ಸ್ಥಾಪನೆಗೆ ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಳ್ಳಿ ಎಂದು ಮೊದಲು ಸರ್ಕಾರಕ್ಕೆ ಬಿನ್ನಹ ಮಾಡಲೆಂದು. ಜೊತೆ ಜೊತೆಗೇ ಅವರು ನೌಖಾಲಿಗೆ ಹೊರಟರು, ಅಲ್ಲಿ ಸಾಮಾನ್ಯ ಮುಸ್ಲಿಮರು ತಮ್ಮ ಹಿಂದೂ ನೆರೆಯವರೊಂದಿಗೆ ಸೂಕ್ತವಾಗಿ ನಡೆದುಕೊಳ್ಳಬೇಕೆಂದು ವಿನಂತಿಸಲು. ಗಾಂಧೀಜಿಯ ಖಾಸಾ ಸಿಬ್ಬಂದಿಯಲ್ಲಿ ನಾನೂ ಸೇವೆ ಸಲ್ಲಿಸಬೇಕೆಂದು ಕರೆ ಬಂದದ್ದು ಆಗಲೇ. ಹಾಗೆ ಮಾಡಲು ನನ್ನ ವಿಶ್ವವಿದ್ಯಾನಿಲಯ- ಕಲಕತ್ತಾ ವಿಶ್ವವಿದ್ಯಾನಿಲಯ- ಒಡನೆಯೇ ರಜೆ ನೀಡಿತು. ಆಮೇಲೆ ನಾನು ನೌಖಾಲಿಗೆ ಹೊರಟೆ. ಗಾಂಧಿಯವರು ಸಾಧ್ಯವಾದರೆ ಒಂಟಿಯಾಗಿ ಒಂದು ಸಣ್ಣ ಹಳ್ಳಿಯಲ್ಲಿ ನೆಲಸಲಿದ್ದಾರೆ; ಅಲ್ಲಿ ನಮ್ಮಲ್ಲಿ ಯಾರಾದರೂ ಒಬ್ಬಿಬ್ಬರು ಮಾತ್ರ ಅವರ ಜೊತೆಗಿರುವುದು ಎಂದು ಗಾಂಧೀಜಿಯ ಮೊಕ್ಕಾಮಿಗೆ ಹೋದನಂತರ ತಿಳಿಯಿತು. ಈ ಸಾಹಸದಲ್ಲಿ ಅಡಗಿದ್ದ ಅಪಾಯ ಕುರಿತು ಅವರು ನನಗೆ ಹೇಳಿದರು. ತಮ್ಮೊಂದಿಗೆ ಇದ್ದು ಮಾಡಲು ನನಗೆ ಏನಾದರೂ ತೊಂದರೆ ಉಂಟೇ ಎಂದು ಕೇಳಿದರು.

ತೊಂದರೆ ಅವರಿಗೆ ಆಗ ಬಹುದು, ನನಗಲ್ಲ ಎಂದು ಸ್ವಲ್ಪ ಅಳುಕಿನಿಂದಲೇ ನಾನು ಉತ್ತರಿಸಿದೆ. ಏಕೆಂದರೆ, ಪ್ರಾರ್ಥನೆಗೂ ನನಗೂ ದೂರ, ಆದರೆ ಅವರಿಗೆ ಪ್ರಾರ್ಥನೆಯೇ ಜೀವ. ಥಟ್ಟನೆ ಅವರು ಕೇಳಿದರು, "ನೀನು ದೇವರನ್ನು ನಂಬುವಿಯೋ ಇಲ್ಲವೊ?" ದೇವರು ಇದ್ದಾನೆಯೊ ಇಲ್ಲವೋ ಎಂಬ ಪ್ರಶ್ನೆ ಯಾವತ್ತೂ ನನ್ನ ಬಾಳಿನ ಸಮಸ್ಯೆಯಾಗಿ ಬಂದಿಲ್ಲ. ಆದ್ದರಿಂದ ನಾನು ಆ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ ಎಂದು ಉತ್ತರಿಸಿದೆ. ಅವರು ಕೇಳಿದರು, "ನಿನಗೆ ಯಾವುದರಲ್ಲೂ ನಂಬಿಕೆ ಇಲ್ಲವೇ?" ನಾನೆಂದೆ," ಅದು ಹೇಗೆ? ನಾನು ಸತ್ಯವನ್ನು ನಂಬುತ್ತೇನಲ್ಲ!"

ಗಾಂಧೀಜಿ ಆಕ್ರಮಣಕಾರಕವಾಗಿಯೇ ಹೇಳಿದರು, "ಸತ್ಯ ಎಂದರೆ ಏನು?" ನಾನು ಹೇಳಿದೆ, "ಸತ್ಯವನ್ನು ವಿವರಿಸುವುದು ನನಗೆ ಕಷ್ಟ. ಆದರೆ ವಿಜ್ಞಾನಿಯಾಗಿ ನಾವು ಒಂದು ಸನ್ನಿವೇಶದ ಸತ್ಯತೆಯನ್ನು ಕಂಡುಹಿಡಿಯಲು ಪ್ರಯತ್ನಿಸುತ್ತೇವೆ. ಒಂದು ಊಹಾಧಾರವನ್ನು ರಚಿಸಿಕೊಂಡು ಅದನ್ನು ಇನ್ನಷ್ಟು ತನಿಖೆಗಳಿಂದ ಪರೀಕ್ಷೆ

ಮಾಡಲೆತ್ನಿಸುತ್ತೇವೆ. ಅದು ಹೀಗೆಯೆ ನಡೆಯುತ್ತದೆ. ಆದರೆ ಸತ್ಯ ಯಾವಾಗಲೂ ಹಿಂದೆ ಹಿಂದೆ ಸರಿಯುವಂತೆ ತೋರುತ್ತದೆ. ಇದನ್ನು ಕತ್ತೆಯ ಮೂತಿಯ ಮುಂದೆ ಕೆಂಪು ಮೂಲಂಗಿಯನ್ನು ನೇತು ಬಿಟ್ಟಿದ್ದು ಕತ್ತೆ ಹಾಡುವಂತೆ ಮಾಡುವುದಕ್ಕೆ ಹೋಲಿಸಬಹುದು, ಸತ್ಯದ ಬಗ್ಗೆ ಇದೇ ನಾನು ಕೊಡಬಲ್ಲ ಅತ್ಯುತ್ತಮ ವಿವರಣೆ."ಗಾಂಧೀಜಿ ಹೇಳಿದರು," ನೀನು ಸತ್ಯ ಎಂದು ಭಾವಿಸುವುದರ ಸಲುವಾಗಿ ಪ್ರಾಣಾರ್ಪಣೆ ಮಾಡಲು ಸಿದ್ಧನಿರುವೆಯಾ?" ಇದೊಂದು ವೈಯಕ್ತಿಕ ಪ್ರಶ್ನೆ; ಅಂತೆಯೇ "ನಾನು ಕಷ್ಟ ಅನುಭವಿಸುವುದಕ್ಕೆ ಸಿದ್ಧನಾಗಿರಬೇಕು" ಎಂದೆ. ನಾನು ಹಾಗೆ ಕಷ್ಟ ಅನುಭವಿಸಲು ಸಿದ್ಧನೇ ಅಲ್ಲವೇ, ಆ ಪ್ರಶ್ನೆ ಅಪ್ರಸ್ತುತ, ಆಗ ಅವರು"ಇಷ್ಟು ಸಾಕು" ಎಂದರು.

ಹೀಗೆ ನಾವು ತಿಂಗಳುಗಟ್ಟಲೆ ಒಟ್ಟಿಗೆ ಇದ್ದೆವು. ಸುಮಾರು ಮೂರು ತಿಂಗಳ ನಂತರ ನಾನು ಒಂದು ದಿನ ಅವರನ್ನು, ದೇವರ ಬಗ್ಗೆ ನನ್ನ ಜೊತೆ ಮಾತಾಡಲು ಯತ್ನಿಸುತ್ತಿಲ್ಲವಲ್ಲ ಅಥವಾ ನನ್ನ ತಪ್ಪಿನಿಂದ ವಿಮುಖಗೊಳಿಸಲು ಯತ್ನಿಸುತ್ತಿಲ್ಲವಲ್ಲ, ಏಕೆ ಎಂದು ಕೇಳಿದೆ. ಉತ್ತರದಲ್ಲಿ ಗಾಂಧೀಜಿ ಹೇಳಿದರು "ದೇವರಲ್ಲಿ ನನಗೆ ನಂಬಿಕೆಯಿದೆ, ಅದಕ್ಕೆ ಅನುಸಾರವಾಗಿ ಬಾಳಲು ಯತ್ನಿಸುತ್ತೇನೆ ಎನಿಸುತ್ತದೆ. ಆದರೆ ನನ್ನ ಜೀವನ ನಿನಗೆ ಸಂದೇಶವನ್ನು ತಲುಪಿಸದೆ ಇದ್ದರೆ, ಮಾತನಾಡಿ ಏನು ಪ್ರಯೋಜನ?" ತಮ್ಮ ದೈವ ಶ್ರದ್ಧೆ ಪರೀಕ್ಷಾ ಸಮಯ ತಮ್ಮ ಮರಣಕಾಲದಲ್ಲಿ ಬರುತ್ತದೆ ಎನ್ನುವುದು ಗಾಂಧೀಜಿಯ ನಂಬಿಕೆ. ಆಗ ತಾವು ಬದುಕು-ಸಾವುಗಳನ್ನು ಸಮದೃಷ್ಟಿಯಿಂದ ನೋಡಬಲ್ಲರಾದರೆ, ಆಗ ಮಾತ್ರ ಅವರ ದೈವಶ್ರದ್ಧೆ ನಿಜ ಎಂದು ಸಾಧಿತವಾದೀತು.

ಈ ಸಂದರ್ಭದಲ್ಲಿ, 1945ರ ಇನ್ನೊಂದು ಪ್ರಸಂಗವೂ ನೆನಪಿಗೆ ಬರುತ್ತದೆ. ಒಮ್ಮೆ ಅವರು ನನ್ನನ್ನು ಕರೆದು, ನಾನು ಅವರ ಬರೆಹಗಳನ್ನು ಎಚ್ಚರದಿಂದ ಓದಿದ್ದರ ಬಗ್ಗೆ ಮೆಚ್ಚುಗೆ ಸೂಸಿದರು. ಆದರೆ, ಯಾವಾಗಲೂ ನಾನು ಅವರನ್ನು ತಪ್ಪಾಗಿ ಬಿಂಬಿಸುತ್ತೇನೆ ಎಂಬುದು ಅವರ ತಕರಾರು.ಅನಂತರ, ತಮ್ಮ ಬರೆಹಗಳು ತಮ್ಮ ಆದರ್ಶಗಳನ್ನೂ ಹಂಬಲಗಳನ್ನೂ ಬಿಂಬಿಸುತ್ತವೆ ಎಂದು ಹೇಳಿದರು. ಅವು ತಮ್ಮ ಸಿದ್ಧಿಗಳ ದಾಖಲೆ ಅಲ್ಲ. ನಾನು ತಮ್ಮ ಬರೆಹಗಳಿಂದ ವಾಕ್ಯಗಳನ್ನು ಉದ್ಧರಿಸಿದರೆ, ಗಾಂಧೀಜಿ ವಾಸ್ತವವಾಗಿ ಇರುವುದಕ್ಕಿಂತ ಹೆಚ್ಚು ಪರಿಪೂರ್ಣರಾಗಿದ್ದಾರೆ ಎಂದು ಜನ ನಂಬಬಹುದು. ನಾನು ಕವಿ ರವೀಂದ್ರನಾಥ ಠಾಕೂರರ ಮಾತುಗಳನ್ನು ಉದಾಹರಿಸಿ ಬಿನ್ನವಿಸಿದೆ. ಒಬ್ಬ ವ್ಯಕ್ತಿಯ ಅತ್ಯುತ್ತಮ ಹಾಗೂ ಅತ್ಯುನ್ನತ ಕ್ಷಣಗಳು ಆತನ ನಿಜವಾದ ಸ್ವರೂಪವನ್ನು ಬಿಂಬಿಸುತ್ತವೆಯೇ ವಿನಾ ಆತನ ನಿತ್ಯ ಜೀವನದ ಸಾಮಾನ್ಯತೆ ಅಲ್ಲ ಎಂದು. ಒಡನೆಯೇ ಗಾಂಧೀಜಿ ಉತ್ತರಿಸಿದರು." ನಿಜ, ಕವಿಯ



ಮಾತು ನಿಜ. ಆದರೆ ನಮ್ಮಂಥ ಸಾಮಾನ್ಯರ ವಿಷಯದಲ್ಲಿ, ನಮ್ಮ ಯೋಗ್ಯತೆಯನ್ನು ನೀವು ಅಳೆಯಬೇಕಾದುದು, ನಮ್ಮ ಬಾಳಿನ ಯಾತ್ರೆಯಲ್ಲಿ ನಮ್ಮ ಕಾಲಿನಲ್ಲಿ ನಾವು ಅಂಟಿಸಿಕೊಳ್ಳುವ ಧೂಳಿನ ಪ್ರಮಾಣದ ಮೇಲೆಯೆ." ವಾಸ್ತವವಾಗಿ ಇದು ಗಾಂಧಿಯವರಂಥ ವ್ಯಕ್ತಿತ್ವದಲ್ಲಿ ಅದ್ಭುತವಾದುದು. ಆದರೆ ತಾವು ತಮ್ಮ ಶ್ರೀಸಾಮಾನ್ಯ ಮಾನವ ಗುಣಗಳ ಬಗ್ಗೆ ಅವರು ಎಷ್ಟು ನಿಶ್ಚಿತರಾಗಿದ್ದರು ಎಂಬುದನ್ನು ಇದು ಸಾಬೀತು ಮಾಡಿತು.

ಗಾಂಧೀಜಿಯವರ ದಿನದ ಆರಂಭ ಮುಂಜಾನೆ 4ರ ವೇಳೆಗೆ. ಕೆಲವು ನಿತ್ಯಕರ್ತವ್ಯಗಳನ್ನು ಮುಗಿಸಿ ಮುಂಜಾನೆಯ ಪ್ರಾರ್ಥನೆಗೆ ಬರುವರು. ಪ್ರಾರ್ಥನೆಯಲ್ಲಿ ಭಗವದ್ಗೀತೆಯ ಕೆಲವು ಶ್ಲೋಕಗಳನ್ನು ಪಠಿಸಲಾಗುತ್ತಿತ್ತು. ಇಡೀ ಗೀತೆಯ ಪಠನ ಒಂದು ವಾರದಲ್ಲಿ ಮುಗಿಯಬೇಕು. ಇದು ವ್ಯವಸ್ಥೆ. ಅನಂತರ ಜೇನು ತುಪ್ಪ ಸೇರಿಸಿದ ಬಿಸಿ ನೀರಿನ ಪಾನೀಯ, ಆದಾದ ಮೇಲೆ ಒಂದು ಲೋಟ ಕಿತ್ತಳೆ ಅಥವಾ ದ್ರಾಕ್ಷಿ ಹಣ್ಣಿನ ರಸ. ಆ ಮೇಲೆ ಬಂಗಾಳಿ ಪಾಠಗಳು. ಒಮ್ಮೆ ಅವರೇ ಹೇಳಿದ್ದಂತೆ ರವೀಂದ್ರನಾಥ ಠಾಕೂರರ ಪದ್ಯಗಳನ್ನು ಮೂಲ ಬಂಗಾಳಿಯಲ್ಲೇ ಓದಲು ಸಾಧ್ಯವಾಗಲಿ ಎಂದು ಅವರು ಬಂಗಾಳಿ ಕಲಿಯಲು ಆರಂಭಿಸಿದ್ದು. ಆ ಹಾಡು ಅಥವಾ ಕವನಗಳ ಮೂಲಕ ಅವರಿಗೆ ಉಪನಿಷತ್ತುಗಳ ಸಂದೇಶ ದೊರಕುತ್ತಿತ್ತು. 77 ವರ್ಷ ವಯಸ್ಸಿನಲ್ಲಿ ಬಂಗಾಳಿ ಕಲಿಯಲು ಇದೇ ಮುಖ್ಯಕಾರಣ. ನೌಖಾಲಿಯಲ್ಲಿ ಎಷ್ಟೋಸಲ ಪಾಠ ಹತ್ತು ನಿಮಿಷ ಮಾತ್ರ, ಕೆಲವೊಮ್ಮೆ ಒಂದೋ ಎರಡೋ ನಿಮಿಷವಷ್ಟೇ. ಭಾಷೆಯ ಅಭ್ಯಾಸಕ್ಕೆ ಒಂದೋಎರಡೋ ನಿಮಿಷ ಕೊಟ್ಟರೆ ಏನು ಪ್ರಯೋಜನ ಎಂದು ಒಂದು ದಿನ ನಾನು ಅವರನ್ನು ಕೇಳಿದ್ದೆ."ವ್ರತವನ್ನಾದರೂ ಮುರಿಯುವುದಿಲ್ಲವಲ್ಲ. ದಿನವೂ ಪಾಠಕ್ಕೆ ಬರುತ್ತೇನಲ್ಲ" ಎಂದು ಉತ್ತರಿಸಿದರು.

ಏನನ್ನಾದರೂ ಸರಿಯಾಗಿ ಮಾಡಬೇಕು ಎಂಬ ಬಗ್ಗೆ ಗಾಂಧೀಜಿ ತುಂಬ ಕಟ್ಟುನಿಟ್ಟು; ತುಂಬ ಸೂಕ್ಷ್ಮ. ಯಾರಾದರೂ ಸಂಸ್ಕೃತ ಶ್ಲೋಕವನ್ನೋ ಇಂಗ್ಲೀಷ್ ಪದ್ಯವನ್ನೋ ವಾಚಿಸುತ್ತಿದ್ದರೆ, ವಾಚನ ಸಾಧ್ಯವಾದಷ್ಟು ಪರಿಪೂರ್ಣವಾಗಿರಬೇಕು ಎಂಬುದು ಅವರ ಇಚ್ಛೆ. ಒಂದು ದಿನ ಒಬ್ಬರು ಗೀತೆಯ ಕೆಲವು ಅಧ್ಯಾಯಗಳನ್ನು ಅಡ್ಡಾದಿಡ್ಡಿಯಾಗಿ ಓದಿದರು. ಸಂಸ್ಕೃತ ಉಚ್ಚಾರಣೆಗೆ ಸಾಕಷ್ಟು ಸಮಯ ವಿನಿಯೋಗಿಸಿ, ಇಲ್ಲದೆ ಹೋದರೆ ಅಪರಿಪೂರ್ಣವಾಗುವುದು ಮಾತ್ರವಲ್ಲ, ಅದು ವಾಚನಕ್ಕೆ ಅಪಚಾರ ಮಾಡಿದಂತೆ ಎಂದು ಹೇಳಿದರು. ಪ್ರಾರ್ಥನೆ ಮತ್ತು ಬಂಗಾಳಿ ಪಾಠದ ನಂತರ ತಿರುಗಾಟ; ಅದು ತುಂಬ ಕ್ಲುಪ್ತವಾಗಿ ನಡೆಯುತ್ತಿತ್ತು. ಮಳೆ ಬಂದರೆ, ಅವರು ಪಡಸಾಲೆಯಲ್ಲೆ ಒಂದು ಕೊನೆಯಿಂದ ಇನ್ನೊಂದು ಕೊನೆಗೆ ನಡೆಯುವರು. ಒಟ್ಟಿನಲ್ಲಿ ಅಷ್ಟೇ ದೂರ. ಬೆಳಗಿನ ನಡಿಗೆಯ ನಂತರ, ಎಣ್ಣೆಯಿಂದ ಮಾಲೀಸು,

ಅನಂತರ ಸ್ನಾನ, ಉಪಾಹಾರ, ಅದರಲ್ಲಿ ಕೆಲವು ಬೇಯಿಸಿದ ತರಕಾರಿ ಹಣ್ಣು, ಹಾಲು ಮತ್ತು ಆಗಾಗ ಪಾಲಿಷ್ ಮಾಡದ ಗೋಧಿಯ ರೊಟ್ಟಿಯ ತೆಳು ಚೂರುಗಳು.

ಸಮಯದ ಅತ್ಯಂತ ಸದುಪಯೋಗ ಗಾಂಧೀಜಿಯ ಅಭ್ಯಾಸ. ಹಾಗಾಗಿ, ಸ್ನಾನಕ್ಕೆ ಮುನ್ನಿನ ತೈಲ ಮಾಲೀಸಿನ ಸಮಯದಲ್ಲೂ ಏನಾದರೂ ಪುಸ್ತಕವನ್ನು ಹಿಡಿದುಕೊಂಡು ಓದುವರು. ಮತ್ತೆ ಉಪಾಹಾರದ ವೇಳೆಯಲ್ಲಿ, ಯಾರಾದರೂ ಪತ್ರಗಳನ್ನು ಓದುವರು; ಆ ಪತ್ರಗಳು ನಾನಾ ಬಗೆಯವು. ಬಹುಶಃ ಬಹುಪಾಲು ಪತ್ರಗಳು ವೈಯಕ್ತಿಕ ಸಲಹೆ ಅಥವಾ ಆಶೀರ್ವಾದ ಕೋರುವಂಥವು. ಒಂದು ದಿನ, ಆಶೀರ್ವಾದ ಕೋರುವವರ ಸಂಖ್ಯೆಯಿಂದ ನನಗೆ ಸ್ವಲ್ಪ ಕಸಿವಿಸಿ ಆಗಿತ್ತು. ಗಾಂಧೀಜಿ ಅದನ್ನು ಗಮನಿಸಿದರು. "ಈ ಜನರಿಂದ ನಿನಗೆ ಬೇಜಾರು ಆದಂತಿದೆ!" ಎಂದರು. ಏನೋ ಕಾರಣ ನಾನು ಹೇಳಿದಾಗ ಅವರು, ಒಂದು ಚೂರು ಕಾಗದ ತೆಗೆದುಕೊಂಡು ಅದರಲ್ಲಿ ಬರೆದರು, "ನಾನು ವಿಶೇಷ ಸಂದೇಶ ಕೊಡುವುದಿಲ್ಲ ಆದರೆ ಸಕಾರ್ಯ ನಡೆದಲ್ಲೆಲ್ಲ ನನ್ನ ಆಶೀರ್ವಾದ ಇದೆ." "ಇದನ್ನು ನೂರಾರು ಪ್ರತಿ ಮಾಡು, ಯಾರಾದರೂ ಆಶೀರ್ವಾದ ಕೇಳಿದರೆ, ಒಂದು ಪ್ರತಿಯನ್ನು ಕಳಿಸಿದರಾಯಿತು. ಆತ ಕೈಗೊಂಡ ಕಾರ್ಯ ಒಳ್ಳೇಯದೋ, ಕೆಟ್ಟದೋ, ಆತನ ನಿರ್ಣಯಕ್ಕೆ ಬಿಡಬಹುದು" ಎಂದರು.

ಹೀಗೆ ಗಾಂಧೀಜಿಗೆ ಸಮೃದ್ಧವಾದ ಹಾಸ್ಯ ಪ್ರಜ್ಞೆ ಇತ್ತು. ಅದು ಇಲ್ಲದೆ ಹೋಗಿದ್ದರೆ, ತಾವು ಹುಚ್ಚರಾಗಿ ಬಿಡುತ್ತಿದ್ದರು, ಹಾಗಾಗದಂತೆ ತಡೆದುದೇ ಹಾಸ್ಯ ಪ್ರಜ್ಞೆ ಎನ್ನುತ್ತಿದ್ದರು. ಪತ್ರಗಳ ಬಗ್ಗೆ ಹೇಳುವುದಾದರೆ, ಒಂದು ದಿನ ಒಬ್ಬ ಯುವಕ ತನ್ನ ಮದುವೆಯ ಏರ್ಪಾಡಿಗೆ ನೆರವು ಕೋರಿ ಪತ್ರ ಕಳಿಸಿದ್ದ. ಆತನಿಗೆ ಒಂದು ಹುಡುಗಿಯ ಮೇಲೆ ಆಸೆ;ಆದರೆ ಅದಕ್ಕೆ ತಂದೆಯ ಇಷ್ಟ ಇಲ್ಲ ಎಂಬುದು ಸ್ಪಷ್ಟ. ಹೀಗಾಗಿ ತನ್ನ ಪರ ಶಿಫಾರಸ್ಸು ಮಾಡಬೇಕೆಂದು, ಮನವಿ ಗಾಂಧೀಜಿಯವರ ಮುಂದೆ ಬಂದಿತ್ತು. ಈ ಬಗೆಯ ವಿನಂತಿ ನನಗೆ ತಮಾಷೆ ಎನಿಸಿತು. ಸಾಮಾನ್ಯವಾಗಿ ಅಂಥದನ್ನು ಗಾಂಧೀಜಿಯವರಿಗೆ ಕಳಿಸುತ್ತಿರಲಿಲ್ಲ. ಆದರೆ ಆ ದಿನ, ಗಾಂಧೀಜಿ ಏನೋ ಚಿಂತೆಯಲ್ಲಿದ್ದರು, ಈ ಪತ್ರ ಪ್ರಾಯಶಃ ಸ್ವಲ್ಪ ಮುದ ನೀಡಿತು ಎಂದು ನಾನು ಭಾವಿಸಿದೆ. ಗಾಂಧೀಜಿ ಊಟಮಾಡುತ್ತಿದ್ದಾಗ ನಾನು ಪತ್ರದ ಕೆಲವು ವಾಕ್ಯಗಳನ್ನು ಓದಿದೆ. ಒಂದು ಕಡೆ "ನಾವಿಬ್ಬರೂ ಒಂದಾದರೆ, ಸಂತೋಷವಾಗಿರುತ್ತೇವೆ" ಎಂಬ ಮಾತು ಇತ್ತು. ಅಲ್ಲಿಯವರೆಗೆ, ನಾನು ಓದುತ್ತಿದ್ದುದನ್ನೆಲ್ಲ ಗಾಂಧೀಜಿ ಗಂಭೀರವಾಗಿ ಕೇಳುತ್ತಿದ್ದರು. ನಾನು ಆ ವಾಕ್ಯಕ್ಕೆ ಬಂದೊಡನೆ, ಅವರು ಕೇಳಿದರು, "ಆದಾದ ಮೇಲೆ ಏನು ಹೇಳುತ್ತಾನೆ?" "ಬೇರೆಯಾದರೆ ನಾವು ನಾಶವಾಗುತ್ತೇವೆ." ಏನಾದರೂ ಆಗಲಿ, ನಾನು ಪತ್ರದ ಕೊನೆ



ಮುಟ್ಟಿದೆ. ಅದನ್ನು ಬಿಸಾಡಲು ಮುಂದಾದಾಗ ಅವರು ಒಮ್ಮೆಲೇ ಅದಕ್ಕೆ ಕೈಚಾಚಿದರು. ಸಂಜೆ, ಅವರು ಪತ್ರಗಳಿಗೆ ತಾವು ಬರೆದ ಉತ್ತರಗಳನ್ನು ನನಗೆ ಕೊಡುವಾಗ, ಅವುಗಳಲ್ಲಿ ಒಂದು ಆ ಯುವಕನಿಗೆ ಬರೆದಿದ್ದುದನ್ನು ಕಂಡೆ. ತಂದೆಯೊಂದಿಗೆ ಭಿನ್ನಾಭಿಪ್ರಾಯವಿದ್ದರೆ, ಅವರ ಆಶ್ರಯದಿಂದ ಹೊರಬಂದು ತನ್ನ ಕಾಲ ಮೇಲೆಯೇ ತಾನು ನಿಂತುಕೊಳ್ಳುವಂತೆ ಗಾಂಧೀಜಿ ಬರೆದಿದ್ದರು. ಕೂಲಿಯಾಗಿ ಕನಿಷ್ಠ ಎರಡು ವರ್ಷ ದುಡಿಯಬೇಕು. "ಈ ಪ್ರಯೋಗದಲ್ಲಿ ನಿನ್ನ ಪ್ರೇಮ ಗೆದ್ದರೆ, ನಿನಗೆ ನನ್ನ ಸಂಪೂರ್ಣ ಆಶೀರ್ವಾದ ಇರುವುದು" ಎಂದು ಉತ್ತರಿಸಿದ್ದರು ಗಾಂಧೀಜಿ.

ಆನಂತರ, ನಾನು ಆ ಪತ್ರಕ್ಕೆ ಏಕೆ ಉತ್ತರ ಬರೆದಿರಿ ಎಂದು ಕೇಳಿದಾಗ, ಅವರು ವಿವರಿಸಿದರು," ಈ ಯುವಕನಿಗೆ ಏನು ಹೇಳಲಿ? ತನ್ನ ಜೀವನವನ್ನು ದೇಶಕ್ಕಾಗಿ ಮುಡಿಪಿಡು ಎನ್ನಲೇ? ಅದು ಯಾವ ಪರಿಣಾಮವನ್ನೂ ಬೀರುವುದಿಲ್ಲ. ಬಾಳಿನ ಕಾಡಿನಲ್ಲಿ ಈತ ದಾರಿತಪ್ಪಿದ್ದಾನೆ. ಏನಾದರೂ ದಾರಿ ಕಾಣಲು ನಾನು ಇವನಿಗೆ ನೆರವಾಗುವುದಾದರೆ, ಇವನಿಗೆ ನಾನು ಮಾಡಬಹುದಾದ ಸೇವೆ ಇದೊಂದೇ."

ವ್ಯಕ್ತಿಗಳ ಬಗ್ಗೆ ಅವರಿಗೆ ಇದ್ದ ಈ ಗಾಢ ಕಾಳಜಿಯೇ ಗಾಂಧೀಜಿಯವರನ್ನು ನಮ್ಮ ದೇಶದಲ್ಲೆಲ್ಲ ಸಾವಿರಾರು ಮಂದಿಗೆ ಪ್ರಿಯವಾಗಿಸಿದ್ದು. ಅವರು ಜನರಿಂದ ಅತ್ಯುನ್ನತ ತ್ಯಾಗವನ್ನು ಕೇಳಿದಾಗ ಕೂಡ, ಜನ ತಾವು ಅವರಿಂದ ಪಡೆದಿದ್ದ ವಿಶ್ವಾಸಕ್ಕೆ ಪ್ರತಿಯಾಗಿ ಪ್ರೀತಿ ಗೌರವ ತೋರಲು ಸಿದ್ಧರಾಗಿರುತ್ತಿದ್ದರು. ನಿಜಕ್ಕೂ, ಗಾಂಧೀಜಿಗೆ ಯಾವ ಮಾನವ ಕಷ್ಟಾನುಭವವೂ ಅಲ್ಪವೆನಿಸಲಿಲ್ಲ. ಅಂಥ ಸಂದರ್ಭಗಳು ನಮ್ಮ ದೇಶದಲ್ಲಿ ಸಾಕಷ್ಟು ಹೇರಳ. ಅವರು ಅತ್ಯಂತ ಪ್ರಮುಖ ರಾಜಕೀಯ ಜವಾಬ್ದಾರಿಯಲ್ಲಿ ಮುಳುಗಿದ್ದಾಗಲೂ, ಗಂಡಸರು, ಹೆಂಗಸರು ವೈಯಕ್ತಿಕ ಸಲಹೆ ಕೇಳಲು ಅವರಲ್ಲಿಗೆ ಬರುತ್ತಿದ್ದ ಅನೇಕ ಸಂದರ್ಭಗಳನ್ನು ನಾನು ಉದಾಹರಿಸಬಲ್ಲೆ. ಆದರೆ ಗಾಂಧೀಜಿಗೆ ಇಡೀ ರಾಷ್ಟ್ರದ ಸಂಕಟಗಳ ಬಗ್ಗೆ ಎಷ್ಟು ಕಾಳಜಿ ಇತ್ತೋ ಸಾಮಾನ್ಯ ವ್ಯಕ್ತಿಗಳ ಸಂಕಟಗಳ ಬಗ್ಗೆಯೂ ಅಷ್ಟೇ ಕಾಳಜಿ ಎನಿಸುತ್ತಿತ್ತು. ಪತ್ರಗಳಿಗೆ ಉತ್ತರಿಸುವಾಗ, ಅವು ಬಂದ ಕ್ರಮದಲ್ಲಿಯೇ ಉತ್ತರಿಸಬೇಕು. ಇದು ತಮ್ಮ ದೈನಂದಿನ ಪತ್ರ ವ್ಯವಹಾರದ ಬಗ್ಗೆ ಅವರು ನಮಗೆ ಕೊಟ್ಟಿದ್ದ ಸೂಚನೆ. ಯಾವುದೇ ಮುಖ್ಯ ವ್ಯಕ್ತಿಯ ಪತ್ರವೇ ಆಗಲಿ, ಸಾಮಾನ್ಯವ್ಯಕ್ತಿಯಿಂದ ಬಂದ ಪತ್ರಕ್ಕಿಂತ ಹೆಚ್ಚು ತುರ್ತು ಗಮನಕ್ಕೆ ಅಗತ್ಯ ಎಂದು ಭಾವಿಸತಕ್ಕದ್ದಲ್ಲ.

ವ್ಯಕ್ತಿಗಳ ಬಗೆಗಿನ ಕಾಳಜಿಯಲ್ಲಿ, ಪ್ರಾಯಶಃ ಗಾಂಧೀಜಿ ಸ್ವಲ್ಪ ಅತಿಯಾಗಿಯೆ ಇದ್ದರು. ಒಂದು ವೈಯಕ್ತಿಕ ಘಟನೆಯನ್ನು ಹೇಳಿದರೆ ನೀವು ನನ್ನನ್ನು ಕ್ಷಮಿಸುತ್ತೀರಿ ಎಂದು ಭಾವಿಸುತ್ತೇನೆ. ಒಮ್ಮೆ ನೌಖಾಲಿಯಲ್ಲಿ, ನಾನು ಕಾಲಕಾಲಕ್ಕೆ

ಆಹಾರ ತೆಗೆದುಕೊಳ್ಳುತ್ತಿಲ್ಲ, ತೂಕ ಕಡಿಮೆ ಆಗಿದೆ ಎಂದು ಅವರಿಗೆ ಅನಿಸಿತು. ಆಹಾರದ ಬಗ್ಗೆ ನನ್ನನ್ನು ಕೇಳಿದರು. ನಾನು ಸಸ್ಯಾಹಾರಿಯಲ್ಲ, ಆದರೆ ಎಲ್ಲರೂ ಸಸ್ಯಾಹಾರಿಗಳೇ ಆಗಿದ್ದ ತಂಡದಲ್ಲಿದ್ದಾಗ ನಾನು ಮೀನು ತಿನ್ನಲು ಇಚ್ಛಿಸುವುದಿಲ್ಲ ಎಂದು ಹೇಳಿದೆ. ಯಾರ ಜೊತೆಯಲ್ಲಿ ಇರುವಿಯೋ ಅವರ ಜೊತೆಯನ್ನು ಬಿಟ್ಟು, ನಮ್ಮ ಆತಿಥೇಯರ ಮನೆಯಲ್ಲಿ ಊಟ ಮಾಡು ಎಂದು ಗಾಂಧೀಜಿ ಸೂಚಿಸಿದರು. ಅದು ಸೌಜನ್ಯವಲ್ಲ, ಹಾಗೆ ಮಾಡಲಾರೆ ಎಂದೆ; ಗಾಂಧೀಜಿ ನನಗೆ ಮೀನು ತಿನ್ನಲು ಸೂಚಿಸಿದ್ದಕ್ಕೆ, ನನ್ನ ಪಕ್ಕದಲ್ಲಿ ಕೂತಿದ್ದವರೊಬ್ಬರು ಆಶ್ಚರ್ಯ ವ್ಯಕ್ತಪಡಿಸಿದರು. ಅದರಲ್ಲಿ ಗಾಂಧೀಜಿಗೆ ತಪ್ಪೇನೂ ಕಾಣಿಸಲಿಲ್ಲ. "ಪೂರ್ವಬಂಗಾಳದಲ್ಲಿ ಎಲ್ಲೆಲ್ಲೂ ನೀರೇ. ಅದರಲ್ಲಿ ಮೀನು, ಭತ್ತ ಬೆಳೆಯುತ್ತಾರೆ. ಮೀನು ತಿಂದರೆ ಏನು ತಪ್ಪು?" ಎಂದರು. "ಅಂದರೆ ಪ್ರಾಣ ತೆಗೆದ ಹಾಗಲ್ಲವೇ?" ಎಂದು ಕೇಳಿದರು ಆ ಮಹನೀಯರು. "ಹೌದು, ಧಾರಾಳವಾಗಿ. ಆದರೆ, ಆಹಾರ ಕಲಬೆರಕೆಗಿಂತ ಕಡಿಮೆ ಪ್ರಾಣಹಾನಿ ಅಲ್ಲವೇ?" ಎಂದರು ಗಾಂಧೀಜಿ.

ವ್ಯಕ್ತಿಯ ಬಗ್ಗೆ ಅವರಿಗೆ ಗಾಢವಾದ ಕಾಳಜಿ ಇದ್ದರೂ, ಮತ್ತು ಸಾಮಾನ್ಯ ಮಾನವ ವ್ಯಕ್ತಿಗಳ ಬಗ್ಗೆ ಅವರು ಆಳವಾದ ಪ್ರೀತಿ ಔದಾರ್ಯ ತೋರಿದರೂ, ಅವರ ಚಾರಿತ್ರ್ಯದಲ್ಲಿ ಇನ್ನೊಂದು ಅತ್ಯಂತ ಗಣನಾರ್ಹ ಅಂಶವಿತ್ತು. ಇದಕ್ಕೆ ಎರಡು ಉದಾಹರಣೆಗಳಿಂದ ವಿವರಣೆ ನೀಡುತ್ತೇನೆ. ಒಮ್ಮೆ ನಾವು ನೌಖಾಲಿಯಲ್ಲಿ ಒಂದು ಮನೆಯನ್ನು ದಾಟಿ ಹೋಗುತ್ತಿದ್ದೆವು, ಅದನ್ನು ಲೂಟಿಮಾಡಲಾಗಿತ್ತು. ಅದರಲ್ಲಿನ ಗಂಡಸರನ್ನು ಇರಿದು ಕೊಲ್ಲಲಾಗಿತ್ತು. ಹೆಂಗಸರು ನಿರಾಶ್ರಿತರ ಶಿಬಿರದಲ್ಲಿ ಆಶ್ರಯ ಪಡೆದಿದ್ದರು. ಗಾಂಧೀಜಿ ನೌಖಾಲಿಯ ಪಾದಯಾತ್ರೆಯ ಪ್ರವಾಸದಲ್ಲಿ ತಮ್ಮ ಹಳ್ಳಿಯಲ್ಲಿ ಹಾದು ಹೋಗುತ್ತಾರೆ ಎಂದು ಅವರಿಗೆ ಸುದ್ದಿ ಮುಟ್ಟಿದಾಗ ಅವರು, ಮುರಿದು ಬಿದ್ದಿದ್ದ ತಮ್ಮ ಹಿಂದಿನ ಮನೆಗೆ ಬಂದು, ಅಂಗಳದಲ್ಲಿ ಗಾಂಧೀಜಿಗೆ ಸ್ವಾಗತ ಕೋರಿದರು. ಗೌರವದಿಂದ ಅವರ ಪಾದಸ್ಪರ್ಶ ಮಾಡಿದರು. ಅವರ ಕಣ್ಣಿನಲ್ಲಿ ನೀರಿನ ಧಾರೆ. ಬಂಗಾಳಿಯಲ್ಲಿ ಏನನ್ನೋ ಹೇಳಿಕೊಂಡರು. ನಾನು ಆ ಹೆಂಗಸರಿಗೆ ಏನು ಸಂಭವಿಸಿತ್ತೋ ಅದನ್ನು ಗಾಂಧೀಜಿಗೆ ಹೇಳಿದೆ. ಆ ಜನ ಗಾಂಧೀಜಿಯ ಸಾಂತ್ವನಕ್ಕಾಗಿ ಹೇಗೆ ಹಸಿದಿದ್ದಾರೆ ಎಂದು ಹೇಳಿದೆ. ಒಮ್ಮೆಲೇ ಅವರ ಮುಖ ಗಂಭೀರವಾಯಿತು. "ಈ ಸೋದರಿಯರಿಗೆ ಹೇಳು, ನಾನಿಲ್ಲಿಗೆ ಬಂದಿರುವುದು ಸಾಂತ್ವನ ನೀಡಲು ಅಲ್ಲ, ಧೈರ್ಯವನ್ನು ನೀಡಲು. ಧೈರ್ಯ ಇಲ್ಲವಾದರೆ, ಭಾರತಕ್ಕೆ ಉಳಿಗಾಲವಿಲ್ಲ," ಎಂದರು.

ಕಲಕತ್ತ ನಗರದಲ್ಲಿಯೂ ಇಂಥದೊಂದು ಘಟನೆ ನಡೆಯಿತು. 1947ರ ಆಗಸ್ಟ್‌ನಲ್ಲಿ, ಮಿಯಾಬಗಾನ್ ಬಸ್ತಿ ಎಂಬ ಒಂದು ಕೊಳಚೆ ಪ್ರದೇಶದಲ್ಲಿ ಅವರು



ಬೆಲಿಯಾ ಘಾಟಿನ ಮನೆಯೊಂದರಲ್ಲಿ ತಂಗಿದ್ದರು. ಹಿಂದೆ ನಾನಾ ಸ್ತರದ ಮುಸ್ಲಿಮರು ವಾಸಿಸುತ್ತಿದ್ದ ಜಾಗ. ಸ್ಥಳೀಯ ಹಿಂದೂ ಯುವಕರು ಕೈಬಾಂಬು, ಸ್ಟೆನ್‌ಗನ್‌ಗಳನ್ನು ಬಳಸಿ, ಅವರನ್ನೆಲ್ಲ ಓಡಿಸಿಬಿಟ್ಟಿದ್ದರು. ಆ ಶಸ್ತ್ರಗಳು ಯುದ್ಧಾನಂತರ ಕಳ್ಳಸಾಗಾಣಿಕೆಯಾಗಿ ಬಂದವು. ಆ ಮುಸ್ಲಿಮರನ್ನು ಹಿಂದಕ್ಕೆ ಕರೆತರಬೇಕು, ಭಾರತದ ಸಮಾನ ಪ್ರಜೆಗಳಂತೆ ಯಾವ ಭೇದವನ್ನೂ ಮಾಡದೆ ನೋಡಿಕೊಳ್ಳಬೇಕು, ಅದರಿಂದ ಅವರಲ್ಲಿ ಭಾರತದ ಬಗೆಗೆ ನಿಷ್ಠೆ ಬೆಳೆಯಬೇಕು ಎಂದು ಆ ಯುವಕರಿಗೆ ತಿಳಿಯ ಹೇಳಲು ಗಾಂಧೀಜಿ ಬಂದರು. ಆಗ ಅನೇಕರು ಮುಂದೆ ಬಂದು, ಅವರ ವಿರುದ್ಧ ಕಪ್ಪು ಬಾವುಟ ತೋರಿಸಿ, ಹಿಂದಕ್ಕೆ ಹೋಗಿ ಎಂಬ ಪಟಗಳನ್ನು ಹಿಡಿದು ಪ್ರತಿಭಟಿಸಿದರು. ಆದರೆ ಗಾಂಧೀಜಿ ತಾಳ್ಮೆಯಿಂದ ಅವರೊಂದಿಗೆ ಐದಾರು ತಾಸು ವಾದ ಮಾಡಿದರು. ಕೊನೆಗೆ, ಮುಸ್ಲಿಮರೇ ಪ್ರಧಾನವಾಗಿದ್ದ ಸ್ಥಳಗಳಿಂದ ಓಡಿ ಹೋಗಿದ್ದವರಲ್ಲಿ, ಕನಿಷ್ಠಪಕ್ಷ ಕೆಲಸ ಮಾಡುತ್ತಿದ್ದವರನ್ನಾದರೂ ಹಿಂದಕ್ಕೆ ಕರೆತರಬೇಕೆಂದು ಆ ಯುವಜನರ ಮನ ಒಪ್ಪಿಸಿದರು. ಹಾಗೆಯೇ ಮಾಡಲಾಯಿತು.

ಆದರೆ ಹದಿನೈದು ದಿನಗಳಲ್ಲಿಯೇ ಕಲಕತ್ತೆಯಲ್ಲಿ ಮತ್ತೆ ಹಿಂದೂ ಮುಸ್ಲಿಮರ ನಡುವೆ ಪರಿಸ್ಥಿತಿ ಬಿಗಡಾಯಿಸಿತು. ಹಿಂದೂಗಳು ಆಕ್ರಮಣಕಾರರಾದರು. ಈಗ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿದೆ, ಈ ಹಿಂದೆ ಪಾಕಿಸ್ತಾನಕ್ಕಾಗಿ ಕೆಲಸಮಾಡಿದ್ದ ಮುಸ್ಲಿಮರಿಗೆ ತಕ್ಕ ಶಾಸ್ತಿ ಮಾಡಿದರೆ ಯಾರೂ ತಮ್ಮನ್ನು ತಡೆಯುವುದಿಲ್ಲ ಎಂಬ ನಂಬಿಕೆಯಿಂದ ಇರಬಹುದು. ದುರದೃಷ್ಟವಶಾತ್ 1947ರ ಆಗಸ್ಟ್ ಕೊನೆಯಲ್ಲಿ, ಪಕ್ಕದ ಸ್ಥಳದಲ್ಲಿ ಗಲಭೆ ಆರಂಭವಾಯಿತು. ಹಿಂದಿರುಗಿ ಬಂದಿದ್ದ ಮುಸ್ಲಿಮರು ಎದೆಗೆಟ್ಟರು. ಸುಮಾರು ಒಂದು ಮೈಲಿ ಆಚೆ ಇದ್ದು, ಬಹು ಮಟ್ಟಿಗೆ ಮುಸ್ಲಿಮ್ ಪ್ರದೇಶವಾಗಿದ್ದ ರಾಜಾ ಬಜಾರಿಗೆ ತಮ್ಮನ್ನು ಕಳಿಸಿಬಿಡಬೇಕೆಂದು ಗಾಂಧೀಜಿಗೆ ಮೊರೆಯಿಟ್ಟರು. ಹಾಗೆ ಮಾಡಲು ಗಾಂಧೀಜಿ ಒಪ್ಪಿದರು. ಸ್ಥಳ ಬಿಟ್ಟು ಹೊರಡಲು ಒಂದು ಟ್ರಕ್ ಸಜ್ಜಾಯಿತು. ನಲವತ್ತು ಜನರನ್ನು ಹೊತ್ತ ಟ್ರಕ್ಕು ಹೊರಟ ಒಡನೆಯೇ ಇದ್ದಕ್ಕಿದ್ದಂತೆ, ಅದರ ಮೇಲೆ ಕೈ ಬಾಂಬುಗಳನ್ನು ಎಸೆಯಲಾಯಿತು. ಇಬ್ಬರು ಆಗಲೇ ಸತ್ತು ಬಿದ್ದರು. ಆ ಪೈಕಿ ಒಬ್ಬನ ತಾಯಿ ತನ್ನ ಮಗನ ಶವದ ಪಕ್ಕದಲ್ಲೇ ಕುಳಿತಳು. ಅವಳ ಬಟ್ಟೆ ಮಗನ ರಕ್ತ ಮಾಂಸಗಳಿಂದ ಸಿಕ್ತವಾಗಿತ್ತು. ಗಾಂಧೀಜಿ ನಿಧಾನವಾಗಿ ಆ ಅನಾಹುತದ ಸ್ಥಳವನ್ನು ಸಮೀಪಿಸಿದರು. ಆಕೆ ಜೋರಾಗಿ ಅಳುತ್ತಿದ್ದಳು. "ಅವಳಿಗೆ ಈ ಮಗನನ್ನು ಕೊಟ್ಟದ್ದು ದೇವರ ಕರುಣೆ. ಈಗ ಅವನನ್ನು ವಾಪಸು ತೆಗೆದುಕೊಂಡಿರುವುದೂ ದೈವೇಚ್ಛೆ. ದೂರಲು ನಮಗೇನು ಹಕ್ಕು? ಹೀಗೆ ಅವಳಿಗೆ ಹೇಳು" ಎಂದು ಗಾಂಧೀಜಿ ನನಗೆ ತಿಳಿಸಿದರು. ಆ ತಾಯಿಗೆ ಈ ಮಾತು ಹೇಳುವುದು ನನ್ನಿಂದ ಸಾಧ್ಯವಿಲ್ಲ

ಎಂದು ನಾನು ಹೇಳಿದೆ.

ಗಾಂಧೀಜಿ ಹಿಂದಿರುಗಿದ ನಂತರ, ನಾನು ಸುಮಾರು ನೂರು ಗಜ ದೂರದಲ್ಲಿ ನಿಂತಿದ್ದ ಕೆಲವು ಯುವಕರ ಬಳಿ ಸಾರಿ, ನೀವು ಗಾಂಧೀಜಿಗೆ ಕೊಟ್ಟ ಮಾತನ್ನು ಮುರಿದಿರಲ್ಲ ಎಂದು ಛೇಡಿಸಿದೆ. ಅವರು ನಿಜವಾಗಿಯೂ ಖೇದವನ್ನು ವ್ಯಕ್ತಪಡಿಸಿದರು. ಗಾಂಧೀಜಿಯ ಮಾತು ಇಬ್ಬರಿಗೆ ಹಿಡಿಸಿರಲಿಲ್ಲ, ಅದಕ್ಕೆ ಈ ಅನಾಹುತ ಆಯಿತು ಎಂದು ಹೇಳಿದರು. ಅವರ ಕೋರಿಕೆ ಒಂದಿತ್ತು. ಬಸ್ತಿಯಲ್ಲಿ ಇನ್ನೂ ಕೆಲವು ಮುಸ್ಲಿಮರು ಉಳಿದಿದ್ದರು. ಅವರನ್ನು ಒಕ್ಕಲೆಬ್ಬಿಸಲು ತಾವು ಬಿಡುವುದಿಲ್ಲ ಎಂದರು. " ಅವರುಗಳನ್ನು ಅಹಿಂಸೆಯಿಂದ ರಕ್ಷಿಸುವುದು ಹೇಗೋ ನಾವರಿಯೆವು, ಆದರೆ ಸ್ಟೆನ್‌ಗನ್‌ಗಳಿಂದ ರಕ್ಷಿಸುತ್ತೇವೆ. ಗಾಂಧೀಜಿಗೆ ಕೊಟ್ಟ ಮಾತನ್ನು ನಾವು ಗೌರವಿಸುತ್ತೇವೆ. ಆದರೆ ಪರವಾನಗಿರಹಿತ ಶಸ್ತ್ರಗಳಸಲುವಾಗಿ ಪೊಲೀಸರು ನಮ್ಮನ್ನು ಬಂಧಿಸಿದರೆ, ಗಾಂಧೀಜಿ ನಮ್ಮನ್ನು ಬಿಡಿಸಬೇಕು" ಎಂದರು.

ಅದೊಂದು ವಿಚಿತ್ರ ಕೋರಿಕೆ. ಆದರೂ, ಹತ್ತಿರದ ತೋಟದಲ್ಲಿ ಮೆಲ್ಲಗೆ ಅಡ್ಡಾಡುತ್ತಿದ್ದ ಗಾಂಧೀಜಿಗೆ ನಾನು ವಿಷಯವನ್ನು ತಿಳಿಸಿದಾಗ, ಕ್ಷಣ ಮಾತ್ರವೂ ಹಿಂದೆ ಮುಂದೆ ನೋಡಿದೆ." ಆ ಹುಡುಗರಿಗೆ ಹೇಳು, ನಾನು ಅವರ ಜೊತೆಗೆ ಇರುತ್ತೇನೆ" ಎಂದರು. ಅನಂತರ ಸಂಜೆ, ಅವರು ಹಾಗೇಕೆ ಹೇಳಿದರೆಂದು ನಾನು ಕೇಳಿದೆ. ಅದಕ್ಕೆ ಗಾಂಧೀಜಿ, ಆ ಹುಡುಗರು ಅಹಿಂಸೆಯನ್ನು ನಂಬದಿರುವವರೆಗೂ, ಅವರ ಉದ್ದೇಶ ನ್ಯಾಯವಾದುದಾಗಿದ್ದರೆ, ತಾವು ಅವರಿಗೆ ತಮ್ಮ ನೈತಿಕ ಬೆಂಬಲ ಕೊಡುವುದಾಗಿ ಹೇಳಿದರು. ಆದರೆ ಅದು ತಮ್ಮ ಅಹಿಂಸಾಶ್ರದ್ಧೆಗೆ ಒಂದು ಸವಾಲಿನಂತೆ ಬಂದಿದೆ ಎಂದೂ ಹೇಳಿದರು. ಅಹಿಂಸೆ ಹಿಂಸೆಗಿಂತ ಉತ್ತಮವಾದ ರಕ್ಷಣೆ ನೀಡಬಲ್ಲದು ಎಂಬುದನ್ನು ತಾವು ತೋರಿಸಿಕೊಡದೆ ಹೋದರೆ, ಅಹಿಂಸೆಯ ಅನುಭವ ಇಲ್ಲದವರಿಗೆ ಆ ಬಗ್ಗೆ ತಾವು ಹೇಳುವುದಾದರೂ ಹೇಗೆ?

ಹಾಗಾಗಿ ಆ ಸಂಜೆ ಅವರು ಉಪವಾಸ ಕೈಗೊಂಡರು. ಕಲಕತ್ತೆಯ ಜನ ವಿವೇಕಕ್ಕೆ ಮರಳದೆ ಹೋದರೆ, ಉಪವಾಸ ಆಮರಣಾಂತವಾಗುವುದು ಎಂದರು. ಅದೃಷ್ಟವಶಾತ್, ಗಾಂಧಿಯವರ ವ್ರತ, ಕಲಕತ್ತೆಯ ಜನರ ಹೃದಯವನ್ನು ಮಿಡಿಯಿತು. 72 ಗಂಟೆಗಳ ಉಪವಾಸ ಕಳೆದ ನಂತರ ಅನೇಕ ಜನ ನಗರದ ನಾನಾ ಭಾಗಗಳಿಂದ ದಂಗೆ-ದೊಂಬಿ ಅಡಗಿಸಲು ಕ್ರಿಯಾ ಶೀಲವಾಗಿ ನೆರವೀಯಲು ಮುಂದೆ ಬಂದರು. ಗಲಭೆಗಳಲ್ಲಿ ಸಕ್ರಿಯ ಪಾತ್ರ ವಹಿಸಿದ್ದ ಅನೇಕರೂ, ತಮಲ್ಲಿದ್ದ ಬಾಂಬು ಗನ್ನುಗಳನ್ನು ಗಾಂಧೀಜಿಯ ಪದತಲದಲ್ಲಿ ಅರ್ಪಿಸಿದರು.

ಆಮೇಲೆ ನಾನು ಇದನ್ನು ಗಾಂಧೀಜಿಯೊಂದಿಗೆ ಚರ್ಚಿಸಿದಾಗ, ಅಹಿಂಸೆ ಕೆಲಸಮಾಡುವುದು ಹೀಗೆಯೇ ಎಂದು ವಿವರಿಸಿದರು ಗಾಂಧೀಜಿ. ಒಳಿತು



ಸಾಮಾನ್ಯವಾಗಿ ನಿಧಾನ, ಸಂದೇಹಪೂರ್ಣ. ಆದರೆ ಜನಸಾಮಾನ್ಯರನ್ನು ಪ್ರೀತಿಸುವ ಒಬ್ಬಾತ, ಜನತೆಯ ನಿಷ್ಕ್ರಿಯತೆಯಿಂದ ಬಾಧಿತವಾಗಿ, ಅವರು ಬದಲಾಗದಿದ್ದರೆ, ತನ್ನ ಪ್ರಾಣವನ್ನೇ ಅರ್ಪಿಸುವುದಾಗಿ ತೀರ್ಮಾನಿಸಿದರೆ, ಆಗ ಜನತೆಯ ಆಲಸ್ಯ ತತ್ತರಿಸಿಹೋಗುತ್ತದೆ ಮತ್ತು ತಾವು ಆ ಮುಂಚೆಯೇ ಏನನ್ನು ಮಾಡಬೇಕಾಗಿತ್ತೋ ಅದನ್ನು ಮಾಡಲಾರಂಭಿಸುವರು.ಅಂತಹ ಉಪವಾಸಗಳಿಂದ, ಅತ್ಯಂತ ದುಷ್ಕರ್ಮಿಯ ಹೃದಯ ಪರಿವರ್ತನೆ ಮಾಡಬಹುದು ಎಂದು ಗಾಂಧೀಜಿ ನಂಬಿರಲಿಲ್ಲ. ಆದರೆ, ಯಾರು ತಮಗೆ ಸಕ್ರಿಯವೋ ಅಥವಾ ನಿಷ್ಕ್ರಿಯವೋ ಆದ ಬೆಂಬಲ ನೀಡಿದ್ದರೋ, ಅವರು ಈ ಪ್ರಸಂಗದಲ್ಲಿ ಆದ ಹಾಗೆ ತಮ್ಮಿಂದ ದೂರ ಹೋದಲ್ಲಿ, ಆಗ ಅಹಿಂಸೆಗೆ ಜಯ ಲಭಿಸುತ್ತದೆ. ಒಳಿತು ಕ್ರಿಯಾಶೀಲವಾದಾಗ, ಕೆಡುಕು ಮೂಲೆಗುಂಪಾಗುತ್ತದೆ.

ಗಾಂಧೀಜಿ ಎಷ್ಟು ಔನ್ನತ್ಯಕ್ಕೆ ಏರಬಲ್ಲರು ಎಂಬುದನ್ನು ಇಂತಹ ಸಂದರ್ಭಗಳಿಂದ ನಾವು ಗ್ರಹಿಸುತ್ತೇವೆ. ಗಾಂಧೀಜಿ ಮಣ್ಣಿನಿಂದ ವೀರರನ್ನು ಸೃಜಿಸಬಲ್ಲ ಸಮರ್ಥರು ಎಂದು ಒಮ್ಮೆ ಅವರ ಬಗ್ಗೆ ಗೋಖಲೆ ಹೇಳಿದರು. ಜನ ತಾವು ಯಾವ ಔನ್ನತ್ಯಕ್ಕೆ ಏರಬೇಕೆಂದು ಬಯಸಿದರೋ ಅದನ್ನೇ ಗಾಂಧೀಜಿಯಲ್ಲಿ ಗುರುತಿಸಬಹುದಿತ್ತು. ಪ್ರಾಯಶಃ ಅವರಿಗೆ ಪ್ರೋತ್ಸಾಹವಿತ್ತ ಸಂಗತಿ ಏನೆಂದರೆ, ತಮ್ಮವನೇ ಆಗಿ ಜೊತೆಗೆ ನಿಲ್ಲುವಂಥ ಒಬ್ಬಾತ ಇಲ್ಲಿದ್ದಾನೆ ಎಂಬುದು.

❖ ❖ ❖ ❖

# ೨. ಸತ್ಯಾಗ್ರಹ ಮತ್ತು ಯುದ್ಧ

ನಿನ್ನೆ, ಗಾಂಧೀಜಿಯ ವ್ಯಕ್ತಿತ್ವದ ಒಂದು ಚಿತ್ರವನ್ನು ನೀಡಲು ಯತ್ನಿಸಿದೆ. ಅವರು ಎದ್ದುಕಾಣುವ ವಿವೇಕ ಮತ್ತು ಧೈರ್ಯಗಳಿಂದ ಜನತೆಗಿಂತ ಎಷ್ಟೋ ಉನ್ನತರಾಗಿದ್ದರೂ ಕೂಡ, ಹೇಗೆ ಅವರು ಪ್ರೀತಿಯ ಮೂಲಕ, ತಮ್ಮ ಸುತ್ತಲ ಜನರೊಂದಿಗೆ ಸಂಬಂಧ ಉಳಿಸಿಕೊಳ್ಳುವುದರಲ್ಲಿ ಯಶಸ್ವಿಗಳಾದರು-ಎಂಬುದನ್ನು ತೋರಿಸಿಕೊಡುವುದು ನನ್ನ ಉದ್ದೇಶವಾಗಿತ್ತು. ಅಲ್ಲದೆ, ನಾನಾ ನಿಷ್ಠೆಯ ಜನರ ಜೊತೆಗೆ ಅವರು ಹೇಗೆ ನಡೆದುಕೊಳ್ಳುತ್ತಿದ್ದರು ಎಂಬುದನ್ನು ಸೂಚಿಸಲೂ ನಾನು ಯತ್ನಿಸಿದೆ. ನಿಷ್ಠೆ ಎಂದರೆ ಇಲ್ಲಿ ಇಂಥದೇ ಮತಧರ್ಮ ಎಂಬರ್ಥದಲ್ಲಿ ಅಲ್ಲ, ಎಲ್ಲ ಬಗೆಯ ನಿಷ್ಠೆಗಳು. ಕಲಾವಿದನಿಗೆ ತನ್ನ ವೃತ್ತಿಯಲ್ಲಿರುವ ನಿಷ್ಠೆ, ವೀರನಿಗೆ, ತಾನು ಯಾವ ಉದ್ದೇಶದ ಸಲುವಾಗಿ ಶಸ್ತ್ರ ಎತ್ತಿಕೊಳ್ಳುವನೋ ಅದರ ನ್ಯಾಯಪರತೆಯಲ್ಲಿ ನಿಷ್ಠೆ ಅಥವಾ ಸತ್ಯ ಕುರಿತ ತನ್ನ ವಿಶಿಷ್ಟ ದೃಷ್ಟಿಯ ಬಗ್ಗೆ ಆಜ್ಞೇಯವಾದಿಗೆ ಇರುವ ನಿಷ್ಠೆ-ಮುಂತಾಗಿ, ಅಂಥ ಅಭಿಪ್ರಾಯಗಳು ಪ್ರಮಾಣಿಕವಾಗಿದ್ದರೆ, ಗಾಂಧೀಜಿ ಅವುಗಳನ್ನು ಗೌರವಿಸುತ್ತಿದ್ದರು. ವಿರುದ್ಧ ದೃಷ್ಟಿಯುಳ್ಳ ಜನರೊಂದಿಗೆ ಕೆಲಸ ಮಾಡಲು ಅವರಿಗೆ ಕಷ್ಟ ತೋರುತ್ತಿರಲಿಲ್ಲ. ಆದರೆ, ಅವರೊಂದಿಗೆ ಹಂಚಿಕೊಳ್ಳಲು ಸಮಾನಾಂಶಗಳು ಇದ್ದರೆ ಸಾಕಾಗಿತ್ತು.

ಗಾಂಧೀಜಿ ಬಗೆಹರಿಸಲು ಹೆಣಗಿದ ಒಂದು ಅತಿ ಮುಖ್ಯ ಸಮಸ್ಯೆ ಎಂದರೆ ಯುದ್ಧದ ಸಮಸ್ಯೆ. ಯುದ್ಧ, ಸಾಮಾಜಿಕ ಬದಲಾವಣೆಯನ್ನು ತರತಕ್ಕ ಒಂದು ಅತಿ ಪರಿಣಾಮಕಾರಿ ವಿಧಾನ ಎಂದು ಅವರು ಬಲ್ಲವರಾಗಿದ್ದರು. ಆದರೆ, ಯುದ್ಧದಿಂದ ಸಾಧಿತವಾದ ಗುರಿ ಎಷ್ಟೋ ಸಲ, ಆ ಯುದ್ಧ ನಡೆದ ಉದ್ದೇಶಕ್ಕಿಂತ ಭಿನ್ನವೇ ಆಗಿರುತ್ತದೆ ಎಂಬುದನ್ನು ಅವರು ತಿಳಿದಿದ್ದರು. ಮೇಲಾಗಿ, ಯುದ್ಧ ದುಬಾರಿ ವಿಧಾನ, ನಾಶಕಾರಕ ವಿಧಾನ. ಆದ್ದರಿಂದ ಮಾನವನ ವ್ಯಾಜ್ಯಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಹೆಚ್ಚುಅಗ್ಗವಾಗಿ ಬಗೆಹರಿಸಬಲ್ಲ ವಿಧಾನವನ್ನು ಪತ್ತೆ ಮಾಡಲು ಯತ್ನಿಸುತ್ತಿದ್ದರು. ಒಳ್ಳೆಯ ವಿಧಾನ ಕೊನೆಯಲ್ಲಿ ಜನರಿಗೆ ಆರಂಭಕ್ಕಿಂತಲೂ ಕೆಟ್ಟ ಸ್ಥಿತಿಯನ್ನು ಉಂಟು ಮಾಡಬಾರದು. ಯುದ್ಧಕ್ಕೆ ಬದಲಾಗಿ ಯಾವುದಾದರೂ ನೈತಿಕ ಪರ್ಯಾಯವನ್ನು ಕಂಡು ಹಿಡಿಯದೆ ಹೋದರೆ, ಎಂದಾದರೂ



ಒಂದು ದಿನ ಮನುಕುಲ ಜಾಗತಿಕ ವಿನಾಶದತ್ತ ಸಾಗುತ್ತದೆ. ಇದು ಅವರ ದೃಢ ನಂಬಿಕೆಯಾಗಿತ್ತು.

ಭಾರತದ ವಿಷಯದಲ್ಲಿ, ಗಾಂಧೀಜಿಯವರ ನಂಬಿಕೆ ವಿಶೇಷವಾಗಿ ದೃಢವಾಗಿತ್ತು. ಏನೆಂದರೆ ಒಂದು ವೇಳೆ ಭಾರತ ಹಿಂಸಾ ಸಾಧನದ ಮೂಲಕ ಬ್ರಿಟಿಷ್ ಪ್ರಭುತ್ವದಿಂದ ತನ್ನನ್ನು ತಾನು ಬಿಡಿಸಿಕೊಳ್ಳಲು ಯಶಸ್ವಿಯಾದರೂ, ಅಧಿಕಾರ ಒಂದು ಸಣ್ಣ ಗುಂಪಿನ ಕೈಗೆ ಸರಿಯುವುದೇ ವಿನಾ ಇಡೀ ಜನ ಸಮುದಾಯಕ್ಕಲ್ಲ ಎಂದು. ಆ ರೀತಿಯಲ್ಲಿ ಅಧಿಕಾರಕ್ಕೆ ಬರುವ ಜನ ಪ್ರಾಮಾಣಿಕರಾಗಿರಬಹುದು ಮತ್ತು ಬ್ರಿಟಿಷರು ತೊಲಗಿದ ಹಿಂದೆಯೇ, ತಾವು ನಾಡಿನ ಕಡುಬಡವರೊಂದಿಗೆ ಅಧಿಕಾರ ಹಂಚಿಕೊಳ್ಳುತ್ತೇವೆ ಎಂದೂ ಆ ವರ್ಗ ನಂಬಿರಬಹುದು. ಆದರೆ ಸಾವಿರ ವರ್ಷಗಳ ದಾಸ್ಯವನ್ನು, ವಿಸಂಘಟಯನ್ನು ಅನುಭವಿಸಿದ್ದು, ಹಿಂಸಾ ಸಾಧನವನ್ನು ಬಳಸುವವರು ಅಥವಾ ರಾಜಕೀಯ ಅಧಿಕಾರಸ್ಥಾನಗಳಿಗೆ ಬರುವವರು ದೇಶದ ಉಳಿದ ಭಾಗ ಸೂಕ್ತವಾಗಿ ಸಂಘಟಿತವಾಗದಿದ್ದಾಗ, ಅಧಿಕಾರವನ್ನು ತಮ್ಮ ಕೈಯಲ್ಲೇ ಇಟ್ಟುಕೊಳ್ಳಬಹುದು.

ವಾಸ್ತವವಾಗಿ, 1909ರಲ್ಲಿ ಅವರು ಹಿಂದ್ ಸ್ವರಾಜ್ಯ ಅಥವಾ ಇಂಡಿಯನ್ ಹೋಂ ರೂಲ್ ಎಂಬ ಒಂದು ಪುಟ್ಟ ಪುಸ್ತಕ ಬರೆದರು. ಅದರಲ್ಲಿ ಒಬ್ಬ ಕ್ರಾಂತಿಕಾರಿಗೂ ಗಾಂಧಿಯವರಿಗೂ ನಡುವಣ ಕಾಲ್ಪನಿಕ ಸಂಭಾಷಣೆಯಿದೆ. ತಮ್ಮ ಒಂದು ಉತ್ತರದ ನಡುವೆ, ಗಾಂಧೀಜಿ ವಿವರಿಸಿದರು, ಬ್ರಿಟಿಷ್ ಪ್ರಭುತ್ವದಿಂದ ಭಾರತವನ್ನು ಮುಕ್ತಗೊಳಿಸುವುದಷ್ಟೇ ತಮ್ಮ ಆಸಕ್ತಿ ಅಲ್ಲ, ಆದರೆ ಎಲ್ಲ ವಿಧದ ದಾಸ್ಯದಿಂದಲೂ ಬಿಡಿಸಬೇಕು. ಭಾರತದ ಅನೇಕ ಭಾಗಗಳು ಭಾರತೀಯ ದೊರೆಗಳ ಅಧೀನದಲ್ಲಿವೆ, ಆದರೆ ಯಾವ ವಿಚಾರದಲ್ಲಿಯೂ ಅವು ಬ್ರಿಟಿಷ್ ಪ್ರಭುತ್ವದ ಭಾಗಗಳಿಗಿಂತ ಉತ್ತಮವಾಗೇನೂ ಇಲ್ಲ. ಗಾಂಧೀಜಿಯವರಿಗೆ, ಸ್ವಾತಂತ್ರ್ಯ ಎಂದರೆ ಎಲ್ಲ ಬಂಧನಗಳಿಂದಲೂ ಮುಕ್ತಿ. ಅಧಿಕಾರಸ್ಥರು ಅಧಿಕಾರವನ್ನು ದುರುಪಯೋಗ ಮಾಡಿದಾಗ, ಅದನ್ನು ವಿರೋಧಿಸುವ ಸಾಮರ್ಥ್ಯವನ್ನು ಜನ ಯಾವಾಗ ಪಡೆದುಕೊಳ್ಳುವರೋ, ಆಗಲೇ ಅವರು ಸ್ವತಂತ್ರರಾಗುವುದು. ಇದು ಸಾಧ್ಯವಾಗುವುದು ಅಹಿಂಸೆಯ ಸಂಘಟನೆಯಿಂದ ಮಾತ್ರ- ಇದು ಗಾಂಧೀಜಿಯ ನಂಬಿಕೆ.

ಸಾಕ್ರಟೀಸ್ ಅಥವಾ ಏಸುಸ್ವಾಮಿ ಸರ್ವಾರ್ಥದಲ್ಲಿಯೂ ಮುಕ್ತರಾಗಿದ್ದರು ಎನ್ನುವುದು ಗೊತ್ತಿದೆ. ಎಲ್ಲರೂ ಅವರ ನಿಷ್ಠೆಯಿಂದ ಅವರನ್ನು ಕದಲಿಸುವುದು ಯಾರಿಗೂ ಸಾಧ್ಯವಿರಲಿಲ್ಲ. ಮತ್ತು ತಾವು ಕಂಡುಕೊಂಡ ಸತ್ಯಕ್ಕಾಗಿ ಅವರು ಪರಮ ಬಲಿದಾನವಿತ್ತರು. ಸುಯೋಗ್ಯವಾದುದು ಅದೊಂದೇ ರೀತಿಯ ಸ್ವಾತಂತ್ರ್ಯ ಎಂಬುದು

ಸತ್ಯವೇ ಆದರೂ ಜನ ಸಾಮಾನ್ಯರು ಬಹು ಸಂಖ್ಯೆಯಲ್ಲಿ ಅಂತಹ ಸ್ವಾತಂತ್ರ್ಯವನ್ನು ಹೊಂದಲಾರರು. ಮೇಲೆ ಹೆಸರಿಸಿದ ಪರಿಪೂರ್ಣ ಮಾನವರ ಒಂದು ಸಂಘಟನೆ ಇರಲು ಸಾಧ್ಯವಾದರೆ ಜಗತ್ತಿನ ಮುಖವನ್ನು ಬದಲು ಮಾಡಿಬಿಡಬಹುದು ಎಂದು ಗಾಂಧೀಜಿಗೆ ನಿರೀಕ್ಷೆ ಏನೂ ಇರಲಿಲ್ಲ. ಆದ್ದರಿಂದ, ಅವರು ಜನ- ಗಂಡಸರು, ಹೆಂಗಸರು ಹೇಗೆ ಇದ್ದರೋ, ಅವರನ್ನೇ ಸಂಘಟಿಸಲು ಯತ್ನಿಸಿದರು. ಅಂಥ ಜನ ಸಾಮೂಹಿಕವಾಗಿ, ಹೆಚ್ಚು ಹೆಚ್ಚು ಸ್ವಾತಂತ್ರ್ಯವನ್ನು ಸಮೀಪಿಸುವ ರೀತಿಯಲ್ಲಿ ಒಟ್ಟಾಗಿ ನಡೆಯುತ್ತಾರೆ ಎಂಬುದು ಅವರ ಯೋಚನೆ.

ಪರಿಪೂರ್ಣರಾದವರು ಅಥವಾ ಪರಿಪೂರ್ಣತೆಗೆ ನಿಕಟರಾದ ಗಂಡಸರು ಹೆಂಗಸರು ಮಾತ್ರವೇ ಸವಿನಯ ಶಾಸನೋಲ್ಲಂಘನವನ್ನು ನಡೆಸಬಲ್ಲರು ಎಂದು ನಂಬುವ ಕೆಲವರು ಶಾಂತಿವಾದಿಗಳುಂಟು. ಆದರೆ ಗಾಂಧೀಜಿ ಅಪರಿಪೂರ್ಣ ಜನರಿಂದ ಆರಂಭಿಸಿದರು. ಕಾರ್ಯದ ಕೆಲವು ಷರತ್ತುಗಳನ್ನು ವಿಧಿಸಿದರು ಮತ್ತು ಉಗ್ರಮಾರ್ಗದಲ್ಲಿ ಒಳ್ಳೆಯವರಾಗಲು ಪ್ರಯತ್ನಿಸುತ್ತಲೇ, ಅವರು ತಾವು ಇರುವ ಸನ್ನಿವೇಶದಲ್ಲಿ ಬದಲಾವಣೆಯನ್ನು ಉಂಟು ಮಾಡಬಲ್ಲರು ಎಂದು ಆಶಿಸಿದ್ದರು. ಗಾಂಧೀ ಮಾರ್ಗಕ್ಕೂ ಅನೇಕ ಶಾಂತಿವಾದಿಗಳ ಮಾರ್ಗಕ್ಕೂ ನಡುವೆ ಇದು ಬಹು ದೊಡ್ಡ ವ್ಯತ್ಯಾಸ. ಈ ವ್ಯತ್ಯಾಸವನ್ನು ನಾವು ಸದಾ ದೃಷ್ಟಿಯಲ್ಲಿ ಇರಿಸಿಕೊಂಡಿರಬೇಕಾದುದು ಮುಖ್ಯ. ನಿಮ್ಮ ರಾಜಕೀಯ ಯೋಜನೆಗಳನ್ನು ಭಾರತ ರಾಷ್ಟ್ರೀಯ ಕಾಂಗ್ರೆಸ್ ಮುಖಾಂತರವೇ ನಡೆಸಲು ಯತ್ನಿಸುವಿರೇಕೆ, ನೀವೇ ಸ್ಥಾಪಿಸಿದ, ಸಮಾನ ಮನುಷ್ಯರ ಸಂಘಟನೆಯ ಮೂಲಕ ಮಾಡುವುದಿಲ್ಲವೇಕೆ?- ಎಂದು ಒಮ್ಮೆ ಒಬ್ಬ ಪತ್ರಕರ್ತರು ಕೇಳಿದರು. "ನನ್ನ ಕಾಂಗ್ರೆಸ್ ಸಂಬಂಧದಿಂದ, ಅದು ಅಹಿಂಸೆಯನ್ನು ಆಚರಿಸಲು ನೆರವಾದೀತು" ಎಂದು ಗಾಂಧೀಜಿ ಉತ್ತರಿಸಿದರು. ಅಹಿಂಸೆಯನ್ನು ಒಂದು ಮತವಾಗಿ ನಂಬಿಕೊಂಡವರನ್ನು ಮಾತ್ರ ಸೇರಿಸಿಕೊಳ್ಳಬೇಕೆಂದು ಹೊರಟರೆ ಕೊನೆಗೆ ಉಳಿಯುವುದು ತಾವೊಬ್ಬರೇ ಆದೀತು. ತಾವು ಒಂಟಿಯಾಗಿ ಪ್ರಯಾಣ ಮಾಡಬಾರದು, ಸರಿಸುಮಾರು ತನ್ನ ಹಾಗೆಯೇ ಇರುವವರ ಸಂಗದಲ್ಲಿ ನಡೆಯಬೇಕು ಎನ್ನುವುದು ಹೆಚ್ಚು ಮುಖ್ಯ.

ರಾಜಕೀಯ ಸ್ವಾತಂತ್ರ್ಯಕ್ಕೂ ಆರ್ಥಿಕ ಸ್ವಾತಂತ್ರ್ಯಕ್ಕೂ ನಡುವಣ ನಿಕಟ ಸಂಬಂಧವನ್ನು ಅರ್ಥ ಮಾಡಿಕೊಳ್ಳುವುದು ಈ ಹಂತದಲ್ಲಿ ಮುಖ್ಯ. ಆರ್ಥಿಕ ಸ್ವಾತಂತ್ರ್ಯದ ಬುನಾದಿಯ ಮೇಲೆ ಮಾತ್ರ ರಾಜಕೀಯ ಸ್ವಾತಂತ್ರ್ಯವನ್ನು ಕಟ್ಟಲು ಸಾಧ್ಯ ಎನ್ನುವುದು ಗಾಂಧೀಜಿಯ ದೃಢ ಅಭಿಪ್ರಾಯವಾಗಿತ್ತು. ಸರ್ವಾಧಿಕಾರ ಪ್ರಭುತ್ವದಲ್ಲಿ, ಆರ್ಥಿಕ ಜೀವನ ಕೇಂದ್ರ ನಿಯಂತ್ರಣಕ್ಕೆ ಒಳಗಾಗಿರುತ್ತದೆ. ಕೇಂದ್ರಾಡಳಿತದ ನಿರ್ಣಯಗಳು ತಮಗೆ ಸಮ್ಮತವಾಗದೆ ಇದ್ದಲ್ಲಿ, ಸಾಮಾನ್ಯ ಜನ,



ಹಸಿವಿಗೆ ಹೆದರಿ, ತಮ್ಮ ಪ್ರತಿಭಟನೆಯ ದನಿ ಎತ್ತದಿರುವ ಸಂಭವವೂ ಉಂಟು. ಉತ್ಪಾದನೆಯ ವಿಕೇಂದ್ರೀಕರಣ ವಿಧಾನದಿಂದ ಆರ್ಥಿಕ ಸ್ವಾತಂತ್ರ್ಯವನ್ನು ಸಾಧಿಸಬೇಕು ಎಂದು ಗಾಂಧೀಜಿ ನಂಬಿದ್ದಕ್ಕೆ ಇದೇ ಮೂಲಭೂತ ಕಾರಣ. ಜನ ಭಯದಿಂದ ವ್ಯವಸ್ಥೆಗೆ ತಲೆಬಾಗದಿರುವಾಗ, ಅವರು, ಅನ್ಯರೀತಿಗೆ ವಿರುದ್ಧವಾಗಿ, ತಮ್ಮದೇ ಅಭಿಪ್ರಾಯಕ್ಕೆ ಅಂಟಿಕೊಂಡಿರಲು ಸಾಧ್ಯವಾಗುತ್ತದೆ. ಪ್ರಜಾಪ್ರಭುತ್ವದ ಪೋಷಣೆಗೆ ಇದೊಂದು ಅತ್ಯುತ್ತಮ ಮಾರ್ಗವಾದೀತು.

ಚರಕ ಗಾಂಧೀಜಿಯ ರಚನಾತ್ಮಕ ಕಾರ್ಯಕ್ರಮದಲ್ಲಿ ಕೇಂದ್ರ ಬಿಂದು. ರಾಷ್ಟ್ರದ ಪ್ರತಿಯೊಬ್ಬ ವ್ಯಕ್ತಿಯೂ ಬಿಡುವಿನ ವೇಳೆಯಲ್ಲಿ ಅದನ್ನು ಬಳಸಿಕೊಳ್ಳಲು ಗಾಂಧೀಜಿ ಬಯಸಿದ್ದರು. ಅದರಿಂದ ಭಾರತದಲ್ಲಿ ಬಟ್ಟೆಯ ಸಮಸ್ಯೆ ಹಾಗೂ ನಿರುದ್ಯೋಗದ ಸಮಸ್ಯೆ ಎರಡೂ ಭಾಗಶಃ ಪರಿಹಾರವಾಗಬಹುದು. ಖಾದಿ ಸಂಘಟನೆ ನಮ್ಮ ದೇಶದಲ್ಲಿ ಸ್ವಯಂಪ್ರೇರಿತ ಸಹಕಾರವನ್ನು ತರಲು ಪರಿಣಾಮಕಾರಿ ಮಾರ್ಗ ಎಂದೂ ಗಾಂಧೀಜಿ ನಂಬಿದ್ದರು. ಬಹು ಜನರ ಹಿತವನ್ನು ಬಲಿಗೊಟ್ಟು, ಕೆಲವೇ ಮಂದಿಯ ಅಭ್ಯುದಯ ಸಾಧಿಸುವಂತಹ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವುದಾದರೆ, ಅಂಥ ಕೈಗಾರಿಕಾ ಸಂಘಟನೆ ಅಥವಾ ಯಂತ್ರಕ್ಕೆ ಗಾಂಧೀಜಿ ಒಪ್ಪಲಿಲ್ಲ. ಆದರೆ ಕೋಟಿಗಟ್ಟಲೆ ಜನರ ಪರಿಶ್ರಮವನ್ನು ಹಗುರವಾಗಿಸಲು ಯಂತ್ರವನ್ನು ಅಳವಡಿಸಲು ಸಾಧ್ಯವಾಗುವುದಾದರೆ, ಅವರ ಒಪ್ಪಿಗೆ ಇತ್ತು.

ಉತ್ಪಾದನೆಯ ವಿಕೇಂದ್ರೀಕೃತ ವ್ಯವಸ್ಥೆ ಕುರಿತು ಇನ್ನೂ ಹೆಚ್ಚಿನ ವಿವರಗಳಿಗೆ ಹೋಗದೆ, ಈಗ ನಾನು 'ಸತ್ಯಾಗ್ರಹ' ಪ್ರಶ್ನೆಯನ್ನು ಪರಿಶೀಲಿಸಲು ಯತ್ನಿಸುತ್ತೇನೆ. ಅದನ್ನು ಗಾಂಧೀಜಿ ಯುದ್ಧಕ್ಕೆ ಪರ್ಯಾಯವಾಗಿ ರೂಪಿಸಿದ್ದರು. ವಿಕೇಂದ್ರೀಕರಣದಲ್ಲಿ ಆಸಕ್ತರಾದವರು ಪೀಟರ್ ಕ್ರೊಪೋಟ್ಕಿನ್ ಅವರ ಬರೆಹಗಳನ್ನು ನೋಡುವುದು ಲಾಭಕರ. ಅದರಲ್ಲೂ ವಿಶೇಷವಾಗಿ,*The Conquest of Bread, Fields, Factories and Workshops* (ರೊಟ್ಟಿ, ಹೊಲ, ಕಾರ್ಖಾನೆ ಹಾಗೂ ಕಾರ್ಯಾಗಾರಗಳ ಆಕ್ರಮಣ) ಮತ್ತು *"My life as a Revolutionist"* (ಕ್ರಾಂತಿಕಾರಿಯಾಗಿ ನನ್ನ ಬದುಕು) ಈ ಪುಸ್ತಕಗಳನ್ನು ನೋಡಬಹುದು.

ದಕ್ಷಿಣ ಆಫ್ರಿಕದಲ್ಲಿ ಮೊದಲು ಅಹಿಂಸಾತ್ಮಕ ಪ್ರತಿರೋಧ ಚಳುವಳಿಯನ್ನು ಗಾಂಧೀಜಿ ಆರಂಭಿಸಿದಾಗ, ಅದಕ್ಕೆ ಇದ್ದ ಹೆಸರು "ಸಹನಶೀಲ ಪ್ರತಿರೋಧ."ಆದರೆ ಪ್ರತಿರೋಧ ಸಹನಶೀಲವೇನೂ ಆಗಿರಲಿಲ್ಲ ಎಂಬುದು ಕ್ಷಿಪ್ರದಲ್ಲೇ ಗಮನಕ್ಕೆ ಬಂತು. ಆದ್ದರಿಂದ ಆ ಹೆಸರನ್ನು ಕೈ ಬಿಟ್ಟು, ಅದಕ್ಕೆ ಬದಲಾಗಿ"ಸತ್ಯಾಗ್ರಹ"ಎಂಬ ಶಬ್ದವನ್ನು ಟಂಕಿಸಲಾಯಿತು. ಸತ್ಯಾಗ್ರಹದ ಶಬ್ದಾರ್ಥ, "ಸತ್ಯಕ್ಕಾಗಿ ಆಗ್ರಹ" ಎಂದು. ಅಥವಾ ಇಂಗಿತಾರ್ಥ ಸತ್ಯದ ಬಗ್ಗೆ ತನ್ನ ದೃಷ್ಟಿಯ ಸಲುವಾಗಿ ನಿಲ್ಲುವ ನಿಶ್ಚಲ

ನಿರ್ಧಾರ.

ಸತ್ಯಾಗ್ರಹ ಹಾಗೂ ಯುದ್ಧ ಎರಡರಲ್ಲಿ ಎರಡು ಸಮಾನಾಂಶಗಳಿವೆ. ಎರಡೂ ಕ್ರಿಯಾತ್ಮಕ ಶಕ್ತಿಗಳು. ಹೋರಾಟಗಾರ ಉಪಕ್ರಮವನ್ನು ಯಾವಾಗಲೂ ತನ್ನಲ್ಲಿಯೇ ಇರಿಸಿಕೊಳ್ಳಲು ಯತ್ನಿಸುತ್ತಾನೆ. ಹೊಂದಾಣಿಕೆ ಅಥವಾ ಒಪ್ಪಂದದ ಇತರ ಶಾಂತಿಯುತ ವಿಧಾನಗಳು ನಿರುಪಯುಕ್ತ ಎನಿಸಿದಾಗ, ಯುದ್ಧದ ಆಳು ಅಥವಾ ಸತ್ಯಾಗ್ರಹಿ ತನ್ನ ಅಂತಿಮ ಕ್ರಮಕ್ಕೆ ತೊಡಗುತ್ತಾನೆ. ಈ ಅಂಶದಲ್ಲಿ, ಎರಡೂ ವಿಧಾನಗಳಲ್ಲಿ ಸಾಮ್ಯವಿದೆ. ಏಕೆಂದರೆ ಎರಡೂ ನೇರ ಕಾರ್ಯಕ್ರಮ ರೂಪಗಳು.

ಆದರೆ ಒಂದು ಅಂಶದಲ್ಲಿ ಎರಡರ ನಡುವೆ ಅಗಾಧ ವ್ಯತ್ಯಾಸವಿದೆ. ದಾರ್ಶನಿಕ ಹಾಲ್ಡೆನ್ ಯುದ್ಧಕ್ಕೆ ಕೊಟ್ಟ ವಿವರಣೆ ಎಂದರೆ, ಒಂದು ಸಮುದಾಯ ತನ್ನ ಇಚ್ಛೆಯನ್ನು ಇನ್ನೊಂದರ ಮೇಲೆ ಶಿಕ್ಷೆಯ ರೂಪದಲ್ಲಿ ಹೇರುವುದು. ವಿರೋಧಿಯನ್ನು ಸೈನಿಕ ಕಾರ್ಯಾಚರಣೆಗೆ ಒಳಪಡಿಸಬಹುದು, ಇಲ್ಲವೇ ನಾನಾ ಬಗೆಯಲ್ಲಿ ಉಂಟು ಮಾಡುವ ಆರ್ಥಿಕ ಅಥವಾ ರಾಜಕೀಯ ಒತ್ತಡಕ್ಕೆ ಸಿಲುಕಿಸಬಹುದು. ಇದಕ್ಕೆ ವಿರುದ್ಧವಾಗಿ ಸತ್ಯಾಗ್ರಹದ ಗುರಿ ಏನೆಂದರೆ, ದುಷ್ಟ ಪದ್ಧತಿ ಎಂದು ತಾನು ಭಾವಿಸಿಕೊಂಡಿರುವುದಕ್ಕೆ ಸಹಕಾರ ನೀಡಲು ನಿರಾಕರಿಸುವುದರ ಮೂಲಕ ಆ ಪದ್ಧತಿಯನ್ನು ಕೊನೆಗಾಣಿಸುವುದು. ಅಸಹಕಾರದ ಅವಧಿಯಲ್ಲಿ ಆತ ಅಚಲವಾಗಿ ಸಹನಶೀಲನಾಗಿ ನಿಲ್ಲುತ್ತಾನೆ. ತನ್ನ ಮೇಲೆ ಎದುರಾಳಿ ವಿಧಿಸಬಹುದಾದ ಯಾವುದೇ ಶಿಕ್ಷೆಯನ್ನು ಅನುಭವಿಸುತ್ತಾನೆ. ವಿರೋಧಿಯನ್ನು ಆರ್ಥಿಕ ಬಹಿಷ್ಕಾರದಿಂದ ಯಾವುದೇ ಬಗೆಯ ಒತ್ತಡಕ್ಕೆ ಸಿಲುಕಿಸುವುದು ಸತ್ಯಾಗ್ರಹಿಯ ಉದ್ದೇಶವಲ್ಲ. ಆದರೆ ನೈತಿಕ ಒತ್ತಡಕ್ಕೆ ಆಸ್ಪದ ಇದೆ. ಆತ ತನ್ನ ನಿರ್ಧಾರದಲ್ಲಿ ಅಚಲನಾಗಿರುತ್ತಾನೆ. ಅದರಿಂದ ವಿರೋಧಿಯಲ್ಲಿ ಗೌರವ ಭಾವನೆಯನ್ನು ಮೂಡಿಸುತ್ತಾನೆ. ಅಂಥ ಸನ್ನಿವೇಶದಲ್ಲಿ, ವಿರೋಧಿ ಸಂಧಾನ ಮಾರ್ಗವನ್ನು ತೆರೆಯಬಹುದು ಎಂಬುದು ನಿರೀಕ್ಷೆ. ಉಭಯ ಸಮ್ಮತ ಪರಿಹಾರವನ್ನು ಉಂಟು ಮಾಡುವುದೇ ಸತ್ಯಾಗ್ರಹಿಯ ಅಂತಿಮ ಗುರಿ. ಆದರ್ಶ ಪರಿಸ್ಥಿತಿಯಲ್ಲಿ ಗೆಲುವೂ ಇರದು, ಸೋಲೂ ಇರದು. ಏಕೆಂದರೆ ಸೆಣಸಿನ ಕಕ್ಷಿಗಳು ನ್ಯಾಯದ ಮೇಲೆ ನಿಂತ ಇತ್ಯರ್ಥಕ್ಕೆ ಬರುವ ನಿರೀಕ್ಷೆಯಿರುವುದೇ ವಿನಾ ಮೂಲ ಸಿದ್ಧಾಂತಗಳ ರಾಜಿಯ ಮೇಲೆ ನಿಂತ ಇತ್ಯರ್ಥವಲ್ಲ.

ಮಾನವ ಪರಿವಾರದ ಏಕತೆಯಲ್ಲಿ ಗಾಂಧೀಜಿಗೆ ನಂಬಿಕೆ. ವ್ಯಕ್ತಿಹಿತ ಸಾಧನೆಗೆ ಸಮಷ್ಟಿ ಹಿತವೊಂದೇ ಮಾರ್ಗ ಎಂದು ಭಾವಿಸಿದ್ದರು. ಸೆಣಸಿನ ಕಕ್ಷಿಗಳು ತಮ್ಮ ಸತ್ಯದೃಷ್ಟಿಯ ಸಲುವಾಗಿ ಗೌರವದಿಂದ ಕಷ್ಟ ಅನುಭವಿಸಲು ಸಿದ್ಧರಿದ್ದಲ್ಲಿ, ಅವರು ಅಂತಿಮವಾಗಿ ಒಂದು ಇತ್ಯರ್ಥಕ್ಕೆ ಬರುವುದರಲ್ಲಿ ಯಶಸ್ವಿಗಳಾಗುತ್ತಾರೆ. ಆ



ಇತ್ಯರ್ಥ ಇಡೀ ಮಾನವ ಪರಿವಾರದ ಹಿತವನ್ನೇ ಸಾಧಿಸೀತು, ಯಾವುದೋ ಒಂದು ವರ್ಗದ ಅಥವಾ ವ್ಯಕ್ತಿಗಳ ಗುಂಪಿನ ಹಿತವನ್ನು ಮಾತ್ರವಲ್ಲ.

ನ್ಯಾಯಯುತ ಪಕ್ಷಕ್ಕೆ ಯುದ್ಧದಲ್ಲಿ ಗೆಲುವು ಎಂದು ಒಮ್ಮೊಮ್ಮೆ ವಾದಿಸಲಾಗುತ್ತದೆ. "ಇದು ಯತೋ ಧರ್ಮಃ ತತೋ ಜಯಃ" ಎಂದ ಹಾಗೆಯೇ; ಅಂದರೆ ಧರ್ಮ ಇರುವ ಪಕ್ಷಕ್ಕೆ ಜಯ. ಆದರೆ ಆಧುನಿಕ ಜಗತ್ತಿನಲ್ಲಿ ನಾವು ನೋಡುವುದೇನು? ಆಕ್ರಮಣ ಬಲಕ್ಕೂ, ಆ ಪ್ರಭುತ್ವ ಒಪ್ಪಿಕೊಂಡ ನೈತಿಕ ವ್ಯವಸ್ಥೆಗೂ ಏನೂ ಸಂಬಂಧ ಇರುವುದಿಲ್ಲ. ರಷ್ಯಾ (USSR) ಮತ್ತು ಅಮೇರಿಕ ಎರಡರ ಕೈಯಲ್ಲೂ ವಿನಾಶದ ಮಹಾನ್ ಶಕ್ತಿ ಅಡಗಿದೆ. ಎರಡೂ ರಾಷ್ಟ್ರಗಳು ಪರಸ್ಪರ ಸಶಸ್ತ್ರ ಹೋರಾಟಕ್ಕೆ ಇಳಿದರೆ, ಏನಾದಿತೋ ಯಾರೂ ಅರಿಯರು. ಆದರೆ ಸಾಮಾನ್ಯವಾಗಿ ಒಪ್ಪಿ ಹೇಳುವುದಿಷ್ಟೇ. ಈ ಎರಡು ರಾಷ್ಟ್ರಗಳ ಪ್ರಹಾರಶಕ್ತಿಗೂ ಅವುಗಳ ಅರ್ಥ ವ್ಯವಸ್ಥೆಗೂ ಏನೂ ಸಂಬಂಧವಿಲ್ಲ.

ಆದ್ದರಿಂದ, ಇದೊಂದು ಯುದ್ಧದ ಮುಖ್ಯ ದೌರ್ಬಲ್ಯ ಎಂದು ಗಾಂಧೀಜಿ ಪರಿಗಣಿಸಿದರು. ಸತ್ಯಾಗ್ರಹದಲ್ಲಾದರೋ, ವಿರೋಧಿ ಪಕ್ಷಗಳು ಸಂಧಾನದ ಮೂಲಕವೇ ಪರಸ್ಪರ ಯಾವುದಾದರೂ ರೀತಿ ಒಪ್ಪಂದಕ್ಕೆ ಬರಬೇಕಾಗುವುದು. ಸತ್ಯಾಗ್ರಹಿಯ ಧೈರ್ಯ ಹೆಚ್ಚಿದಷ್ಟು ಫಲಿತಾಂಶದ ಶೀಘ್ರತೆ ಹೆಚ್ಚಿರುತ್ತದೆ. ಹೀಗಾಗಿ, ಸತ್ಯಾಗ್ರಹ ನೈತಿಕ ಆಧಾರದಿಂದ, ಯುದ್ಧಕ್ಕಿಂತ ಉನ್ನತವಾದುದು.

ಆದರೆ ಒಂದು ಪ್ರಶ್ನೆ ಕೇಳಬಹುದು;ಮಾನವ ಸ್ವಭಾವವನ್ನು ಅರಿತ ಮೇಲೆ, ಸತ್ಯಾಗ್ರಹ ಆಚರಣೆಯ ವಿಧಾನವಾಗಬಲ್ಲದೇ? ಆದರೆ ಗಾಂಧಿಯವರ ಅಭಿಪ್ರಾಯವೇನೋ ಹೀಗಿತ್ತು- ಮನುಕುಲ ಇಂದು ಇರುವುದಕ್ಕಿಂತ ಉತ್ತಮವಾಗುವುದಕ್ಕೆ ಮೊದಲು ಮಾನವ ಸ್ವಭಾವದಲ್ಲಿರುವ ಕೆಲವು ಅಂತಃ ಸತ್ವಗಳನ್ನು ಅನ್ವೇಷಿಸಬೇಕು. ಯುದ್ಧದಲ್ಲಿ ಕೂಡ, ಯಾವ ಸೇನೆಯ ಸೈನಿಕರು ರಣರಂಗದಲ್ಲಿ ತಮ್ಮ ಪ್ರಾಣಗಳನ್ನು ಬಲಿತೆರಲು ಸಿದ್ಧರಿರುವರೋ, ಆ ಸೇನೆ ಗೆಲ್ಲುವುದು ಸಂಭವನೀಯ. ಶಸ್ತ್ರಾಸ್ತ್ರ ಹೊಂದಿರುವದೇನೊ ರಣಾಂಗಣದಲ್ಲಿ ತುಂಬ ಸಹಾಯಕಾರಿ. ಆದರೆ ವಿಜಯಕ್ಕೆ ಅಗತ್ಯವಾದ ಪ್ರಾಣ ಬಲಿತೆರುವ ನಿರ್ಧಾರ ಕಡಿಮೆಯ ಅಂಶವೇನಲ್ಲ. ಪ್ರತಿಯೊಬ್ಬ ಸೈನಿಕನು ತಾನು ಉತ್ತಮ ಸೈನಿಕನಾಗುವುದಕ್ಕೆ ಮೊದಲು, ಮರಣ ಭಯವನ್ನು ಪೂರಾ ಬಿಡಲು ಸಾಧ್ಯ ಎಂದು ಇತಿಹಾಸ ಅಥವಾ ಮನಶ್ಶಾಸ್ತ್ರ ಬಲ್ಲ ಯಾರೂ ಹೇಳಲು ಧೈರ್ಯ ಮಾಡರು. ಆದರೆ ಹೇಳಲು ಯತ್ನಿಸುತ್ತಾರೆ. ರಣರಂಗದಲ್ಲಿ ತನ್ನ ಸೇನೆಯನ್ನು ಹೇಗೆ ಮುನ್ನಡೆಸುವುದೆಂದು ಸೇನಾಧಿಪತಿಗೆ ಗೊತ್ತಿದ್ದರೆ, ಗೆಲುವು ಪಡೆಯಲು ಇಷ್ಟು ಸಾಕು. ಸತ್ಯಾಗ್ರಹದಲ್ಲಿ ಸೈನಿಕನಿಂದ ಇದಕ್ಕಿಂತ ಹೆಚ್ಚಿನದೇನನ್ನೂ ಗಾಂಧೀಜಿ ನಿರೀಕ್ಷಿಸಲಿಲ್ಲ.

ಮುಂಚೂಣಿಯಲ್ಲಿನ ಜನ ಅಸಹಕಾರದ ಪರಿಣಾಮಗಳೆಲ್ಲವನ್ನು ತಾವೇ ಎದುರಿಸಲು ಸಿದ್ಧರಿದ್ದಲ್ಲಿ, ಅವರ ಹಿಂದೆ ನಿಂತ ಸಾಮಾನ್ಯ ಸೈನಿಕರೂ ಧೈರ್ಯದಲ್ಲಿ ಉಕ್ಕಾಗುತ್ತಾರೆ. ಅದರಿಂದ ಅಂತಿಮವಾಗಿ ಸತ್ಯಾಗ್ರಹಕ್ಕೆ ಗೆಲುವು ತರುತ್ತಾರೆ. ಸಾಮಾನ್ಯ ಗಂಡಸರು ಮತ್ತು ಹೆಂಗಸರು ಧೈರ್ಯವಂತರಾಗುವುದು ಅಥವಾ ಹೇಡಿಗಳಾಗುವುದು, ಅವರ ಮುಂದೆ ಇರುವ ಉದಾಹರಣೆಯ ಫಲವಾಗಿ. ಇದು ಯುದ್ಧದಲ್ಲೂ ನಿಜ, ಸತ್ಯಾಗ್ರಹದಲ್ಲೂ ನಿಜ. ತಮ್ಮ ಸತ್ಯಾಗ್ರಹ ಚಳುವಳಿಗಳ ಸಂಘಟನೆಗೆ ಗಾಂಧೀಜಿ ಬಹುವಾಗಿ ನೆಚ್ಚಿದ್ದು ಈ ಮಾನವ ಸ್ವಭಾವವನ್ನೇ.

1921 ರಿಂದ 1948ರ ವರೆಗೆ ಭಾರತದಲ್ಲಿ ನಾಲ್ಕು ಮುಖ್ಯ ರಾಜಕೀಯ ಆಂದೋಳನಗಳು ನಡೆದವು. 1921,1930, 1932 ಹಾಗೂ 1942ರಲ್ಲಿ, ಇವಲ್ಲದೆ, ಸುಮಾರು ನಲವತ್ತು ಸ್ಥಳೀಯ ಚಳುವಳಿಗಳೂ ನಡೆದವು. ಅವುಗಳಲ್ಲಿ ಒಳಗೊಂಡಿದ್ದ ಪ್ರಶ್ನೆಗಳು ಆರ್ಥಿಕ ತೊಂದರೆಗಳಿಂದ ಹಿಡಿದು ಸಾಮಾಜಿಕ ಅನ್ಯಾಯಗಳವರೆಗೂ ಇದ್ದವು. ಆದರೆ, ಈ ಚಳುವಳಿಗಳನ್ನು ವ್ಯೂಹತಂತ್ರ ಅಥವಾ ರಾಜಕೀಯ ಇತಿಹಾಸದ ವಿದ್ಯಾರ್ಥಿಗಳು ವಿಮರ್ಶಾತ್ಮಕವಾಗಿ ಇನ್ನೂ ಅಧ್ಯಯನ ಮಾಡಬೇಕಾಗಿದೆ. ಗಾಂಧೀಜಿಯವರೇ ನೇರವಾಗಿ ನಾಯಕತ್ವದಲ್ಲೋ ಅಥವಾ ಸಲಹೆಯಲ್ಲೋ ಪಾಲುಗೊಂಡಿದ್ದ ಈ ಎಲ್ಲದರಲ್ಲೂ ಒಂದು ಮುಖ್ಯ ಲಕ್ಷಣ ಎದ್ದು ಕಾಣಿಸುತ್ತದೆ. ಸತ್ಯಾಗ್ರಹದಲ್ಲಿ ಪ್ರಗತಿಶೀಲ ಕ್ರಮಗಳನ್ನು ಗೊತ್ತು ಮಾಡುವುದು ಯಾವಾಗಲೂ ಅವರ ಯೋಜನೆ. ಪರಿಮಿತ ಬೇಡಿಕೆಯಲ್ಲದೆ, ದೊಡ್ಡ ಪ್ರಮಾಣದ ರಾಜಕೀಯ ಚಳುವಳಿಗಳಲ್ಲಿ, ಗಾಂಧೀಜಿ ಪ್ರಸಕ್ತ ರೂಢಿಯಲ್ಲಿದ್ದ ಉತ್ಪಾದನಾ ಸಂಘಟನೆ ವಿಧಿಸಿದ ಮಿತಿಗಳೇನೇ ಇದ್ದರೂ, ಸತ್ಯಾಗ್ರಹಕ್ಕೆ ಒಂದು ಆರ್ಥಿಕ ಅಡಿಪಾಯವನ್ನು ರಚಿಸಲು ಪ್ರಯತ್ನಿಸುತ್ತಿದ್ದರು. ಮೇಲಾಗಿ, ವಾಸ್ತವ ಚಳುವಳಿಯ ನಡೆಯಲ್ಲೇ, ನಾನಾ ರೀತಿಯ ಕಾರ್ಯಕ್ರಮಗಳನ್ನು ಇಟ್ಟು ಕೊಂಡಿದ್ದರು. ಮುಂಚೂಣಿಯಲ್ಲಿ ಇದ್ದವರಿಗೆ ಒಂದು, ಸ್ವಲ್ಪ ಹಿಂದೆ ಇದ್ದವರಿಗೆ ಒಂದು, ಮತ್ತು ಒಂದಲ್ಲ ಮತ್ತೊಂದು ಕಾರಣಕ್ಕಾಗಿ ನೇರವಾಗಿ ಚಳುವಳಿಗೆ ಬರಲಾರದೆ ಸಹಾನುಭೂತಿ ಪರರಾಗಿದ್ದವರಿಗೆ ಇನ್ನೊಂದು, ಹೀಗೆ.

ಗಾಂಧೀಜಿ ಹೇಗೆ ಸಾಮಾನ್ಯ ಜನರಲ್ಲಿ ಹೆಚ್ಚು ಹೆಚ್ಚು ಧೈರ್ಯವನ್ನು ತುಂಬಲು ಯತ್ನಿಸುತ್ತಿದ್ದರು ಮತ್ತು ಅಹಿಂಸಾ ದಳಗಳು ಅಲ್ಲಲ್ಲಿ ನಡೆಯಬಹುದಾದ ಹಿಂಸಾ ಕೃತ್ಯಗಳಲ್ಲಿ ಚೆದರಿ ಹೋಗದಂತೆ ಇರಿಸಿಕೊಳ್ಳಲು ಹೇಗೆ ನಾನಾ ರೀತಿಗಳಲ್ಲಿ ಪ್ರಯತ್ನಿಸುತ್ತಿದ್ದರು- ಎಂಬುದನ್ನು ಕಂಡುಹಿಡಿಯಲು ಭಾರತದ ಸತ್ಯಾಗ್ರಹ ಚಳುವಳಿಗಳಲ್ಲಿ ವ್ಯೂಹತಂತ್ರ ಅಥವಾ ಕೌಶಲದ ವಿಮರ್ಶಕ ವಿದ್ಯಾರ್ಥಿಗೆ ಹೇರಳ ಸಾಮಗ್ರಿ ದೊರಕುತ್ತದೆ. ಅದೊಂದು ರೋಚಕ ಅಧ್ಯಯನ. ಚಳುವಳಿಗಳಲ್ಲಿನ



ಮುಖ್ಯ ಭಾಗಿಗಳ ನಿಧನದಿಂದ ವಿವರಗಳು ನಷ್ಟವಾಗಿ ಹೋಗುವ ಮುನ್ನವೇ, ಯಾರಾದರೂ ರಾಜ್ಯಶಾಸ್ತ್ರದ ಅಥವಾ ಇತಿಹಾಸದ ಗಂಭೀರ ವಿದ್ಯಾರ್ಥಿಗಳು ಎಂದಾದರೂ ಒಂದು ದಿನ ವಿಮರ್ಶಾತ್ಮಕ ಅಧ್ಯಯನವನ್ನು ಕೈಗೊಳ್ಳುವರು ಎಂದು ನನಗೊಂದು ಆಸೆಯಿದೆ.

ಗೆಲುವು ಪಡೆದ ಚಳುವಳಿಗಳಲ್ಲಿನ ಒಂದು ಸ್ಥಿರ ಅಂಶವೆಂದರೆ ಮೊದಲನೆಯದಾಗಿ ಸತ್ಯಾಗ್ರಹದ ಕಾರಣದ ನೈತಿಕತೆ. ಎರಡನೆಯದಾಗಿ ಕಾರ್ಯಾಚರಣೆಯ ಅತಿಮುಖ್ಯ ಅಂಶ ಕೆಚ್ಚೆದೆಯ ಭಾವನೆ. ತಂತ್ರಕೌಶಲ ವಿಧಾನದಲ್ಲಿ ಗಾಂಧೀಜಿ, ಕೆಚ್ಚೆದೆಯೆ ಭಾವನೆಯನ್ನು ಸೂಚಿಸಿದರಷ್ಟೆ ಅಲ್ಲ, ಉಪಕ್ರಮದ ಅಧಿಕಾರವನ್ನು ತಮ್ಮ ಕಡೆಯಲ್ಲೇ ಉಳಿಸಿಕೊಳ್ಳಲು ಸಾಧ್ಯವಾಗುವಂತೆ ಅವರು ತಮ್ಮ ಕ್ರಮಗಳು ಬದಲಾಗುತ್ತಿದ್ದ ಸನ್ನಿವೇಶಗಳಿಗೆ ತಕ್ಕಂತೆ ಹೊಂದಿಕೊಳ್ಳುವಂತೆ ನೋಡಿಕೊಳ್ಳುತ್ತಿದ್ದರು.

ಸತ್ಯಾಗ್ರಹ ಅದರಲ್ಲಿ ಒಳಪಟ್ಟಿರುವ ಇಡೀ ಸಮುದಾಯಕ್ಕೆ ಒಂದು ಶಿಕ್ಷಣದ ವಿಧಾನ ಎಂದು ಹೇಳಬಹುದು. ಎಲ್ಲರೂ ಅದರಲ್ಲಿ ನೇರವಾಗಿ ಭಾಗವಹಿಸಬಹುದು. ಇಲ್ಲವೇ, ಹೋರಾಟಗಾರರ ಕಾರಣ ಯಾವ ಆಧಾರದಿಂದ ನೈತಿಕವಾದೀತೊ ಆ ಆರ್ಥಿಕ ಮತ್ತು ಸಾಮಾಜಿಕ ಅಡಿಗಟ್ಟೆಯನ್ನು ನಿರ್ಮಿಸಲು ನೇರವಾಗಿ ಅಪ್ರತ್ಯಕ್ಷವಾಗಿ ಭಾಗವಹಿಸಬಹುದು. ಒಮ್ಮೆ ಗಾಂಧೀಜಿಯ ಮುಂದೆ ಒಂದು ಪ್ರಶ್ನೆಯನ್ನು ಇಡಲಾಯಿತು. ಎಲ್ಲವನ್ನೂ ಅಹಿಂಸೆಯಿಂದಲೇ ರಕ್ಷಿಸಿಕೊಳ್ಳಲು ಸಾಧ್ಯವೇ? ಗಾಂಧೀಜಿಯ ಉತ್ತರ ಹೀಗಿತ್ತು- ಅಹಿಂಸೆಯಿಂದ ಗಳಿಸಬಹುದಾದವನ್ನು ಮಾತ್ರ ಅಹಿಂಸೆಯಿಂದ ರಕ್ಷಿಸಿಕೊಳ್ಳಲು ಸಾಧ್ಯ. ತನ್ನ ಆಸ್ತಿಪಾಸ್ತಿಗಳನ್ನು ಅಹಿಂಸಾತ್ಮಕ ರೀತಿಯಲ್ಲಿ ರಕ್ಷಿಸಿಕೊಳ್ಳಬಯಸುವಾತ, ತನ್ನದೇ ಮನೆಯನ್ನು ಸರಿಯಾಗಿ ಇಟ್ಟುಕೊಳ್ಳಬೇಕು. ಮತ್ತು ತನ್ನ ಅಹಿಂಸೆ ಪರಿಣಾಮ ರಹಿತವಾಗುವುದಕ್ಕೆ ಮುನ್ನವೇ, ಹಿಂಸೆಯ ಮೂಲಕ ಗಳಿಸಿದ ತನ್ನ ವಸ್ತುಗಳನ್ನು ತ್ಯಾಗ ಮಾಡಬೇಕು. ಖಾಸಗಿ ಬಂಡವಾಳಷಾಹಿಯನ್ನು ಅಹಿಂಸಾ ವಿಧಾನಗಳ ಮೂಲಕ ರಕ್ಷಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದು ಅವರ ನಿಚ್ಚಳ ಅಭಿಪ್ರಾಯವಾಗಿತ್ತು. ಆದರೆ ಅಹಿಂಸಾತ್ಮಕ ಸಮಾಜದಲ್ಲಿ, ನಾನಾ ಉದ್ದೇಶಗಳಿಗೆ ಬಂಡವಾಳ ಬೇಕಾಗುತ್ತದೆ. ಆಗ ಪ್ರಭುತ್ವವೇ ಸಾಮಾಜಿಕ ಉಪಯೋಗಕ್ಕಾಗಿ ಬಂಡವಾಳವನ್ನು ಸಂಗ್ರಹಿಸುತ್ತದೆ.

ಆದ್ದರಿಂದ, ಗಾಂಧೀ ಮಾರ್ಗದಲ್ಲಿ, ಕಾರ್ಯಕ್ರಮವು, ಪ್ರಸ್ತುತ ಇರುವ ತಪ್ಪುಗಳ ವಿರುದ್ಧ ಅಹಿಂಸಾತ್ಮಕ ಅಸಹಕಾರದ ರೂಪದ ನೇರ ಕಾರ್ಯದಿಂದ ಹಿಡಿದು, ನಾನಾ ಬಗೆಯ ಆಂತರಿಕ ಸುಧಾರಣೆಗಳ ತನಕ ತೂಗಾಡುತ್ತದೆ. ಗಾಂಧೀಜಿಯ ರಚನಾತ್ಮಕ ಕಾರ್ಯಕ್ರಮಗಳು, ಪ್ರಾಮುಖ್ಯದಲ್ಲಿ, ಅಹಿಂಸಾತ್ಮಕ ಅಸಹಕಾರಕ್ಕೇನೂ

ಕಡಿಮೆಯದಲ್ಲ, ಎರಡೂ ಒಂದಕ್ಕೆ ಒಂದು ಬೆಸೆದುಗೊಂಡವೇ.

ಹೀಗೆ ಒಂದು ಅಂಶದಲ್ಲಿ ಗಾಂಧೀಜಿ ಕ್ರೋಪೋಟ್ಕಿನ್ ಮತ್ತು ಟಾಲ್ಸ್ಟಾಯಿಯವರಂಥ ರಾಜಕಾರಣವಾದಿಗಳಿಗೆ ಹತ್ತಿರವಾದವರು. ಆದರೆ ಅವರಿಂದಲೂ ಅವರು ತುಸು ಭಿನ್ನ. ಏಕೆಂದರೆ ಸಂಪೂರ್ಣವಾಗಿ ಪ್ರಭುತ್ವ ಇಲ್ಲದೆಯೇ ನಿಭಾಯಿಸಿಕೊಳ್ಳುವಷ್ಟು ಮಾನವ ಸ್ವಭಾವ ಪರಿಪೂರ್ಣವಾಗುವುದು ಎಂದಿಗೂ ಆಗುವುದಿಲ್ಲ ಎಂದು ಅವರು ನಂಬಿದ್ದರು. ಪ್ರಭುತ್ವ ಎಷ್ಟೆಷ್ಟು ಉತ್ತಮವಾಗುವುದೋ, ಅಷ್ಟಷ್ಟು ಕಡಿಮೆ ಅದು ಜನತೆಯ ಸ್ವಯಂಸೇವಕ ಸಂಘಟನೆಗಳಲ್ಲಿ ತಲೆ ಹಾಕುತ್ತದೆ.

ಪ್ರಾತಿನಿಧಿಕ ಸರ್ಕಾರದ ಬಗ್ಗೆಯೂ ಗಾಂಧೀಜಿಯವರಿಗೆ ಕೆಲವು ತುಂಬ ಸ್ವೋಪಜ್ಞ ವಿಚಾರಗಳು ಇದ್ದವು. ನೌಖಾಲಿಯ ಒಂದು ಭಾಷಣದಲ್ಲಿ, ವಯಸ್ಕ ಮತಾಧಿಕಾರ ಇರುವ ಹಾಗೆಯೇ ಮನುಷ್ಯ ಮತ ಚಲಾಯಿಸಲು ಒಂದು ವಯೋಮಿತಿಯನ್ನು ಗೊತ್ತುಪಡಿಸಬೇಕು ಎಂದು ಅವರು ಸೂಚಿಸಿದರು, ಆ ಮಿತಿ 50 ವರ್ಷ ಎಂದಿರಬೇಕೆಂಬುದು ಅವರ ವೈಯಕ್ತಿಕ ಅಭಿಪ್ರಾಯ. ಅಲ್ಲಿಂದಾಚೆಗೆ ಆ ವ್ಯಕ್ತಿ ಸ್ವಯಂಸೇವಾ ಸಂಸ್ಥೆಗಳಲ್ಲಿ ಭಾಗವಹಿಸಬಹುದು. ಪ್ರಭುತ್ವ ನಡೆಸುವ ಹೊಣೆ ಹೊತ್ತ ರಾಜಕೀಯ ಸಂಸ್ಥೆಗಳಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಬಾರದು. ಅಂತಹ ವ್ಯಕ್ತಿ ಸಲಹೆಗಾರನಾಗಿ ಮಾತ್ರ ಕೆಲಸ ಮಾಡಬಹುದು. ಅವರ ಈ ಅಭಿಪ್ರಾಯಕ್ಕೆ ಕಾರಣ, "ಜಗತ್ತು ಯುವಜನರಿಗೆ ಸೇರಿದ್ದು" ಎಂಬ ನಂಬಿಕೆ.

ಗಾಂಧೀಜಿಯವರ ಕೆಲವು ರಾಜಕೀಯ ವಿಚಾರಗಳನ್ನು, ಸತ್ಯಾಗ್ರಹ ಮತ್ತು ರಚನಾತ್ಮಕ ಕಾರ್ಯಗಳ ನಡುವಣ ಅವಿನಾ ಸಂಬಂಧವನ್ನು ಚರ್ಚಿಸಿದ್ದಾಯಿತು. ಈಗ ಒಂದು ವ್ಯಾವಹಾರಿಕ ಪ್ರಶ್ನೆಯತ್ತ ತಿರುಗೋಣ, ಏನೆಂದರೆ ಹೊರಗಿನಿಂದ ಆಕ್ರಮಣ ನಡೆದಾಗ ದೇಶ ತನ್ನನ್ನು ಹೇಗೆ ರಕ್ಷಿಸಿಕೊಳ್ಳಬಹುದು?ಗಾಂಧೀಜಿ ಬೇರೆ ಬೇರೆ ಸಮಯಗಳಲ್ಲಿ ಸತ್ಯಾಗ್ರಹಿಗಳೊಂದಿಗೆ ನಡೆಸಿದ ಚರ್ಚೆಗಳಲ್ಲಿ ಈ ಪ್ರಶ್ನೆಯನ್ನು ವಿಶ್ಲೇಷಿಸಿದರು. ನಾನಾ ಸಂದರ್ಭಗಳಲ್ಲಿ ಅವರು ಹೇಳಿದ್ದರ ಸಾರಾಂಶವನ್ನು ಇಲ್ಲಿ ಕೊಡಲು ಯತ್ನಿಸುತ್ತೇನೆ.

ಹೊರಗಿನಿಂದ ಆಕ್ರಮಣ ನಡೆದಾಗ ರಾಷ್ಟ್ರಪ್ರಭುತ್ವ ಏನು ಮಾಡಬೇಕು ಎಂದು ಒಬ್ಬರು ಕೇಳಿದರು. ವೈಯಕ್ತಿಕವಾಗಿ ಗಾಂಧೀಜಿಗೆ ಖಾಸಗಿ ಸೊತ್ತಿನ ಮೇಲೆ ನಂಬಿಕೆ ಇರಲಿಲ್ಲ. ಯಾವ ರಾಷ್ಟ್ರವೂ ಸೇನಾ ಬಲವನ್ನು ಹೂಡಿ ತನ್ನ ರಾಷ್ಟ್ರದ ಗಡಿಯೊಳಗಿರುವ ನೈಸರ್ಗಿಕ ಸಂಪನ್ಮೂಲಗಳನ್ನು ಇತರರು ಅನುಭವಿಸುವುದನ್ನು ತಡೆಗಟ್ಟದ ಹೊರತು, ಅದು ಭೂ ಪ್ರದೇಶದ ಯಾವುದೇ ನಿರ್ದಿಷ್ಟ ಭಾಗವನ್ನು ತನ್ನದೇ ಸ್ವಾಮ್ಯದ ಸೊತ್ತು ಎಂದು ಭಾವಿಸಲು ಸಾಧ್ಯವಿಲ್ಲ. ಆದ್ದರಿಂದ, ರಾಷ್ಟ್ರೀಯ



ಸಂಪತ್ತು ಎಂಬುದು ವಿಸ್ತೃತಗೊಂಡ ಖಾಸಗಿ ಸಂಪತ್ತಿಗೆ ಸಮ. ನಿಜವಾಗಿ ಅದು ಹಿಂಸೆಯ ಮೇಲೆ ನಿಂತದ್ದು. ಅಹಿಂಸಾ ವಿಧಾನದಿಂದ ಬದುಕ ಬಯಸುವ ಸಮುದಾಯ, ತನ್ನದೆನಿಸಿದ ರಾಷ್ಟ್ರೀಯ ಮೇರೆಯೊಳಗಿರುವ ಭೂ ಸಂಪತ್ತನ್ನು ಇತರ ಮಾನವ ಪರಿವಾರದೊಂದಿಗೆ ಹಂಚಿಕೊಳ್ಳಲು ಸಿದ್ಧವಿರಬೇಕು. ಕಾಣಿಕೆಗಳನ್ನು ಕೊಟ್ಟು ಸಹಾಯ ಮಾಡುವ ಗರ್ವ ಅದಕ್ಕಿರುವುದಿಲ್ಲ. ಆದರೆ ಭೂಮಿಯ ಸಕಲ ಸಂಪದವೂ ಇಡೀ ಮಾನವ ಪರಿವಾರದ ಬಳಕೆಗೆ ಹಕ್ಕಾಗಿ ದೊರಕಬೇಕು ಎಂಬುದನ್ನು ಒಪ್ಪಿಕೊಳ್ಳಬೇಕು. ನಿಸರ್ಗದ ಕೊಡುಗೆಗಳಿಂದ ಸಂಪತ್ತನ್ನು ಅಭಿವೃದ್ಧಿಗೊಳಿಸುವ ಸಾಮರ್ಥ್ಯ ಅದಕ್ಕಿದ್ದರೆ, ಆ ಸಾಮರ್ಥ್ಯವೂ ಅಥವಾ ಅವುಗಳ ಉತ್ಪನ್ನಗಳೆಲ್ಲವನ್ನೂ ಯಾರಿಗೆ ನ್ಯಾಯವಾಗಿ ಸೇರಬೇಕೋ ಅವರ ಪರವಾಗಿ ತನ್ನ ಕೈಯಲ್ಲಿ ಇರಿಸಿದ ನ್ಯಾಸದ ಆಸ್ತಿ ಎಂದು ತಾನು ಇಟ್ಟು ಕೊಂಡಿರಬೇಕು.

ಒಂದು ರಾಷ್ಟ್ರ ಅಂಥ ಆರ್ಥಿಕ ವ್ಯವಸ್ಥೆಯನ್ನು ರಚಿಸಲು ಯತ್ನಿಸಿದರೆ ಮತ್ತು ತಮ್ಮ ಜೀವನ ಮಟ್ಟವನ್ನು ಉತ್ತಮಗೊಳಿಸಿಕೊಳ್ಳಲು ತಮ್ಮಲ್ಲಿ ಸಾಕಷ್ಟು ಸಂಪನ್ಮೂಲ ಇಲ್ಲದ ಸಮುದಾಯಗಳು ನೆರೆ ಹೊರೆಯಲ್ಲಿ ಇರುವುದು ಕಾಣಬಂದರೆ, ಆ ಸಮುದಾಯಗಳು ಎರಡು ರೀತಿಯ ಕ್ರಮಗಳಿಗೆ ಕೈಹಚ್ಚಲು ಯತ್ನಿಸಿಯಾವು. ಮೊದಲನೆಯದಾಗಿ, ಅಂಥ ರಾಷ್ಟ್ರ ಅನ್ಯ ಸಮುದಾಯದ ಸರಹದ್ದಿನೊಳಗೆ ಇರುವ ನೈಸರ್ಗಿಕ ಸಂಪನ್ಮೂಲಗಳನ್ನು ಅಭಿವೃದ್ಧಿ ಪಡಿಸುವ ಉದ್ದೇಶದಿಂದ ವಿವೇಕಿಗಳಾದ ವ್ಯಕ್ತಿಗಳನ್ನು ಕಳುಹಿಸಬಹುದು. ಒಂದು ವೇಳೆ ಎರಡನೆಯ ಸಮುದಾಯಕ್ಕೆ ಸೇರಿರುವ ನೈಸರ್ಗಿಕ ಸಂಪನ್ಮೂಲಗಳು ತುಂಬ ಅಲ್ಪವಾಗಿದ್ದು, ತನ್ನದೇ ಸಂಪತ್ತು ಸಾಕಷ್ಟು ಹೆಚ್ಚು ಇದ್ದಲ್ಲಿ, ರಾಷ್ಟ್ರದ ಎರಡನೆಯ ಕರ್ತವ್ಯ ಏನೆಂದರೆ ಅನ್ಯ ಸಮುದಾಯದ ಸದಸ್ಯರು ಬಂದು ತಮ್ಮೊಳಗೇ ನೆಲೆಸುತ್ತಿರುವ ಜನಕಲ್ಯಾಣಕಾರಿ ಸಮಾಜದಲ್ಲಿ ಪಾಲುಗೊಳ್ಳಲು ಆಹ್ವಾನಿಸಬಹುದು. ಎಲ್ಲ ಜನಕ್ಕೂ ಸಾಕಾಗುವಷ್ಟು ಸಂಪತ್ತು ಇಲ್ಲದಿದ್ದರೆ, ಪ್ರತಿಯೊಬ್ಬರೂ ಮಿತ ಜೀವನ ನಡೆಸಬೇಕೇ ವಿನಾ, ಇನ್ನೊಬ್ಬರಿಗೆ ನೈತಿಕವಾಗಿ ಸೇರಿರುವುದನ್ನು ಅವರಿಗೆ ಇಲ್ಲವಾಗಿಸಿ ಬದುಕುವುದಲ್ಲ.

ಒಂದು ರಾಷ್ಟ್ರ ಹೀಗೆ ನಿಜಕ್ಕೂ ನೈತಿಕ ರಾಜಕೀಯ ಜೀವನವನ್ನು ನಡೆಸಲು ಯತ್ನಿಸಿದಲ್ಲಿ, ಮತ್ತು ಅಕಸ್ಮಾತ್ ಇನ್ನಾವುದೋ ರಾಷ್ಟ್ರದ ನಾಯಕರು ಅದರ ಮೇಲೆ ಆಕ್ರಮಣ ನಡೆಸಿದಲ್ಲಿ, ಆಗ ಪ್ರಥಮ ಕರ್ತವ್ಯವೆಂದರೆ, ಸತ್ಯಾಗ್ರಹದ ಮಾರ್ಗದಲ್ಲಿ ತಮ್ಮ ನೀತಿಬದ್ಧ ಆಸ್ತಿಯನ್ನು ರಕ್ಷಿಸಿಕೊಳ್ಳುವುದು. ಸತ್ಯಾಗ್ರಹಿಗಳ ತಂಡಗಳನ್ನು ಕೊಚ್ಚಿ ಹಾಕಲೂಬಹುದು. ಆಕ್ರಮಣಕಾರ, ಹೆಸರಿಗಾದರೂ, ದೇಶವನ್ನು ಸ್ವಾಧೀನ ಪಡಿಸಿಕೊಳ್ಳಬಹುದು. ಆದರೆ ಆ ಸಮುದಾಯದಲ್ಲಿ ಅಳಿದುಳಿದವರು ಆಕ್ರಮಣಕಾರನ ವಿರುದ್ಧ ಅಹಿಂಸಾತ್ಮಕ ಅಸಹಕಾರ ನಡೆಸಲು ಒಪ್ಪುವವರಾಗಬೇಕು. ಹಿಂಸಾ ಮಾರ್ಗ

ಹಿಡಿದು ಒಂದು ಬೆರಳನ್ನು ಮೇಲೆತ್ತಬಾರದು.

ಆಮೇಲೆ ಗಾಂಧೀಜಿಯವರಿಗೆ ಒಂದು ಪ್ರಶ್ನೆ ಹಾಕಲಾಯಿತು. ಈ ವಿಧಾನದಿಂದ ಆಕ್ರಮಣಕಾರನ ಹೃದಯ ಕರಗೀತೆ? ನಾಯಕರ ಹೃದಯ ಕರಗದೆ ಇರಬಹುದು, ಆದರೆ ನಾವು ಅದರ ಸಾಧ್ಯತೆಯಲ್ಲಿ ಶ್ರದ್ಧೆ ಉಳಿಸಿಕೊಂಡಿರಲೇಬೇಕು- ಇದು ಗಾಂಧೀಜಿಯ ಉತ್ತರ. ಆದರೆ ಆಕ್ರಮಣಕಾರರ ದಂಡಿನಲ್ಲಿ ಬಹುಪಾಲು ಜನ ಸಾಧಾರಣ ವ್ಯಕ್ತಿಗಳು, ತಾತ್ಕಾಲಿಕವಾಗಿ ಸಿದ್ಧಾಂತದ ಸಂಕೋಲೆಗೆ ಒಳಗುಮಾಡಲ್ಪಟ್ಟ, ತಪ್ಪು ಆಲೋಚನೆಯಲ್ಲಿ ಇರುವವರು. ಹಾಗೆ, ಆಕ್ರಮಣಕ್ಕೆ ಒಳಗಾದ ದೇಶ ತಮ್ಮ ಮೇಲೆ ಸೇಡು ತೀರಿಸಿಕೊಳ್ಳುವುದಿಲ್ಲ. ಆದರೂ ಆಕ್ರಮಣಕಾರರಿಗೆ ಶರಣಾಗುವುದಿಲ್ಲ ಅಥವಾ ಅವರ ಆಜ್ಞೆಗಳನ್ನು ಪಾಲಿಸುವುದಿಲ್ಲ ಎಂದು ಆಕ್ರಮಣಕಾರಿ ದೇಶದ ಜನ ಕಂಡುಕೊಂಡಾಗ, ಆ ಅಚ್ಚರಿಯೇ ಅವರನ್ನು ಆಲೋಚನೆ ಮಾಡಲು ಹಚ್ಚುತ್ತದೆ. ಸತ್ಯಾಗ್ರಹಿಗಳು ಸ್ಥಿರ ಚಿತ್ತರಾಗಿದ್ದು, ಆಕ್ರಮಣಕಾರರು ತಮ್ಮ ವೈರಿಗಳು ಎಂದು ಭಾವಿಸಬಾರದು. ಸತತವಾದ ಧೈರ್ಯದಿಂದ ಹಾಗೂ ಅಹಿಂಸಾತ್ಮಕ ಪ್ರತಿರೋಧದಿಂದ, ಅವರನ್ನು ತಮ್ಮ ವಿಚಾರದೃಷ್ಟಿಗೆ ಪರಿವರ್ತಿಸುವ ಭರವಸೆ ಹೊಂದಿರಬೇಕು. ಆಗ ಗೆಲುವು ಪಡೆಯಲು ಸಾಧ್ಯವಾದೀತು. ಸೈನ್ಯದಲ್ಲಿ ಬಹುಪಾಲು ಇರುವ ಸಾಮಾನ್ಯ ಜನರನ್ನು ಸತ್ಯಾಗ್ರಹಿಗಳ ಪಕ್ಷಕ್ಕೆ ಒಲಿಸಿಕೊಂಡಾಗ ಮತ್ತು ತತ್ಪರಿಣಾಮವಾಗಿ ಆ ಜನರ ನಾಯಕರು ಪ್ರತ್ಯೇಕಿಸಲ್ಪಟ್ಟಾಗ ಜಯ ಬರುತ್ತದೆ.

ಹೀಗೆ ಸತ್ಯಾಗ್ರಹಿ ಅತಿ ಕಠಿಣ ವಿರೋಧಿಯ ಹೃದಯವನ್ನು ಪರಿವರ್ತಿಸುವ ಭರವಸೆ ಹೊಂದಿರುತ್ತಾನೆ; ಅದೇ ವ್ಯಾವಹಾರಿಕ ಹೆಜ್ಜೆ. ಆದರೆ ಪ್ರತಿ ಸಲವೂ ಗೆಲ್ಲದಿರಬಹುದು. ಆದರೆ ಅದು ಸಾಮಾನ್ಯ ಸೈನಿಕನ ಕಲ್ಪನೆಯನ್ನು ಅರಳಿಸಬಹುದಾದರೆ ಮತ್ತು ತನ್ಮೂಲಕ ಅನ್ಯ ಪಕ್ಷದಲ್ಲಿನ ದುಷ್ಟ ಶಕ್ತಿಗಳನ್ನು ಪ್ರತ್ಯೇಕಿಸಬಲ್ಲುದಾದರೆ, ಆಗ ಮಾನವ ಸಾಧ್ಯವಾದ ಪರಮ ಸಿದ್ಧಿಯನ್ನು ಪಡೆಯಬಹುದು.

ಮೇಲೆ ಹೇಳಿರುವ, ಆಕ್ರಮಣಕ್ಕೊಳಗಾದ ಸತ್ಯಾಗ್ರಹದ ಆದರ್ಶದ ಚಿತ್ರಣದಂತೆ ತನ್ನ ಕನಸಿನ ಭಾರತ ಶ್ರಮಿಸಬೇಕು ಎಂದು ಗಾಂಧೀಜಿ ಬಯಸಿದ್ದರು. ತಮ್ಮ ಜೀವನದುದ್ದಕ್ಕೂ ಅವರು ನಮ್ಮ ದೇಶದಲ್ಲಿ ಸತ್ಯಾಗ್ರಹದ ಮಟ್ಟವನ್ನು ಏರಿಸಲು ನಿರಂತರವಾಗಿ ಶ್ರಮಿಸಿದರು. ಅದರಿಂದ, ನಮ್ಮ ನಮ್ಮಲ್ಲೇ ಆ ವಿಧಾನದಿಂದ ಸಣ್ಣ ಪುಟ್ಟ ಬದಲಾವಣೆಗಳನ್ನು ಮಾಡಿಕೊಳ್ಳಲು ಹೇಗೆ ಅವರು ಸಲಹೆ ಮಾಡಿದ್ದರೋ, ಅದೇ ರೀತಿ ಅಂತಿಮವಾಗಿ ಅಂತಾರಾಷ್ಟ್ರೀಯ ಸಂಘರ್ಷಗಳಲ್ಲಿಯೂ ಅದೇ ಅಸ್ತ್ರವನ್ನೇ ಬಳಸಲು ನಾವು ಸಿದ್ಧರಾಗಬೇಕು ಎಂದು



ಆಶಿಸಿದ್ದರು. ಗಾಂಧೀಜಿಯವರ ಇಡೀ ಜೀವನವನ್ನು ನೋಡಿದರೆ, ಅವರು ಹೇಗೆ ಈ ಗುರಿಯನ್ನು ನಿರಂತರವಾಗಿ ಹೊಂದಿದ್ದರು ಎಂಬುದನ್ನು ಕಾಣುತ್ತೇವೆ. ಇಲ್ಲಿ ಫಲಿತಾಂಶಗಳನ್ನು ಸಾಧಿಸಲು ಅವರು ವಾಸ್ತವವಾಗಿ ಹೇಗೆ ಶ್ರಮಿಸಿದರು ಎನ್ನುವುದನ್ನು ವಿವರಿಸುವುದು ನಾಳಿನ ನನ್ನ ಮೂರನೆಯ ಉಪನ್ಯಾಸದ ಉದ್ದೇಶ.

❖ ❖ ❖ ❖

## ೩. ಭಾರತದಲ್ಲಿನ ಕಾರ್ಯ

ಗಾಂಧೀಜಿಯವರು ತಮ್ಮ ಆದರ್ಶಗಳನ್ನು ಆಚರಣೆಗೆ ತರಲು ವಾಸ್ತವಿಕವಾಗಿ ಹೇಗೆ ಯತ್ನಿಸಿದರು ಎಂಬುದನ್ನು ವಿವರಿಸುವುದು ನನ್ನ ಕೊನೆಯ ಭಾಷಣದ ಉದ್ದೇಶ.

1915 ರಲ್ಲಿ ಗಾಂಧೀಜಿ ದಕ್ಷಿಣ ಆಫ್ರಿಕದಿಂದ ಭಾರತಕ್ಕೆ ಹಿಂದಿರುಗಿದಾಗ, ಸತ್ಯಾಗ್ರಹ ವಿಧಾನವನ್ನು ವಿಸ್ತೃತ ಕ್ಷೇತ್ರಕ್ಕೆ ಅಳವಡಿಸುವುದು ಅವರಿಗಿದ್ದ ಉದ್ದೇಶ. ದಕ್ಷಿಣ ಆಫ್ರಿಕದಲ್ಲಿ, ಭಾರತೀಯ ಸಮುದಾಯಕ್ಕೆ ಇಲ್ಲವಾಗಿದ್ದ ಕೆಲವು ನಾಗರಿಕ ಹಕ್ಕುಗಳನ್ನು ಮತ್ತೆ ಪಡೆಯಲು ಅಥವಾ ಸ್ಥಾಪಿಸಲು ಅವರು ಆ ವಿಧಾನವನ್ನು ಪ್ರಯೋಗಿಸಿದ್ದರು. ನೇರ ಕಾರ್ಯಕ್ರಮದ ಈ ಅಸ್ತ್ರವನ್ನು ಅಂದರೆ ಸತ್ಯಾಗ್ರಹವನ್ನು ಸಜ್ಜುಗೊಳಿಸುತ್ತಿದ್ದಾಗ, ಅದು ಭಾರತದ ರಾಜಕೀಯ ಮುಕ್ತಿಗಾಗಿಯೂ ಒಂದು ಸಾಧನವಾಗಿ ಉಪಯುಕ್ತವಾದೀತೆಂದು ಭಾವಿಸತೊಡಗಿದ್ದರು. ಅವರು ಭಾರತಕ್ಕೆ ಬಂದ ಮೇಲೆ, ಒಂದು ವರ್ಷದ ಮಟ್ಟಿಗಾದರೂ ಯಾವುದೇ ರಾಜಕೀಯ ಹೋರಾಟದಲ್ಲಿ ಭಾಗವಹಿಸಬಾರದು;ಆದರೆ ದೇಶದಲ್ಲೆಲ್ಲ ಪ್ರವಾಸ ಮಾಡಿ, ಅಲ್ಲಿನ ಸ್ಥಿತಿಗತಿಗಳನ್ನು ಖುದ್ದಾಗಿ ಪರಿಚಯಿಸಿಕೊಳ್ಳಬೇಕೆಂದು ಗೋಖಲೆಯವರು ಸಲಹೆ ಮಾಡಿದ್ದರು. ಹಾಗಾಗಿ, ಅವರು ಸಾರ್ವಜನಿಕ ಜೀವನಕ್ಕೆ ಪ್ರವೇಶಿಸುವ ಮುನ್ನ ಒಂದು ವರ್ಷಕಾಲ ಭಾರತದ ನಾನಾ ಭಾಗಗಳಲ್ಲಿ ಸುತ್ತಾಡಿದರು, ಪರಿಸ್ಥಿತಿಯನ್ನು ಕಣ್ಣಾರೆ ನೋಡಿದರು, ಭಾರತೀಯರು ಅನುಭವಿಸುತ್ತಿದ್ದ ಕಷ್ಟ ಕಾರ್ಪಣ್ಯಗಳನ್ನು ಸ್ವತಃ ಕಂಡರು.

ಆ ದಿನಗಳಲ್ಲಿ ಅವರು ಮಾಡಿದ ಒಂದು ಅತಿ ಮುಖ್ಯ ಭಾಷಣವೆಂದರೆ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದ ಆರಂಭೋತ್ಸವದಲ್ಲಿ ಮಾಡಿದ ಭಾಷಣ. ಅನೇಕ ಗಣ್ಯವ್ಯಕ್ತಿಗಳು ಆಹ್ವಾನಿತರಾಗಿದ್ದರು. ರಾಷ್ಟ್ರನಾಯಕರ ಪೈಕಿ ಶ್ರೀಮತಿ ಆನಿಬೆಸಂಟ್ ಉಪಸ್ಥಿತರಿದ್ದರು. ವೈಸ್‌ರಾಯರೂ ಇದ್ದರು. ಗಾಂಧೀಜಿ ತಮ್ಮ ಭಾಷಣದಲ್ಲಿ, ರಾಜ ಮಹಾರಾಜರುಗಳ ಪೋಷಾಕಿನ ಮತ್ತು ಆಭರಣ ವೈಭವ ಕಣ್ಣುಕೋರೈಸುತ್ತಿದೆ ಎಂದರು. ಅದು ಲಂಡನ್ನಿನ ಚಿನಿವಾರರಿಗೆ ಖುಷಿ ಕೊಟ್ಟಿರಬಹುದು. ಆದರೆ ರಾಜಮಹಾರಾಜರುಗಳು ಬಡ ಭಾರತವನ್ನು



ಪ್ರತಿನಿಧಿಸುವರೇ? ಅವರು ಇನ್ನೂ ಒಂದು ಪ್ರಶ್ನೆ ಎತ್ತಿದರು. ವೈಸ್‌ರಾಯರು ಪೊಲೀಸ್ ರಕ್ಷಣೆಯಲ್ಲಿ ಸಭೆಗೆ ಬರಬೇಕೆ? ಅವರು ನಿಜಕ್ಕೂ ಜನತಾ ಪ್ರತಿನಿಧಿ ಆಗಿದ್ದರೆ ಮತ್ತು ಅವರ ನಿಜವಾದ ಪ್ರಭು ಆಗಿದ್ದರೆ, ಆಗ ಅವರ ರಕ್ಷಣೆ ಜನರ ಕರ್ತವ್ಯ. ಆದರೆ ಆ ಭಾವನೆ ಇರಲಿಲ್ಲವಾದುದರಿಂದ ಕೆಲವು ಸಲ, ರಾಷ್ಟ್ರಭಕ್ತರು ಎಂದು ಕರೆದುಕೊಳ್ಳುವ ಜನ ಅವರತ್ತ ಬಾಂಬುಗಳನ್ನು ಎಸೆದಿದ್ದರು. ಶ್ರೀಮತಿ ಆನಿಬೆಸಂಟ್ ಕೋಪದಿಂದ ಎದ್ದು ನಿಂತು, ಗಾಂಧೀಜಿಗೆ ಮಾತು ನಿಲ್ಲಿಸಿ ಎಂದು ಹೇಳಿದರು. ಕೊನೆಗೆ ಸಭೆ ಚದುರಿತು.

ಭಾರತದ ಸಾರ್ವಜನಿಕ ಜೀವನಕ್ಕೆ ಗಾಂಧೀಜಿ ತಮ್ಮನ್ನು ಪರಿಚಯಿಸಿಕೊಂಡದ್ದು ಹೀಗೆ. ಆದರೆ ಅವರ ಉದ್ದೇಶವೇನೋ ಎಂದಿಗೂ ನಕಾರಾತ್ಮಕವಾಗಿರಲಿಲ್ಲ. ದಕ್ಷಿಣ ಆಫ್ರಿಕದಲ್ಲಿ ಸಂಘಟಿಸಿದ ಹಾಗೆಯೇ ಇಲ್ಲಿಯೂ ಸತ್ಯಾಗ್ರಹವನ್ನು ಸಂಘಟಿಸಲು ಬಯಸಿದ್ದರು. ಅದಕ್ಕಾಗಿ, ತಾವು ಕೆಲಸ ಮಾಡ ಬಹುದಾದ ಸಂಘಟನೆಗಳಿವೆಯೇ ಎಂದು ನೋಡಲಾರಂಭಿಸಿದರು. ಪ್ರತ್ಯೇಕವಾದ ಸಂಸ್ಥೆಯನ್ನು ಕಟ್ಟಿಬೆಳೆಸುವುದಕ್ಕೆ ಬದಲಾಗಿ, ಇರುವ ಸಂಸ್ಥೆಗೇ ಸದಸ್ಯನಾಗಿ ಸೇರಿ, ಕ್ರಮೇಣ ಜನರನ್ನು ತಮ್ಮ ದೃಷ್ಟಿಗೆ ಒಲಿಸಿಕೊಳ್ಳಬಹುದು, ಅದರಿಂದ ಸಂಸ್ಥೆಯ ಲಕ್ಷಣವನ್ನೇ ಬದಲಾಯಿಸಬಹುದು ಎಂದು ಅವರು ಯೋಚಿಸಿದರು. ಮುಂದೆ, ಸಮಾನಾಂತರವಾದ ಇನ್ನೊಂದು ಸಂಸ್ಥೆಯನ್ನು ಕಟ್ಟುವುದಕ್ಕೆ ಬದಲಾಗಿ, ಕಾಂಗ್ರೆಸ್‌ಗೆ ಏಕೆ ಸೇರಿದಿರಿ ಎಂದು ಪ್ರಶ್ನಿಸಿದಾಗ, ಈ ಸಂಸ್ಥೆಗಳ ಮೂಲಕ ಆದಷ್ಟು ಜನರನ್ನು ತಮ್ಮ ಯೋಜನೆಗೆ ಒಳಪಡಿಸಿಕೊಳ್ಳುವುದೇ ತಮ್ಮ ಇಚ್ಛೆ ಎಂದು ಅವರು ಉತ್ತರಿಸಿದರು.

ಆದ್ದರಿಂದ, ಅವರ ಕಾರ್ಯರೀತಿ ಹಾಗಿತ್ತು. ತಾವು ಕೆಲಸ ಆರಂಭಿಸ ಬಯಸಿದಾಗ ಅವರು ಮೊದಲು ದೃಷ್ಟಿ ಹರಿಸಿದ್ದು ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯತ್ತ (ಭಾರತ ಸೇವಕರ ಸಂಘ). ಆ ಸಂಸ್ಥೆ ಹಲವು ವರ್ಷಗಳಿಂದ ಸಾಮಾಜಿಕ ರಂಗದಲ್ಲಿ ಸಕ್ರಿಯವಾಗಿತ್ತು. ಗಾಂಧೀಜಿ ಅದರ ಸದಸ್ಯರಾಗಬೇಕೆಂದು ಗೋಖಲೆ ಕಾತರರಾಗಿದ್ದರು. ಆದರೆ ಗೋಖಲೆಯವರು ನಿಧನರಾದರು. ಗಾಂಧೀಜಿಯ ವಿಚಾರ ಹಾಗೂ ಉದ್ದೇಶಗಳ ಬಗ್ಗೆ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಅನೇಕ ಸದಸ್ಯರಲ್ಲಿ ಶಂಕೆ ಇತ್ತು. ಹಾಗಾಗಿ ಗಾಂಧೀಜಿ ಸದಸ್ಯತ್ವಕ್ಕೆ ಅರ್ಜಿ ಸಲ್ಲಿಸಿದಾಗ, ಸಮಿತಿಯಲ್ಲಿ ತೀವ್ರ ಮತಭೇದ ಏರ್ಪಟ್ಟಿತು. ಕೊನೆಗೆ ಗಾಂಧೀಜಿಯೆ ತಮ್ಮ ಅರ್ಜಿಯನ್ನು ವಾಪಸು ಪಡೆಯಲು ನಿರ್ಧರಿಸಿದರು.

ಈ ನಡುವೆ ಶ್ರೀಮತಿ ಆನಿಬೆಸಂಟ್ ಒಂದು ಹೊಸ ಸಂಸ್ಥೆಯನ್ನು ಆರಂಭಿಸಿದ್ದರು.ಅದೇ ಅಖಿಲ ಭಾರತ ಹೋಂ ರೂಲ್ ಲೀಗ್. ಆಕೆ ಕೆಲವು

ಭಾಷಣಗಳನ್ನು ಮಾಡಿದ್ದು ಸರ್ಕಾರ ಅವನ್ನು ದೇಶದ್ರೋಹಕರ ಎಂದು ಭಾವಿಸಿತ್ತು. ಇತರ ದೇಶಗಳು ಅಥವಾ ಅಧೀನ ರಾಜ್ಯಗಳು (ಡೊಮಿನಿಯನ್ಸ್) ಬ್ರಿಟಿಷ್ ಸಾಮ್ರಾಜ್ಯದ ಸದಸ್ಯರೇ ಆಗಿದ್ದರೂ ಸ್ವತಂತ್ರರಾಗಿದ್ದವು. ಅದೇ ರೀತಿ ಭಾರತಕ್ಕೂ ಅದೇ ಸ್ಥಾನವೀಯಬೇಕು ಎಂದು ಅಧೀನ ರಾಜ್ಯಗಳು ಅನುಭವಿಸುವ ಪೌರ ಹಕ್ಕುಗಳನ್ನೇ ಭಾರತೀಯರೂ ಅನುಭವಿಸುವಂತಾಗಬೇಕು ಎಂಬುದೇ ಅವರ ವಿಚಾರವಾಗಿತ್ತು.

ಶ್ರೀಮತಿ ಆನಿಬೆಸಂಟ್ ಇದ್ದುದು ಮದರಾಸಿನಲ್ಲಿ . ಹೋಂ ರೂಲ್ ಲೀಗ್ ಉತ್ತರಕ್ಕಿಂತ ದಕ್ಷಿಣದಲ್ಲೇ ಪ್ರಮುಖವಾಗಿತ್ತು. ಮುಂಬೈ ಮತ್ತು ಇತರ ಸ್ಥಳಗಳಲ್ಲಿ ಅದರ ಶಾಖೆಗಳಿದ್ದವು. ಮುಂಬೈ ಶಾಖೆ, ತನಗೆ ಪ್ರಭಾವ ದೊರಕಿಸಿಕೊಳ್ಳಲು, ಒಬ್ಬ ಅಖಿಲ ಭಾರತ ಮಟ್ಟದ ವ್ಯಕ್ತಿಯನ್ನು ಅಧ್ಯಕ್ಷನನ್ನಾಗಿ ಆಹ್ವಾನಿಸಬೇಕೆಂದು ತೀರ್ಮಾನಿಸಿತು. ಆಯ್ಕೆ ಗಾಂಧೀಜಿ ಬಳಿಗೆ ಬಂತು.

ಗಾಂಧೀಜಿಯನ್ನು ಆಹ್ವಾನಿಸಲು ಬಯಸಿದವರ ಪೈಕಿ, ಮಹಮದಾಲಿ ಜಿನ್ನಾ, ಎಂ. ಆರ್. ಜಯಕರ್, ಕೆ. ಎಂ. ಮುನ್ಷಿ ಮತ್ತು ಇನ್ನೂ ಇತರರು ಇದ್ದರು. ಆದರೆ, ಕಾಲಕ್ರಮೇಣ, ಗಾಂಧೀಜಿ ಸಂಸ್ಥೆಯನ್ನು ತನ್ನ ಇಚ್ಛೆಯ ಸ್ವರೂಪಕ್ಕೆ ತಿರುಗಿಸಬಹುದೆಂದು ಜಯಕರ್‌ಗೆ ಆಗಲೇ ಎನಿಸಿತ್ತು. ಗಾಂಧೀಜಿಗೆ ಸಸ್ಯಾಹಾರದ ಗೀಳು ಇದೆ, ವ್ಯವಹಾರಗಳಲ್ಲಿ ಹಿಂದಿಯನ್ನು ತರಬಹುದು ಇತ್ಯಾದಿ. ಅಲ್ಲದೆ ಅವರಿಗೆ ನೇರ ಕಾರ್ಯಾಚರಣೆಯಲ್ಲೂ ನಂಬಿಕೆ. ಆದರೆ ಹೋಂ ರೂಲ್ ಲೀಗಿಗೆ ಕೇವಲ ಭಾರತ ಜನತೆಯ ರಾಜಕೀಯ ಶಿಕ್ಷಣದಲ್ಲಿ ನಂಬಿಕೆ, ಸಂವಿಧಾನಬದ್ಧ ಪರಿವರ್ತನೆಯಲ್ಲಿ ನಂಬಿಕೆ. ಇವೆಲ್ಲ ಗಾಂಧೀಜಿಗೆ ಗೊತ್ತಿತ್ತು. ಈ ಭಯಗಳನ್ನೆಲ್ಲ ಹೋಗಲಾಡಿಸಲು ಯತ್ನಿಸಿದರು. ಜಯಕರ್ ಅವರ ಮುಖ್ಯ ತಕರಾರೆಂದರೆ, ಗಾಂಧೀಜಿ ತುಂಬ ದೊಡ್ಡ ವ್ಯಕ್ತಿ. ಹೋಂ ರೂಲ್ ಲೀಗ್‌ನಂಥ ಸಣ್ಣ ಸಂಸ್ಥೆಯಲ್ಲಿ ತೊಡಗಿಸಿಕೊಳ್ಳಲು ಅಸಾಧ್ಯ. ಆದ್ದರಿಂದ ಅವರೇಕೆ ಲೀಗಿಗೆ ಬರಬೇಕು? ಬಂದರೆ,ಕೊನೆಗೆ ಲೀಗನ್ನೇ ಮುಳುಗಿಸಿಬಿಡಬಹುದು.

ಶ್ರೀಮತಿ ಬೆಸಂಟ್ ಇನ್ನೂ ಪ್ರಬಲವಾಗಿ ಎಚ್ಚರಿಕೆಯ ಗಂಟೆಯನ್ನು ಬಾರಿಸಿದರು. ಹೋಂ ರೂಲ್ ಲೀಗ್‌ನಲ್ಲಿ ಒಡಕು ಉಂಟಾಯಿತು. ಶ್ರೀಮತಿ ಬೆಸಂಟ್ ಇನ್ನೊಂದು ಹೋಂ ರೂಲ್ ಲೀಗನ್ನೇ ಆರಂಭಿಸಿದರು. ಅದರ ಹೆಸರು "ರಾಷ್ಟ್ರೀಯ ಹೋಂ ರೂಲ್ ಲೀಗ್."

ಕಾಲ ಸರಿಯಿತು. ಗಾಂಧೀಜಿ, ಹೋಂ ರೂಲ್ ಲೀಗ್ ಸದಸ್ಯರನ್ನು ತಮ್ಮ ಅಭಿಪ್ರಾಯಕ್ಕೆ ಪರಿವರ್ತಿಸಲಾರಂಭಿಸಿದರು. ಹೋಂ ರೂಲ್ ಲೀಗ್ ಆಗಲಿ ಅಥವಾ ಅದರ ಚಟುವಟಿಕೆಗಳಾಗಲಿ ಜನತೆಯ ರಾಜಕೀಯ ಶಿಕ್ಷಣಕ್ಕೆ ಮಾತ್ರ



ಸೀಮಿತವಾಗಬಾರದು ಎಂದು ಅವರು ಭಾವಿಸಿದರು. ಜನಸಾಮಾನ್ಯ ಸುಸಂಘಟಿತ ಕಾರ್ಯಾಚರಣೆ ಇಲ್ಲದಿದ್ದರೆ ಭಾರತಕ್ಕೆ ಭವಿಷ್ಯವಿಲ್ಲ. ಗಾಂಧೀಜಿಯವರಿಗೆ ಸ್ಪಷ್ಟವಾಗಿ ಆಸಕ್ತಿ ಇದ್ದುದು ಭಾರತದ ಜನಸಾಮಾನ್ಯರ ಸ್ವಾತಂತ್ರ್ಯದಲ್ಲೇ ಹೊರತು ಇಂಗ್ಲಿಷ್ ಮಾತನಾಡುವ ಜನರ ಸ್ವಾತಂತ್ರ್ಯದಲ್ಲಿ ಅಲ್ಲ. ಆದ್ದರಿಂದಲೇ ಅವರು ಹಿಂದಿ ಭಾಷೆಯ ಬಗ್ಗೆ ಒತ್ತಿ ಹೇಳಿದರು. ಅದರಿಂದ ಸಾಮಾನ್ಯ ಜನರೂ ಕಾರ್ಯಗಳಲ್ಲಿ ಭಾಗವಹಿಸಲು ಸಾಧ್ಯವೆಂದು ನಂಬಿದ್ದರು.

ಆ ದಿನಗಳಲ್ಲಿ ಅವರು ಹರಕು ಮುರಕು ಹಿಂದಿಯಲ್ಲಿ ಮಾತನಾಡುತ್ತಿದ್ದರು. ಆದರೆ ಆ ಬಗ್ಗೆ ಅವರಿಗೆ ನಾಚಿಕೆ ಏನೂ ಇರಲಿಲ್ಲ. ಈ ಬೆಳವಣಿಗೆಗಳ ಪರಿಣಾಮವಾಗಿ ಅನೇಕ ಪ್ರಮುಖ ಸದಸ್ಯರು, ಜಿನ್ನಾ, ಎಂ. ಆರ್ ಜಯಕರ್, ಕೆ. ಎಂ. ಮುನ್ಷಿ ಮುಂತಾದ ಅನೇಕ ಇತರ ಪ್ರಮುಖರು ಸಂಸ್ಥೆಯನ್ನು ಬಿಟ್ಟರು.

ಈ ನಡುವೆ ಭಾರತದಲ್ಲಿ ಅನೇಕ ಘಟನೆಗಳು ನಡೆಯುತ್ತಿದ್ದವು. ಮೊದಲನೆಯ ವಿಶ್ವಯುದ್ಧ ಮುಗಿದಿತ್ತು. ಅನಂತರ ರೌಲೆಟ್ ಕಾಯಿದೆ ಬಂತು. ಖಿಲಾಫತ್ ಅನ್ಯಾಯಗಳು ಭಾರತದಲ್ಲಿನ ಮುಸ್ಲಿಂ ಪಂಗಡದವರನ್ನು ಕಂಗೆಡಿಸಿದವು.

ಆ ಸಮಯದಲ್ಲಿ ಗಾಂಧೀಜಿ ಹೋಂ ರೂಲ್ ಲೀಗ್‌ನಿಂದ ಹೊರ ಹೊರಟದ್ದು ಆಶ್ಚರ್ಯವೇನಲ್ಲ. 'ಯಂಗ್ ಇಂಡಿಯಾ' ಎಂಬುದು ಹೋಂ ರೂಲ್ ಲೀಗಿನ ಪತ್ರಿಕೆ. ಅದು ಸರಿಯಾಗೇನೂ ನಡೆಯುತ್ತಿರಲಿಲ್ಲ. ಅದರ ಮುದ್ರಣ 'ಬಾಂಬೆ ಕ್ರಾನಿಕಲ್' ಅಚ್ಚು ಕೂಟದ ಕೈಯಲ್ಲಿತ್ತು. ಅದಕ್ಕೆ ಬಿಲ್ ಪಾವತಿ ಬಗ್ಗೆ ಸದಾ ಅತೃಪ್ತಿ. ಆಗ ಗಾಂಧೀಜಿ, ಪತ್ರಿಕೆಯನ್ನು ತಮಗೆ ವಹಿಸಬೇಕೆಂದೂ ಸಕಾಲಿಕ ಪಾವತಿ ತಮ್ಮ ಜವಾಬ್ದಾರಿ ಎಂದೂ ಸೂಚಿಸಿದರು. 1919 ರ ಅಕ್ಟೋಬರ್‌ನಲ್ಲಿ ಅವರು ಅದನ್ನು ವಹಿಸಿಕೊಂಡಂದಿನಿಂದ, 1931 ರ ವರೆಗೂ ಹೆಚ್ಚು ಕಡಿಮೆ ಪತ್ರಿಕೆ ಸಲೀಸಾಗಿ ನಡೆಯಿತು. ಅದರ ಕೊನೆಯ ಸಂಚಿಕೆ 1932, ಜನವರಿ 31ರಂದು ಪ್ರಕಟಗೊಂಡಿತು. ಮಧ್ಯೆ ಮಧ್ಯೆ ಪತ್ರಿಕೆ ಸ್ಥಗಿತಗೊಂಡದ್ದೂ ಉಂಟು. ಅದೇ ಬೇರೆ ಕತೆ.

ಏನೇ ಆಗಲಿ, ಅವರು ಪತ್ರಿಕೆಯನ್ನು ಹೊರಡಿಸಿದರು. ಸ್ವತಂತ್ರವಾದ ಬೇರೆ ಸಂಸ್ಥೆಗೆ ಸೇರದೆ, ಭಾರತ ರಾಷ್ಟ್ರೀಯ ಕಾಂಗ್ರೆಸ್ ಸೇರಿದರು. ಸಾಧ್ಯವಾದರೆ ಅದರ ಮೂಲಕ ಕೆಲಸ ಮಾಡಲೆಂದು ಕಾಂಗ್ರೆಸ್ ಅಭಿಪ್ರಾಯ ವ್ಯಕ್ತಪಡಿಸುವುದರಲ್ಲೆ ಅಥವಾ ನಿರ್ಣಯ ಸ್ವೀಕರಿಸುವುದರಲ್ಲೆ ತೃಪ್ತವಾಗಿತ್ತು ಎನ್ನುವುದು ಗಾಂಧೀಜಿಯ ಅನುಭವ. ಆ ನಿರ್ಣಯಗಳನ್ನು ಕಾರ್ಯತಃ ಮುನ್ನಡೆಸಿದ್ದು ಇಲ್ಲವೇ ಇಲ್ಲ ಎನ್ನಬಹುದು. ಆ ಸಂಸ್ಥೆಯಲ್ಲಿ ಸಕ್ರಿಯ ರಾಜಕೀಯ ಸಂಘಟನೆ ಆಗಬೇಕು. ಅಗತ್ಯವಾದಾಗಲೆಲ್ಲ ಕಾರ್ಯಾಚರಣೆಯಲ್ಲಿ ತೊಡಗಬೇಕು ಎಂದು ಗಾಂಧೀಜಿ ಬಯಸಿದರು. ಆದ್ದರಿಂದ, ಅವರು ಕಾಂಗ್ರೆಸ್ ಸೇರಿದೊಡನೆಯೇ ರೌಲತ್ ಕಾಯಿದೆ ಹಾಗೂ ಖಿಲಾಫತ್

ಅನ್ಯಾಯಗಳ ವಿಷಯದಲ್ಲಿ ಏನಾದರೂ ಮಾಡಬೇಕು ಎಂದು ವಾದಿಸಿದರು. ಕಾಂಗ್ರೆಸ್ ಒಳಗೇ ಸಾರ್ವಜನಿಕ ಅಭಿಪ್ರಾಯ ರೂಢಿಸಲು ಯತ್ನಿಸಿದರು. ಜೊತೆಗೇ ಅದು ಸತ್ಯಾಗ್ರಹಕ್ಕೆ ಸೂಕ್ತಕಾಲ ಎಂದೂ ಭಾವಿಸಿದರು. ಆದರೆ ಕಾಂಗ್ರೆಸ್ ನೇರ ಕಾರ್ಯಾಚರಣೆಗೆ ಸಿದ್ಧವಿರಲಿಲ್ಲ. ಆದ್ದರಿಂದ ಯಾವುದೇ ನೇರ ಕಾರ್ಯಾಚರಣೆ ಮಾಡಬೇಕಾದರೂ ಅದರ ಹೊಣೆ ಕಾಂಗ್ರೆಸ್ಸಿನ ಮೇಲೆ ಇರತಕ್ಕದ್ದಲ್ಲ. ಕಾಂಗ್ರೆಸ್ ನಿರ್ಣಯದಂತೆ ಘಟಿತವಾದ ಬೇರೊಂದು ಸಂಸ್ಥೆಯಲ್ಲಿ ಇರಬೇಕು ಎಂದು ಭಾವಿಸಿದರು. ಆ ರೀತಿಯಲ್ಲಿ ಇಡೀ ಕಾಂಗ್ರೆಸ್ಸೇ ನೈತಿಕವಾಗಿ ಚಳುವಳಿಯಲ್ಲಿ ಸೇರಿಕೊಂಡಂತೆ ಆಗುತ್ತದೆ.

ಕೆಲವೇ ಜನ ಸದಸ್ಯರಿದ್ದ ಒಂದು ಹೊಸ ಸಂಸ್ಥೆ-ಸತ್ಯಾಗ್ರಹ ಸಭಾ– ಎಂಬುದನ್ನು ಸ್ಥಾಪಿಸಲಾಯಿತು. ಆ ಸದಸ್ಯರು ಭಾರತದಲ್ಲಿ ಮೊತ್ತ ಮೊದಲನೆಯ ರಾಜಕೀಯ ಸತ್ಯಾಗ್ರಹಕ್ಕೆ ಹೊಣೆಗಾರರಾದರು, ಇದೇ 1919 ರ ಅಸಹಕಾರ ಚಳುವಳಿಯ ಆರಂಭ. ಈಗ ನಾವು ಅದರ ಇತಿಹಾಸಕ್ಕೆ ಹೋಗಬೇಕಾಗಿಲ್ಲ. ಆದರೆ ಒಂದು ಮುಖ್ಯ ಪ್ರಶ್ನೆ ಚರ್ಚೆಗೆ ಅರ್ಹವಾದುದು. ಗಾಂಧೀಜಿ ಖಿಲಾಫತ್‌ಗೆ ಬೆಂಬಲ ನೀಡಿದ್ದಾದರೂ ಏಕೆ?

ಅದೊಂದು ತಪ್ಪು ಹೆಜ್ಜೆ ಎಂದು ವೈಯಕ್ತಿಕವಾಗಿ ನನಗೆ ಅನಿಸುತ್ತದೆ. ಆದರೆ ಗಾಂಧೀಜಿ ಖಿಲಾಫತ್ತನ್ನು ಭಾರತದ ಒಂದು ರಾಷ್ಟ್ರೀಯ ಬೇಡಿಕೆಯನ್ನಾಗಿ ಮಾಡಿದ್ದೇಕೆ ಎಂದರೆ, ಬ್ರಿಟಿಷ್ ಪ್ರಭುತ್ವದ ವಿರುದ್ಧ ಹೋರಾಟದಲ್ಲಿ ಮುಸಲ್ಮಾನರನ್ನೂ ಒಳಪಡಿಸಬೇಕು ಎಂಬುದೇ ಆಗಿತ್ತು. ದುರದೃಷ್ಟವಶಾತ್, ಅವರು ಹಾಗೆ ಮುಸಲ್ಮಾನರಿಗೆ ಬೆಂಬಲವಿತ್ತ ಪ್ರಶ್ನೆ ನಿಂತಿದ್ದುದು ಹೊರ ದೇಶದ ಬಗೆಗಿನ ನಿಷ್ಠೆಯ ಮೇಲೆ. ಖಿಲಾಫತ್ ತಮ್ಮ ನಿಜವಾದ ನಾಯಕ, ನಿಜವಾದ ದೊರೆ ಎಂದೇ ಭಾರತದ ಮುಸಲ್ಮಾನರು ಭಾವಿಸಿದ್ದರು. ಆ ಕಾಲದ ಕೆಲವು ಖಿಲಾಫತ್ ನಾಯಕರ ಭಾಷಣಗಳಲ್ಲಿ, ಮುಸಲ್ಮಾನರು ಎಲ್ಲೇ ವಾಸಿಸಲಿ, ಖಿಲಾಫತ್ತೇ ಅವರ ನಿಜವಾದ ದೊರೆ ಎಂದು ಬಹಿರಂಗವಾಗಿಯೆ ಹೇಳಲಾಗಿದ್ದಿತು.

ಪರರಾಷ್ಟ್ರ ನಿಷ್ಠೆಯಿಂದ ಉದ್ಭವಿಸಿದ ಪ್ರಶ್ನೆಗೆ ಗಾಂಧೀಜಿ ಬೆಂಬಲಿಸಿದ್ದು ಸ್ಪಷ್ಟವಾಗಿ ತಪ್ಪು. ಪ್ರಖ್ಯಾತ ಇತಿಹಾಸಜ್ಞರ ಅಭಿಪ್ರಾಯವೂ ಇದೇ ಆಗಿದೆ. ಆದರೆ, ಒಂದು ವಿಷಯ ಎಷ್ಟೋ ಸಲ ಮರೆತುಹೋಗುತ್ತದೆ. ಏನೆಂದರೆ ಖಿಲಾಫತ್ತಿಗೆ ಬೆಂಬಲವಿತ್ತವರು ಗಾಂಧೀಜಿ ಒಬ್ಬರೇ ಅಲ್ಲ. ಈ ಕ್ಷಣ ನೆನಪಾಗುವ ಹೆಸರು ಬಾಲಗಂಗಾಧರ ತಿಲಕರದು. ಅವರು ಗಾಂಧೀಜಿಗೆ ಮುನ್ನವೇ ಖಿಲಾಫತ್‌ಗೆ ಬೆಂಬಲ ಸೂಚಿಸಿದ್ದರು. ಹಾಗೆ ಮಾಡಿದ ಇನ್ನೊಬ್ಬ ರಾಜಕಾರಣಿ ಬಿಪಿನ್ ಚಂದ್ರಪಾಲ್. ಭಾರತದ ರಾಷ್ಟ್ರೀಯ ಚಳುವಳಿಯ ಶಿಖರಪ್ರಾಯರಾದ ಈ ಇಬ್ಬರು ಹೇಗೆ



ಖಿಲಾಫತ್‌ಗೆ ಬೆಂಬಲ ಸೂಚಿಸಿದರು ಎನ್ನುವುದು ಊಹೆಗೂ ಕಷ್ಟವಾದುದು. ಆದರೆ ಅವರು ಬೆಂಬಲಿಸಿದರು. ತಿಲಕರು ನಾಯಕರಾಗಿದ್ದ ಕಾಂಗ್ರೆಸ್ ಡೆಮೊಕ್ರಾಟಿಕ್ ಪಕ್ಷದ ಪರವಾಗಿ ಹೇಳಿದ್ದು ಹೀಗೆ "ಖಿಲಾಫತ್ ಪ್ರಶ್ನೆಯು, ಮುಸ್ಲಿಮ್ ಸಿದ್ಧಾಂತಗಳು ಮತ್ತು ನಂಬಿಕೆಗಳು ಹಾಗೂ ಕುರಾನಿನ ಆದೇಶಗಳಿಗೆ ಅನುಸಾರವಾಗಿ ಇತ್ಯರ್ಥವಾಗಬೇಕೆಂಬ ಮುಸಲ್ಮಾನರ ಬೇಡಿಕೆಯನ್ನು ಈ ಪಕ್ಷ ಬೆಂಬಲಿಸುತ್ತದೆ." ಈ ಅಭಿಪ್ರಾಯಕ್ಕೆ ತಿಲಕರು ಸಮ್ಮತಿಸಿದ್ದು ಆಶ್ಚರ್ಯಕರ. ತಿಲಕರನ್ನು ಮೆಚ್ಚಿಕೊಳ್ಳುತ್ತಿದ್ದ ಜಯಕರ್ ಅವರು ಮುಂದೆ ಈ ಆಶ್ಚರ್ಯವನ್ನು ವ್ಯಕ್ತಪಡಿಸಿದರು. ಬಿಪಿನ್ ಚಂದ್ರಪಾಲರ ವಾದ ಸ್ವಲ್ಪ ಭಿನ್ನ ರೀತಿಯದು. ಅವರು ಹೇಳಿದರು, "ನಾನು ಈ ಚಳುವಳಿಯ ಜೊತೆಗೆ ನನ್ನನ್ನು ಗುರುತಿಸಿಕೊಳ್ಳುವುದು ಭಾವನಾತ್ಮಕ ಕಾರಣಕ್ಕಲ್ಲ, ಉನ್ನತ ರಾಜಕೀಯ ಕಾರಣಕ್ಕೆ. ಭಾರತ ರಾಷ್ಟ್ರದ ಭವಿಷ್ಯ ಹಾಗೂ ಸ್ವಾತಂತ್ರ್ಯ ನಿಂತಿರುವುದೇ ಹೆಚ್ಚು ಕಡಿಮೆ, ಬ್ರಿಟಿಷ್ ಸಾಮ್ರಾಜ್ಯದ ಉಳಿವು, ಏಕತೆ ಹಾಗೂ ಸ್ವಾತಂತ್ರ್ಯಗಳ ಮೇಲೆ." ತುರ್ಕಿ ಹೋಗಿ ಬಿಟ್ಟರೆ, ಪರ್ಷಿಯಾ, ಆಫ್‌ಘಾನಿಸ್ತಾನಗಳೂ ಕ್ರಮೇಣ ಕ್ರೈಸ್ತ ಪ್ರಭುತ್ವದ ವಿಸ್ತರಣೆಗೆ ಬಲಿಯಾಗಿ ಹೋಗುತ್ತವೆ ಎಂಬುದು ಅವರ ಆತಂಕ. ತುರ್ಕಿಯಂಥ ಇಸ್ಲಾಮೀ ರಾಜ್ಯ ಭಾರತಕ್ಕೂ ಪಶ್ಚಿಮಕ್ಕೂ ನಡುವೆ "ಕಡೆ ರಾಜ್ಯ" ವಾದೀತು. ಇಂದು, ನಲವತ್ತು ವರ್ಷಗಳು ಕಳೆದ ನಂತರ, ಈ ವಾದಗಳೆಲ್ಲ ಮನವೊಪ್ಪಿಸುವಂತೆ ಕಾಣುವುದೇ ಇಲ್ಲ.

ಆದರೆ ಖಿಲಾಫತ್ತಿನ ದೋಷಗಳನ್ನೆಲ್ಲ ಗಾಂಧೀಜಿಯ ತಲೆಗೆ ಕಟ್ಟಲಾಗಿದೆ. ಗಾಂಧೀಜಿಯ ವಾದ ಇದ್ದುದು, ಬ್ರಿಟಿಷರು ಮುಸಲ್ಮಾನರಿಗೆ ಮಾಡಿದ್ದ ಗಾಯಗಳನ್ನು ವಾಸಿಮಾಡಲು ಯತ್ನಿಸೋಣ ಎಂದು. ಕೆಲವಂಶಗಳಲ್ಲಿ ಅದೊಂದು ತಂತ್ರ ಕ್ರಮವೂ ಆಗಿತ್ತು. ಬ್ರಿಟಿಷ್ ಪ್ರಭುತ್ವದ ವಿರುದ್ಧ ಯುದ್ಧದಲ್ಲಿ ಮುಸಲ್ಮಾನರನ್ನು ಜೊತೆಗೂಡಿಸಿಕೊಳ್ಳಲು ಬೇರೆ ಯಾವ ದಾರಿಯೂ ಅವರಿಗೆ ಇದ್ದಂತಿರಲಿಲ್ಲ. ಬಹುಶಃ ಅದೊಂದು ತಂತ್ರ ದೋಷವೂ ಆಗಿತ್ತೇನೋ. ಏಕೆಂದರೆ ಆ ಪರರಾಜ್ಯ ನಿಷ್ಠೆಯಿಂದಲೇ ಪಾಕಿಸ್ತಾನ ಹುಟ್ಟಿದ್ದು, ಆದರೆ ಅದೇ ಬೇರೆ ಕತೆ.

ಈ ಮಧ್ಯೆ ಜಲಿಯನ್‌ವಾಲಾಬಾಗ್ ಹತ್ಯಾಕಾಂಡ ಮತ್ತು ಪಂಜಾಬಿನ ಕ್ರೌರ್ಯಗಳು ನಡೆದಿದ್ದವು. ತಪ್ಪುಗಳ ಮೇಲೆ ತಪ್ಪುಗಳನ್ನು ರಾಶಿ ಮಾಡಲಾಗಿತ್ತು. ಚೌರಿ-ಚೌರಾ ಬರುವವರೆಗೂ ಅಸಹಕಾರ ಚಳುವಳಿ ನಡೆಯಿತು. ಅದು ನಡೆದದ್ದು 1922 ರಲ್ಲಿ. ಇತರ ರಾಜಕೀಯ ನಾಯಕರ ಸಲಹೆಗೆ ವಿರುದ್ಧವಾಗಿ ಗಾಂಧೀಜಿ ಚಳುವಳಿಯನ್ನು ನಿಲ್ಲಿಸಿಬಿಟ್ಟರು. ಅವರು ಹಾಗೇಕೆ ಮಾಡಿದರೆಂಬುದನ್ನು ಅರ್ಥ ಮಾಡಿಕೊಳ್ಳುವುದು ಮುಖ್ಯ. ತಾವು ಹಿಂಸೆಗೆ ಹೆದರುವುದಿಲ್ಲ ಎಂದು ಗಾಂಧೀಜಿ ಸ್ಪಷ್ಟವಾಗಿ ಹೇಳಿದರು. ಅಲ್ಲಲ್ಲಿ ಹಿಂಸೆ ಸಂಭವಿಸಿದರೆ ಕ್ರಮ ಕೈಗೊಳ್ಳಬೇಕು. ಆದರೆ

ಹೆಚ್ಚು ಮುಖ್ಯವಾದ ವಿಷಯವೆಂದರೆ, ತಾವು ಯಾವ ಸಂಘಟನೆಯ ಮೂಲಕ ಕೆಲಸವಮಾಡುವರೋ ಆ ಸಂಸ್ಥೆ ತಾನು ತತ್ತ್ವಗಳನ್ನು ಗತ್ಯಂತರವಿಲ್ಲದೆ ಒಪ್ಪಿಕೊಂಡಿದ್ದರೂ ಸರಿಯೆ, ಆ ತತ್ತ್ವಗಳಿಗೆ ಬದ್ಧವಾಗಿರಬೇಕು. ವಾಸ್ತವವಾಗಿ ಒಮ್ಮೆ ಗಾಂಧೀಜಿ ಹೇಳಿದರು. ತಮಗೆ ಆಘಾತವಾದುದು ಜನರ ಗುಂಪಿನ ಹಿಂಸೆಯಿಂದ ಅಲ್ಲ, ಕಾಂಗ್ರೆಸ್ಸಿಗರು ಆರಂಭಿಸಿದ ಹಿಂಸೆಯಿಂದ ಎಂದು. ತಾವು ಕೆಲಸ ಮಾಡುವ ಸಂಘಟನೆ ತಮ್ಮ ಆದೇಶಕ್ಕೆ ಬದ್ಧವಾಗಿರದೆ ಹೋದರೆ, ಆಗ, ಯುದ್ಧ ಮುಂದುವರಿದಂತೆ, ಒಂದರ ಹಿಂದೊಂದು ಕದನ ನಡೆದಂತೆ, ಶಿಸ್ತಿಲ್ಲದ ಸಂಸ್ಥೆ ಕೊನೆಗೆ ಸೋತೇ ಸೋಲುವುದು. ಈ ಕಾರಣಕ್ಕಾಗಿಯೇ, ಅವರು ಚೌರಿ-ಚೌರಾ ನಂತರ ಚಳುವಳಿಯನ್ನು ನಿಲ್ಲಿಸಿದ್ದು.

ಈ ಮೊದಲನೆಯ ಸತ್ಯಾಗ್ರಹ ಚಳುವಳಿಯಲ್ಲಿ ಗಮನ ಹರಿಸಬೇಕಾದ ಇನ್ನೊಂದು ಅಂಶವೂ ಇದೆ. ಚಳುವಳಿಯನ್ನು ಆರಂಭಿಸುವ ಮುನ್ನ, ಪರಿಪೂರ್ಣ ಸತ್ಯಾಗ್ರಹಿಗಳ ತಂಡವನ್ನು ಮಾತ್ರ ಸೇರಿಸಿಕೊಳ್ಳಬೇಕು ಎನ್ನುವುದರಲ್ಲಿ ಗಾಂಧೀಜಿಗೆ ನಂಬಿಕೆ ಇರಲಿಲ್ಲ. ಜನ ಸಾಮಾನ್ಯರು ಹೇಗಿದ್ದಾರೋ ಹಾಗೆಯೇ ಅವರಿಂದ ಆರಂಭ ಮಾಡಬೇಕು ಎಂದು ಅವರು ಬಯಸಿದರು. ಅವರದು ಬೃಹತ್ ಸವಿನಯ ಕಾಯಿದೆ ಭಂಗದ ಸಂಘಟನೆ. ಈ ಉದ್ದೇಶಕ್ಕಾಗಿ ಅವರು ರೂಪಿಸಿದ ಕ್ರಮಗಳು ಪ್ರಗತಿಪರ ರೀತಿಯದಾಗಿದ್ದವು. ಹಾಗಾಗಿ, 1921ರ ಮೊದಲ ಸುತ್ತಿನ ಸತ್ಯಾಗ್ರಹದಲ್ಲಿ, ಸತ್ಯಾಗ್ರಹಿಗಳು ಕೆಲವೇ ತಿಂಗಳ ಸೆರೆವಾಸ ಅಥವಾ ಅಂಥದೇ ಕಷ್ಟಗಳಿಗೆ ಗುರಿಯಾಗುವುದಿತ್ತು.

ಈ ನಡುವೆ, ಗಾಂಧೀಜಿ ಹಳ್ಳಿಗಳಿಗೂ ಬಲೆ ಬೀಸಲು ಬಯಸಿದ್ದರು. ಸತ್ಯಾಗ್ರಹ ಸಿದ್ಧತೆಗೂ ಆರ್ಥಿಕ ವಿಕೇಂದ್ರೀಕರಣಕ್ಕೂ ನಡುವೆ ನಿಕಟ ಸಂಬಂಧವಿದೆ. ಕಾರ್ಯಕರ್ತರು ಹಳ್ಳಿಗಳಿಗೆ ಹೋಗಬೇಕು ಮತ್ತು ಅಲ್ಲಿ ಕ್ರಮೇಣ ವಿಕೇಂದ್ರೀಕರಣದ ಆಧಾರದ ಮೇಲೆ ಆರ್ಥಿಕ ಸಂಘಟನೆಯನ್ನು ಕಟ್ಟಬೇಕು ಎಂದು ಗಾಂಧೀಜಿ ಇಚ್ಛಿಸಿದ್ದರು. ಆದರೆ ಹಾಗೆ ಮಾಡಲು ಅವರು ಯತ್ನಿಸುತ್ತಿದ್ದಾಗ, ಕಾಂಗ್ರೆಸ್ ಬಹಳ ಚಿಂತೆಗೆ ಒಳಗಾಯಿತು. ನಮ್ಮ ಕಾಂಗ್ರೆಸ್ ನಾಯಕರು ಹೇಳಿದರು "ನೀವು ಏನು ಮಾಡುತ್ತಿದ್ದೀರಿ? ಹಳ್ಳಿಗಳಿಗೇಕೆ ಜನರನ್ನು ಕಳಿಸುತ್ತೀರಿ? ಸ್ವಯಂ ಸೇವಕರು ಚರಕ ನೂಲುವುದರಲ್ಲಿ ಹಾಗೂ ಅಪ್ರಯೋಜಕವಾದುದನ್ನು ನಿರ್ಮಿಸುವುದರಲ್ಲಿ ಏಕೆ ಕಾಲ ವ್ಯರ್ಥ ಮಾಡಬೇಕು?" ಆದರೆ, ನಾವು ನಿಜಕ್ಕೂ ಸತ್ಯಾಗ್ರಹಕ್ಕೆ ಸಿದ್ಧತೆ ಮಾಡುತ್ತಿದ್ದಲ್ಲಿ, ಆ ಸಿದ್ಧತೆ ಮಾಡಲೇಬೇಕು ಮತ್ತು ಅದನ್ನು ಬುದ್ಧಿಪೂರ್ವಕವಾಗಿ ಮಾಡಬೇಕು, ಯಾಂತ್ರಿಕವಾಗಿಯಲ್ಲ. ಆದರೆ ಅರೆಬರೆ ಮನಸ್ಸಿನಿಂದ, ಎಷ್ಟೋಸಲ ಬುದ್ಧಿ, ದಕ್ಷತೆ ಏನೂ ಇಲ್ಲದೆ ಯೋಜನೆ ನಡೆದವು. ಒಮ್ಮೆ ಒಬ್ಬ ರಾಜಕೀಯ



ಕಾರ್ಯಕರ್ತ, ಗಾಂಧೀಜಿಯ ಬಳಿಗೆ ಹೋಗಿ, "ಬಾಪು, ಜಮೀನುದಾರರ ಕ್ರೌರ್ಯಗಳ ವಿರುದ್ಧ ನಾವು ಹೋರಾಟ ಮಾಡಿದರೆ, ಜನ ಕೂಡಲೆ ಉತ್ಸಾಹಿತರಾಗುತ್ತಾರೆ. ಅಹಿಂಸೆಯಲ್ಲಿ ನಾವು ಗೆಲ್ಲಬೇಕಾದರೆ, ಇದರ ಸದುಪಯೋಗವನ್ನೇಕೆ ಮಾಡಿಕೊಳ್ಳಬಾರದು? ಎಂದು ನಾವು ಕಂಡುಕೊಂಡಿದ್ದೇವೆ" ಎಂದನು. "ನಿಮಗೆ ಆಸಕ್ತಿ ಇದ್ದರೆ, ಹಾಗೆಯೇ ಮಾಡಿ ಆದರೆ, ತಜ್ಞನಾಗಿ ನನ್ನ ಸಲಹೆ ಬೇರೆ" ಎಂದು ಗಾಂಧೀಜಿ ಉತ್ತರಿಸಿದರು. ಸಲಹೆ ಏನೆಂದರೆ, ನಮ್ಮ ಚಳುವಳಿಯ ಉದ್ದೇಶ, ಭಾರತವೆಲ್ಲ ಅದರಲ್ಲಿ ಭಾಗವಹಿಸುವಂತೆ ಇರಬೇಕು.

1930 ರಲ್ಲಿ ಇಡೀ ಭಾರತವನ್ನು ಉಪ್ಪಿನ ಸತ್ಯಾಗ್ರಹದಲ್ಲಿ ತೊಡಗಿಸಲು ಇದೇ ಕಾರಣ. ಕಾನೂನು ಭಂಗಕ್ಕೆ, ಇನ್ನಿತರ ಕಾನೂನುಗಳನ್ನು ಆರಿಸಿಕೊಳ್ಳಲು ಸಾಧ್ಯವಿರಲಿಲ್ಲ ಎಂದಲ್ಲ. ಅವರು ಆರಿಸಿದ್ದು ಅತಿ ಸಣ್ಣ ಕಾನೂನನ್ನು ಮತ್ತು ಅದು ಅತ್ಯಧಿಕ ಸಂಖ್ಯೆಯ ಜನ ಭಾಗವಹಿಸುವಂಥದು; ಇದೊಂದು ಅವರ ತಂತ್ರ. ಆಗ ಯಾರೋ ಒಬ್ಬರು ಅವರಿಗೆ ಸೂಚಿಸಿದರು, "ಭೂ ಕಾನೂನುಗಳನ್ನು ಏಕೆ ನೀವು ತೆಗೆದುಕೊಳ್ಳಬಾರದು? ಅಖಿಲ ಭಾರತ ಮಟ್ಟದಲ್ಲಿ ಏನನ್ನಾದರೂ ಮಾಡಬಾರದು?" ಅವರು ವಾಸ್ತವವಾಗಿ ಹೇಳಿದ ಮಾತು, ಬ್ರಿಟಿಷರೊಂದಿಗೆ ಹೋರಾಡುತ್ತಿರುವಾಗ, ಜಮೀನುದಾರರರೊಂದಿಗೆ ಸೆಣಸಾಡುವುದು ಬೇಡ; ಬ್ರಿಟಿಷರ ಬಲ ಮುರಿಯಿತೆಂದರೆ, ಜಮೀನುದಾರರು ನಿಲ್ಲಲೂ ಶಕ್ತರಾಗಿರುವುದಿಲ್ಲ!

ಮುಂದೆ1942ರಲ್ಲಿ ಇಂಥದೇ ಸನ್ನಿವೇಶ ಒದಗಿದಾಗ, ಗಾಂಧೀಜಿಯನ್ನು ಲೂಯಿ ಫಿಷರ್ ಕೇಳಿದರು "ಭಾರತ ಸ್ವತಂತ್ರವಾದ ನಂತರ, ಶ್ರೀಮಂತರು ಏನು ಮಾಡುತ್ತಾರೆ ಎನ್ನುವಿರಿ?" ಶ್ರೀಮಂತರು ಎಂದೂ ಬಡವರೊಂದಿಗೆ ಸಹಕರಿಸಿರಲಿಲ್ಲ, ಅವರು ತಮ್ಮಲ್ಲಿರುವ ಅಧಿಕಾರವನ್ನು ಎಂದಿಗೂ ಬಿಟ್ಟುಕೊಡುವುದಿಲ್ಲ." ಅವರು ಓಡಿ ಹೋಗುವುದರ ಮೂಲಕ, ಸಹಕಾರ ನೀಡುತ್ತಾರೆ. ಅವರಿಗೆ ತಮ್ಮದಾದ ಬಲ ಏನೂ ಇಲ್ಲ. ಏನಿದ್ದರೂ ಅವರು ತಮ್ಮ ಇರುವಿಕೆಗೆ ಬ್ರಿಟಿಷ್ ಪ್ರಭುತ್ವದ ಬಲವನ್ನು ನೆಚ್ಚಿಕೊಂಡವರು. ಇಂಗ್ಲೆಂಡಿನಲ್ಲಿ ಮಧ್ಯಮ ವರ್ಗದವರು ಹೊಡೆದಾಡಿ ಅಧಿಕಾರಕ್ಕೆ ಬಂದರು. ಭಾರತದಲ್ಲಾದರೋ ಮಧ್ಯಮ ವರ್ಗ, ಕೆಲವು ಶ್ರೀಮಂತರನ್ನೂ ಕೂಡ ಬ್ರಿಟಿಷರು ಸೃಜಿಸಿದ್ದೇ. ಆದ್ದರಿಂದ, ಬ್ರಿಟಿಷ್ ಅಧಿಕಾರ ಮುರಿಯಿತೆಂದರೆ, ಉಳಿದ ವಿಷಯಗಳ ಬಗ್ಗೆ ತಲೆಕೆಡಿಸಿಕೊಳ್ಳಬೇಕಾಗಿಲ್ಲ." ಇದು ಗಾಂಧೀಜಿಯ ಉತ್ತರ.

ನಾನು ಈ ಉದಾಹರಣೆಗಳನ್ನು ನಿಮ್ಮ ಮುಂದೆ ಇಟ್ಟಿರುವುದು ಎರಡು ಬಹುಮುಖ್ಯ ಕಾರಣಗಳಿಂದಾಗಿ. ಮೊದಲನೆಯದು, ಅವರ ವಿಧಾನದಲ್ಲಿ, ಆದಷ್ಟು ಹೆಚ್ಚು ಸಂಖ್ಯೆಯಲ್ಲಿ ಜನತೆಯನ್ನು ಒಳಗೂಡಿಸಿಕೊಳ್ಳುವುದು. ಎರಡನೆಯದಾಗಿ, ಸತ್ಯಾಗ್ರಹದಲ್ಲಿ ಪ್ರಗತಿಪರ ಕ್ರಮಗಳನ್ನು ಕೈಗೊಳ್ಳಬೇಕು. ಈ ಎರಡನೆಯ

ನಿಯಮವನ್ನು ಅವಶ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕು. ಏಕೆಂದರೆ, 1930ರಲ್ಲಿ ಅನುಭವಿಸಬೇಕಾಗಿ ಬಂದ ಕಷ್ಟ, 1921 ರಲ್ಲಿ ಅನುಭವಿಸಿದ್ದುದಕ್ಕಿಂತ ಬಹುಪಾಲು ತೀವ್ರವಾದುದಾಗಿತ್ತು. ಅನೇಕ ಜನ ಪಾಲುಗೊಂಡರು. 1930 - 32 ರ ಸವಿನಯ ಕಾಯಿದೆ ಭಂಗವನ್ನು ಅಡಗಿಸಲು ಬ್ರಿಟಿಷರು ಹೆಚ್ಚು ಬಲಪ್ರಯೋಗ ಮಾಡಬೇಕಾಯಿತು. ತಲೆಗಳು ಒಡೆದಾಗ, ಜನಕ್ಕೆ ಸೆರೆವಾಸದ ಭಯ, ಇನ್ನೂ ಕೆಟ್ಟ ಶಿಕ್ಷೆಯ ಭಯ ಬಿಟ್ಟುಹೋಯಿತು. 1921 ರಲ್ಲಿ ಮೂವತ್ತು ಸಾವಿರ ಜನ ಸೆರೆಗೆ ಹೋದರು, ಮುಂದಿನ ಚಳುವಳಿಯಲ್ಲಿ ಬಹುಶಃ ಇದಕ್ಕೆ ಎರಡರಷ್ಟು ಸಂಖ್ಯೆಯ ಜನ ಸೆರೆಗೆ ಹೋದರು. ಸರ್ಕಾರ ತನ್ನ ತಂತ್ರವನ್ನು ಬದಲು ಮಾಡಿತು. ಸಾಮೂಹಿಕ ತುಂಡುಗಂದಾಯವನ್ನು ವಿಧಿಸಿತು. ಇದು ಕೆಲವರನ್ನು ಗಾಬರಿಗೊಳಿಸಿತು. ಕೆಲವರು ಹಿಂದಕ್ಕೆ ಸರಿದರು. ಆದರೆ ಉಳಿದವರು ಮುನ್ನಡೆದೇ ನಡೆದರು.

ಆದರೆ ಆ ವೇಳೆಗೆ ಇನ್ನೊಂದು ಘಟನೆ ನಡೆದಿತ್ತು. ಸವಿನಯ ಕಾಯಿದೆ ಭಂಗ ಚಳುವಳಿಯಲ್ಲೇ ಒಂದು ಬಿಕ್ಕಟ್ಟು ಬಂದಿತ್ತು. ಮಾಮೂಲಿನಂತೆ ಸತ್ಯಾಗ್ರಹಿಗಳು ಒಂದು ಜೈಲಿನಿಂದ ಇನ್ನೊಂದು ಕಡೆಗೆ ಹೋದರು. ಭಾರತದಾದ್ಯಂತ, ಅದರಲ್ಲಿ ವಿಶೇಷವಾಗಿ ಬಂಗಾಳ, ಬೊಂಬಾಯಿ ಹಾಗೂ ಇತರ ಪ್ರಾಂತ್ಯಗಳಲ್ಲಿ ಪೋಲೀಸರನ್ನು ಧಿಕ್ಕರಿಸುವಲ್ಲಿ ಮಹಾಸಾಹಸ ವಿಜೃಂಭಿಸಿತು. ಆದರೆ ಹೆಚ್ಚು ಕಡಿಮೆ ಕೂಟಯುದ್ಧ(ಹಳ್ಳದಲ್ಲಿ ಇದ್ದು ಸೆಣಸುವುದು) ನಡೆದಿತ್ತು. ನಿರ್ಣಾಯಕ ಕ್ರಮದ ಸುಳಿವೇ ಇರಲಿಲ್ಲ.

ಆ ಪರಿಸ್ಥಿತಿಯಲ್ಲಿ, ಗಾಂಧೀಜಿ ಒಂದು ನಾಟಕೀಯ ಕ್ರಮವನ್ನು ಯೋಜಿಸಿದರು. ಸರ್ಕಾರಕ್ಕೆ ಸೇರಿದ್ದ ಉಪ್ಪಿನ ಕೋಠಿಗಳನ್ನು ಅಹಿಂಸಾ ರೀತಿಯಲ್ಲಿ ವಶಮಾಡಿಕೊಳ್ಳುವುದು. ಈ ಕಾರ್ಯಕ್ರಮವನ್ನು ಧರಸಾನಾ ಮತ್ತು ವಡಾಲಗಳಲ್ಲಿ ಆರಂಭಿಸಿದಾಗ ಹಿಂದೆಯೇ ದೇಶದಲ್ಲೆಲ್ಲ ಹೆಚ್ಚು ತೀವ್ರವಾದ ಸವಿನಯ ಶಾಸನ ಭಂಗ ನಡೆಯಿತು. ಕಾಲಕಳೆದಂತೆ ಜನ ಗೋಲೀಬಾರಿನ ಭಯವನ್ನು ಬಹುಪಾಲು ತ್ಯಜಿಸಿದರು. ಸತ್ಯಾಗ್ರಹದಲ್ಲಿ ಪ್ರಗತಿಪರ ನಡೆ ಇಂಥದೇ. ಈ ನಡುವೆ ಸವಿನಯ ಕಾಯಿದೆ ಭಂಗ ಚಳುವಳಿ ಕುಗ್ಗಲಾರಂಭಿಸಿತ್ತು. ಅಗತ್ಯವಾದ ಉತ್ಸಾಹ ಇಲ್ಲವಾಗುತ್ತಿದೆ ಎಂದು ಗಾಂಧೀಜಿ ಕಂಡರು. ಆಗ ಇನ್ನೊಂದು ಧೈರ್ಯದ ಹೆಜ್ಜೆ ಇಟ್ಟರು. ಕ್ರಮೇಣ ಹಿಮ್ಮೆಟ್ಟುವುದು! ಮೊದಮೊದಲು ಕಾಯಿದೆ ಭಂಗ ಆಯ್ದ ಸತ್ಯಾಗ್ರಹಿಗಳಿಗೆ ಸೀಮಿತವಾಗಿತ್ತು. ಕೆಲವು ವಾರಗಳ ನಂತರ "ಸತ್ಯಾಗ್ರಹವನ್ನು ನನ್ನೊಬ್ಬನಿಗೇ ಮಿತಿಗೊಳಿಸುತ್ತೇನೆ" ಎಂದರು.

ಈ ನಡುವೆ ಕಾಂಗ್ರೆಸ್ ಒಳಗಡೆ ಕೆಲವು ಇತರ ಘಟನೆಗಳು ಜರುಗುತ್ತಿದ್ದವು. ಕಾಂಗ್ರೆಸ್ ಸದಸ್ಯರು ತಾಳ್ಮೆಗೆಡುತ್ತಿದ್ದರು. "ಅಹಿಂಸೆಯೇ ಪರಮ ಪರೀಕ್ಷೆ ಎಂದು



ನೀವು ಹೇಳುವಿರಾದರೆ, ನೂಲು ತೆಗೆಯುವುದು ಸತ್ಯಾಗ್ರಹಿಯ ಪ್ರಮುಖ ಲಕ್ಷಣ ಎನ್ನುವಿರಾದರೆ, ನೀವು ಎಂದಾದರೂ ಭಾರತಕ್ಕೆ ಹೇಗೆ ರಾಜಕೀಯ ಸ್ವಾತಂತ್ರ್ಯವನ್ನು ಗಳಿಸಿಕೊಡುವಿರೊ ನಾವರಿಯೆವು" ಎಂದು ಅವರು ಹೇಳಿದರು. ಆದರೆ ನಾನು ನಿನ್ನೆ ಸೂಚಿಸಿದ ಹಾಗೆ, ಗಾಂಧೀಜಿಯವರ ವಿಚಾರ ಯಾವಾಗಲೂ ಜನರನ್ನು ಸಂಘಟಿಸುವುದು ಮತ್ತು ಜನ ಆರ್ಥಿಕ ಒತ್ತಡವನ್ನು ಎದುರಿಸಲು ಶಕ್ತಿ ಪಡೆದುಕೊಳ್ಳಲು ಜನರಿಗೆ ವಿಕೇಂದ್ರೀಕರಣದ ಮೂಲಕ ನೆರವಾಗುವುದು. ಇದು ವಾಸ್ತವವಾಗಿ ಎಷ್ಟು ಮಟ್ಟಿಗೆ ಸಾಧ್ಯವೋ ನಾನರಿಯೆ. ಆದರೆ, ಏನೇ ಆಗಲಿ ಬುದ್ಧಿ ಜೀವಿಗಳು ಮೆಲ್ಲನೆ ಗಾಂಧೀಜಿಯಿಂದ ದೂರಸರಿದರು. 1921ರ ಅಸಹಕಾರ ಚಳುವಳಿಯ ನಂತರ ಹಾಗೆ ದೂರವಾಗಿದ್ದ ಮೊದಲಿಗರಲ್ಲಿ ಒಬ್ಬರು ದೇಶಬಂಧು ಸಿ. ಆರ್. ದಾಸ್. ಅವರು ಒಂದು ಭಾಷಣದಲ್ಲಿ ಮುಖ್ಯವಾದ ವಿಚಾರವೊಂದನ್ನು ಹೇಳಿದರು. "ಕಾಯಿದೆ ಭಂಗ ಚಳುವಳಿಯ ಯಾವುದೇ ವ್ಯಾವಹಾರಿಕ ಆಚರಣೆಯಲ್ಲಿ ವಿಧಿಸಲಾಗಿರುವ ನಿರ್ಬಂಧಗಳ ಪರ ನಾನಿರಲಾರೆ. ನನ್ನ ಅಭಿಪ್ರಾಯದಲ್ಲಿ, ಕಾಂಗ್ರೆಸ್ಸು ಈ ನಿರ್ಬಂಧಗಳನ್ನು ತೆಗೆದು ಹಾಕಬೇಕು. ನಿಗದಿತವಾದ ಕಾನೂನುಗಳನ್ನು ಸವಿನಯವಾಗಿ ಮುರಿಯಬೇಕಾದರೆ, ಜನರಲ್ಲಿ ಕನಿಷ್ಠ ಶೇಕಡ 80ರಷ್ಟಾದರೂ ಶುದ್ಧ ಖಾದಿಧಾರಿಗಳಾಗಿರಬೇಕು ಎಂಬುದು ಹೇಗೆ ಅಗತ್ಯವೋ ಎಂಬುದನ್ನು ನಾನು ಅರ್ಥ ಮಾಡಿಕೊಳ್ಳಲಾಗಿಲ್ಲ. ಜನ ಸಾಮೂಹಿಕ ಶಾಸನೋಲ್ಲಂಘನೆಯೂ ನನಗೆ ಹಿಡಿಸದು. ನನ್ನ ಮನಸ್ಸಿಗೆ ಅದು ಅವ್ಯಾವಹಾರಿಕ ಎನಿಸುತ್ತದೆ."

ನಿಜಕ್ಕೂ ದೇಶಬಂಧು ನಮ್ಮ ಅತಿಶ್ರೇಷ್ಠ ರಾಷ್ಟ್ರ ನಾಯಕರಲ್ಲಿ ಒಬ್ಬರು. ಆದರೆ ಸಾಮೂಹಿಕ ಶಾಸನೋಲ್ಲಂಘನೆಯನ್ನು ಯಶಸ್ವಿಯಾಗಿ ನಡೆಸುವುದು ಸಾಧ್ಯವಿಲ್ಲ ಎಂದು ಭಾವಿಸಿದವರಲ್ಲಿ ಅವರೂ ಒಬ್ಬರು.

ಕಾಲ ಸರಿದಂತೆ, ಕಾಂಗ್ರೆಸ್‌ನಲ್ಲಿ ಧ್ರುವೀಕರಣ ನಿಚ್ಚಳವಾಯಿತು. 1939ರಲ್ಲಿ ಯುದ್ಧ ಆರಂಭವಾದಾಗ, ಗಾಂಧೀಜಿ, ಕಾಂಗ್ರೆಸ್ಸನ್ನು ಇನ್ನೊಮ್ಮೆ ತಮ್ಮ ಆದರ್ಶಗಳಿಗೆ ಅನುಸಾರವಾಗಿ ಸಂಘಟಿಸಲು ಒಂದು ಅತ್ಯಂತ ಮುಖ್ಯ ಹೆಜ್ಜೆಯನ್ನಿಟ್ಟರು. "ಮಹನೀಯರೇ, ಸಾಮಾಜಿಕ ಸಮಾನತೆ ಕುರಿತಂತೆ ನಿಮ್ಮ ವಿಚಾರ ಏನು ಎಂಬುದರ ಬಗ್ಗೆ ನೀವು ನಿರ್ಧರಿಸಬೇಕು. ಭಾರತದಲ್ಲಿ ಸಾಕಷ್ಟು ಬಲ ಮೈಗೂಡಿದಾಗ, ಸೇನೆಯ ಆವಶ್ಯಕತೆಯೇ ಇರುವುದಿಲ್ಲ. ಏಕೆಂದರೆ, ರಾಷ್ಟ್ರರಕ್ಷಣೆಗೆ ನಮ್ಮ ಮಾರ್ಗ ಸತ್ಯಾಗ್ರಹವಾಗಿರುತ್ತದೆ."

ಈ ಆದರ್ಶಗಳನ್ನು ವಿವರಿಸಲು 1939 ರಲ್ಲಿ ಅವರು ಯತ್ನಿಸಿದರು. ಸತ್ಯಾಗ್ರಹ ಮೂಲಕ ರಕ್ಷಣೆ ಎಂಬ ತಮ್ಮ ಯೋಜನೆಯಲ್ಲಿ, ತನ್ನದೇ ದೇಶದಲ್ಲಿ ಅಹಿಂಸೆಯ ಆರ್ಥಿಕತೆಯನ್ನು ರಚಿಸಿ ಸಾಮರ್ಥ್ಯ ಹೊಂದಬೇಕು. ಅದರ ಅರ್ಥ,

ಆರ್ಥಿಕ ಮತ್ತು ಸಾಮಾಜಿಕ ಸಮಾನತೆ ತರಲು ಧೃಡ ಪ್ರಯತ್ನ ಮಾಡಬೇಕು; ಹಾಗೆ ಸಾಕಷ್ಟು ಶಕ್ತಿ ಗಳಿಸಿದಾಗ, ಅದನ್ನು ಅಂತಾರಾಷ್ಟ್ರೀಯ ರಂಗದಲ್ಲಿ ವಿಸ್ತೃತವಾಗಿ ಪ್ರಯೋಗ ಮಾಡಬೇಕು. ಆದರೆ ಗಾಂಧೀಜಿಯವರ ಈ ಸಲಹೆಯನ್ನು ಒಪ್ಪಲು ಕಾಂಗ್ರೆಸ್‌ಗೆ ಸಾಧ್ಯವಾಗಲಿಲ್ಲ. ಆದ್ದರಿಂದ, ತಮ್ಮ ಷರತ್ತುಗಳಿಗೆ ಒಪ್ಪಲು ಸಾಧ್ಯವಿಲ್ಲವಾದರೆ, ಯಾವುದೇ ಚಳುವಳಿಯನ್ನು ನಡೆಸುವ ಜವಾಬ್ದಾರಿಯಿಂದಲೂ ತಮ್ಮನ್ನು ಬಿಡುಗಡೆ ಮಾಡಬೇಕೆಂದು ಅವರು ಇಚ್ಛಿಸಿದರು.

ಕತೆಯ ಮುಕ್ತಾಯಕ್ಕೆ ಬರೋಣ. ಯುದ್ಧಾನಂತರ, ನಾನಾಕಾರಣಗಳಿಂದಾಗಿ ಬ್ರಿಟಿಷರು ಭಾರತದೊಂದಿಗೆ ಒಪ್ಪಂದಕ್ಕೆ ಬರಬೇಕೆಂದು ಭಾವಿಸಿದರು. ದೀರ್ಘಯುದ್ಧದಿಂದಾಗಿ ಅವರು ಸಾಕಷ್ಟು ದುರ್ಬಲರಾಗಿದ್ದರು. ಆಜಾದ್ ಹಿಂದ್ ಫೌಜ್ ಸಂಘಟಿತವಾಗಿತ್ತು. ಈಗ ಬ್ರಿಟಿಷ್ ಸಾಮ್ರಾಜ್ಯದ ಹಿತಾಸಕ್ತಿಯನ್ನು ಎತ್ತಿಹಿಡಿಯಲು ಬ್ರಿಟಿಷ್ ಭಾರತೀಯ ಸೇನೆಗೆ ಹೇಳಿದರೆ, ಅವರು ಹಾಗೆ ಮಾಡುವುದು ಅಸಂಭವವಾಗಿತ್ತು. ಆಜಾದ್ ಹಿಂದ್ ಫೌಜ್‌ನಿಂದ ಸಾಮ್ರಾಜ್ಯ ಕಲಿತ ಪಾಠ ಅದು. ಸೈನಿಕ ದೃಷ್ಟಿಯಿಂದ ಆಜಾದ್ ಹಿಂದ್ ಫೌಜ್ ಕಾರ್ಯಾಚರಣೆ ಒಂದು ಸೋಲು. ಆದರೆ ರಾಜಕೀಯವಾಗಿ ಅದು ದೊಡ್ಡ ಗೆಲುವನ್ನು ಸಾಧಿಸಿತ್ತು. ಈ ನಡುವೆ, ತಾವು ಇಲ್ಲಿಂದ ಬಿಟ್ಟು ಹೋಗುವುದಾದರೆ, ಬ್ರಿಟಿಷರು ಯೋಚಿಸಿದರು,ಭಾರತವನ್ನು ಎರಡು ಅಥವಾ ಮೂರು ಹೋಳಾಗಿ ಒಡೆದು ಹೋಗಬೇಕು ಎಂದು. ಏಕೆಂದರೆ, ಆಗ ಭಾರತ ದುರ್ಬಲವಾಗುವುದು ಮತ್ತು ರಕ್ಷಣೆಯ ಉದ್ದೇಶಕ್ಕಾಗಿ ಬ್ರಿಟಿಷರ ಸಹಾಯವನ್ನೇ ಬೇಡಬೇಕಾಗಬಹುದು.

ಅವರು ಮುಖ್ಯವಾಗಿ ಅವಲಂಬಿಸಿದ್ದು ದೇಶೀಯ ರಾಜರುಗಳನ್ನು. ಆಗ 601ರಾಜರುಗಳಿದ್ದರು,ಅವರು ಸ್ವತಂತ್ರ ಸಾರ್ವಭೌಮ ರಾಷ್ಟ್ರಗಳಾಗಿ, ಬ್ರಿಟಿಷರಿಗೆ ಸಹಾಯ ಹಸ್ತ ನೀಡಲು ಸಿದ್ಧರಾಗಿದ್ದರು.

ಆ ಸನ್ನಿವೇಶದಲ್ಲೇ ಬ್ರಿಟಿಷ್ ಸರ್ಕಾರ ಭಾರತಕ್ಕೆ ಒಂದು ಸಂವಿಧಾನ ಸಭೆ ಇರಲಿ ಎಂದು ಸಲಹೆ ಮಾಡಿದ್ದು. ಅದು ನಮ್ಮದೇ ಆದ ಸಂವಿಧಾನವನ್ನು ರಚಿಸಬೇಕು. ಆ ಸಂವಿಧಾನಕ್ಕೆ ಬ್ರಿಟಿಷ್ ಸಂಸತ್ತು ಒಪ್ಪಿಗೆ ನೀಡುತ್ತದೆ. ಆದರೆ ಸಂವಿಧಾನ ಸಭೆಯನ್ನು ಒಪ್ಪಿಕೊಳ್ಳಬಾರದೆಂದು ಗಾಂಧೀಜಿ ಕಾಂಗ್ರೆಸ್‌ಗೆ ಹೇಳಿದರು. ಏಕೆಂದರೆ ಅದು ದೊರಕುವುದು ನಮ್ಮದೇ ಶಕ್ತಿಯ ಫಲವಾಗಿ ಅಲ್ಲ. ಕಾಂಗ್ರೆಸ್ಸು ಮತ್ತು ಮುಸ್ಲಿಮ್‌ಲೀಗ್‌ಗಳು ತಮ್ಮ ತಮ್ಮಲ್ಲೇ ಪರಸ್ಪರ ಒಪ್ಪಂದಕ್ಕೆ ಬರಲು ಆಗದಿರುವಾಗ, ಬ್ರಿಟಿಷರು ಅನುಗ್ರಹ ಮಾಡಿದಂತೆ ಆಗುತ್ತದೆ. ಮತ್ತೆ ಹೇಳಿದರು, "ಒಂದುವೇಳೆ ನೀವು ಬ್ರಿಟಿಷರ ಮನಃಪೂರ್ತಿಯ ಸಹಕಾರವಿರುವ ಸಂವಿಧಾನ ಸಭೆಯನ್ನು ಒಪ್ಪಿಕೊಂಡರೂ, ನೀವು ಬ್ರಿಟಿಷ್ ಸೇನೆಗಳ-ಅವು ಭಾರತೀಯ



ಆಗಿರಬಹುದು ಅಥವಾ ಯೂರೋಪಿಯನ್ ಆಗಿರಬಹುದು-ಆ ಸೇನೆಗಳ ಪ್ರತ್ಯಕ್ಷ ಅಥವಾ ಪರೋಕ್ಷ ರಕ್ಷಣೆಗೆ ಒಳಗಾಗಿರುತ್ತೀರಿ." 1946ರಲ್ಲಿ ಅವರು ಕಾಂಗ್ರೆಸ್ ಕಾರ್ಯಕಾರಿ ಸಭೆಗೆ ಸಲಹೆಮಾಡಿದ್ದು ಹೀಗೆ. ಇಂದು ನಾವು ಗಾಂಧೀಜಿಯ ವಿವೇಕವನ್ನು ಅರಿತುಕೊಳ್ಳುತ್ತಿದ್ದೇವೆ. ಏನೇ ಆಗಲಿ, ಗಾಂಧೀಜಿಯ ಅಭಿಪ್ರಾಯದಲ್ಲಿ ಇದ್ದುದು ಇನ್ನೊಂದು ಸತ್ಯಾಗ್ರಹ ಚಳುವಳಿ. ಆದರೆ ಕೆಲವು ಕಾಂಗ್ರೆಸ್ ನಾಯಕರು ಹೀಗೆ ವಾದಿಸಿದರು. "ನೀವು ನಮ್ಮ ಅಂದರೆ ಕಾಂಗ್ರೆಸ್ ಮುಖಾಂತರವೇ ಕೆಲಸ ಮಾಡಬೇಕು. ನಮ್ಮಲ್ಲಿ ಹೋರಾಟದ ಕಸುವು ಏನೂ ಉಳಿದಿಲ್ಲ ಎನಿಸುತ್ತದೆ." ಆಗ ಗಾಂಧೀಜಿ ಸ್ಪಷ್ಟವಾಗಿ ಅವರಿಗೆ ಹೇಳಿದರು, "ಹಾಗಿದ್ದ ಮೇಲೆ, ನಿಮಗೆ ಸರಿ ಎನಿಸಿದಂತೆ ಮಾಡಿ. ನಾನು ನಿವೃತ್ತನಾಗುತ್ತೇನೆ. ಜನ ತಮಗೆ ದೊರೆತದ್ದು ಹರುಕು ಮುರುಕು ಸ್ವಾತಂತ್ರ್ಯ ಎಂದು ಅರಿತುಕೊಳ್ಳಲಿ. ಆವರೆಗೂ ನಾನು ಕಾಯುತ್ತಿರುತ್ತೇನೆ."

ಅವರು ರಂಗಸ್ಥಳವನ್ನು ಭಾರತದ ಮಹಾನ್ ನಾಯಕರಿಗೆ ಬಿಟ್ಟುಕೊಟ್ಟರು. ಆ ನಾಯಕರು ಅಂತಿಮವಾಗಿ ಬ್ರಿಟಿಷರೊಂದಿಗೆ ಒಪ್ಪಂದ ಮಾಡಿಕೊಂಡರು. ಆ ಸಮಯದಲ್ಲಿ ಒಂದು ವಿಚಿತ್ರ ಘಟನೆ ನಡೆಯಿತು. ಗಾಂಧೀಜಿ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದರು. ಅದೇ ತಾನೇ ಲಾರ್ಡ್ ಮೌಂಟ್ ಬ್ಯಾಟನ್ ಅವರನ್ನು ಭೇಟಿ ಮಾಡಿ ಬಂದಿದ್ದರು. ರೈಲಿನಲ್ಲಿ ನಾನು ಅವರನ್ನು ಕಂಡೆ. ವೈಸ್‌ರಾಯ್ ಜೊತೆ ನಡೆದ ತಮ್ಮ ಮಾತುಕತೆಯನ್ನು ಹೇಳುವಾಗ ಅವರು ಕೋಪದಿಂದಲೇ ಹೇಳಿದರು. ಕಾಂಗ್ರೆಸ್ ಇನ್ನು ಮುಂದೆ ಗಾಂಧೀಜಿಯ ಜೊತೆಗೆ ಇರುವುದಿಲ್ಲ ಎಂದು ಲಾರ್ಡ್ ಮೌಂಟ್ ಬ್ಯಾಟನ್ ಹೇಳಿದರು ಎಂದು.

"ನೀವೇನು ಹೇಳಿದಿರಿ?" ನಾನು ಕೇಳಿದೆ.

"ಆದರೆ ಭಾರತ ಇನ್ನೂ ನನ್ನ ಜೊತೆಗೆ ಇದೆ ಎಂದೆ." ಇಡೀ ಭಾರತ ಕೋಮಲವಿಷ ಪೂರಿತವಾಗಿದೆ. ಹೆಚ್ಚು ಕಡಿಮೆ ಪ್ರತಿಯೊಬ್ಬನೂ, ಹಿಂದೂಗಳು-ಮುಸ್ಲಿಮರು ಬೇರೆ ಆಗಬೇಕು ಎಂದೇ ಕೇಳುತ್ತಿದ್ದಾರೆ. ಇದು ಅವರ ಭಾವನೆ ಆಗಿತ್ತು. ಕೆಲವು ತಿಂಗಳಲ್ಲೇ ಜನ ತಮ್ಮ ತಪ್ಪನ್ನು ಅರಿತುಕೊಂಡಾರು, ಆಗ ತಾವು ಮತ್ತೆ ರಂಗಕ್ಕೆ ಬರಲು ಸಕಾಲವಾದೀತು- ಇದು ಅವರ ಆಶಯವಾಗಿತ್ತು.

ಸ್ವಾತಂತ್ರ್ಯ ಬಂದನಂತರ, ಗಾಂಧೀಜಿ ಕೆಲವು ತಿಂಗಳು ಜೀವಿಸಿದ್ದರಲ್ಲಿ, ಮತ್ತೆ ಭಾರತದ ಜನತೆಯ ಬಳಿಗೆ ಮರಳಲು ಅವರ ಮನಸ್ಸು ತುಡಿಯುತ್ತಿತ್ತು. ಆದ್ದರಿಂದಲೇ, ಅವರ ನಿಧನಕ್ಕೆ ನಾಲ್ಕು ದಿನ ಮೊದಲು, ಜನವರಿ 26 ರಂದು, ಅವರು ತಮ್ಮ ಅಂತಿಮ ಪತ್ರ(ಉಯಿಲು)ವನ್ನು ಬರೆದಿಟ್ಟರು. ಅದರಲ್ಲಿ, ಕಾಂಗ್ರೆಸ್ಸನ್ನು ವಿಸರ್ಜಿಸಬೇಕು, ಅದರ ಕಾರ್ಯ ಮುಗಿದಿದೆ, ಅದು ತಾನಾಗಿಯೇ ವಿಸರ್ಜನೆಗೊಳ್ಳಬೇಕು. ಸಾಮಾಜಿಕ ಮತ್ತು ಸಾಂಸ್ಕೃತಿಕ ಸಮಾನತೆಯೇ ಭಾರತದ

ನಿಜವಾದ ಸ್ವಾತಂತ್ರ್ಯ. ಅದನ್ನು ಕಟ್ಟಲು ಕಾಂಗ್ರೆಸ್ ಕಾರ್ಯಕರ್ತರಿಗೆ ಇದು ಸಕಾಲ ಎಂದು ಬರೆದರು.

❖ ❖ ❖ ❖